

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 2 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 255 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಹೊಸ ವರ್ಷಾಚರಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಮತ್ತೇರಿಸಿಕೊಂಡವರ ಸಂಖ್ಯೆ ಇಳಿಮುಖ!

- ಕಳೆದ ಬಾರಿಗೆ ಹೋಲಿಸಿದರೆ ಮದ್ಯ ಮಾರಾಟದಲ್ಲಿ 10.98 ಕೋಟಿ ಕುಸಿತ
- 'ಡ್ರಂಕ್ ಅಂಡ್ ಡ್ರೈವ್' ಭೀತಿಯೋ... ಕಡಿಮೆ ಖರ್ಚಲ್ಲಿ ಮತ್ತೇರಿಸಿಕೊಳ್ಳುವ ಮಾರ್ಗವೋ...!
- ಆದರೆ, ಡಿ.1ರಿಂದ 31ರವರೆಗೆ 121 ಕೋಟಿ ಮದ್ಯ ಮಾರಾಟ ದಾಖಲೆ

ಮೈಸೂರು, ಜ.1(ಎಂಟಿವೈ)– ಕುಡಿದು ವಾಹನ ಚಾಲನೆಗೆ ಕಡಿವಾಣ ಹಾಕಲು ಪೊಲೀಸರು 'ಡ್ರಂಕ್ ಅಂಡ್ ಡ್ರೈವ್' ತಪಾಸಣೆಗೆ ಮುಂದಾಗುತ್ತಾರೆಂಬ ಭಯದಿಂದಲೋ ಏನೋ ಈ ಬಾರಿ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಮತ್ತೇರಿಸಿಕೊಳ್ಳುವವರ ಸಂಖ್ಯೆ ಇಳಿಮುಖವಾಗಿದೆ. ಮದ್ಯ ಮಾರಾಟದಲ್ಲಿ ಗಣನೀಯ ಕುಸಿತ ಕಂಡಿದೆ. ಕಳೆದ ವರ್ಷ ಡಿಸೆಂಬರ್ 31 ರಂದು 80.43 ಕೋಟಿ ರೂ. ಮೌಲ್ಯದ ಮದ್ಯ ಮಾರಾಟವಾಗಿದ್ದರೆ, ಈ ವರ್ಷ ಅದು 69.45 ಕೋಟಿ ರೂಗೆ ಇಳಿದಿದೆ. ಹಾಗಾಗಿ 10.98 ಕೋಟಿ ರೂ. ಮದ್ಯದ ಮಾರಾಟ ಕುಸಿದಿದೆ. ಆದರೆ ಡಿಸೆಂಬರ್ 1ರಿಂದ 31ರವರೆಗೆ 121 ಕೋಟಿ ರೂ. ಮೌಲ್ಯದ ಮದ್ಯ ದಾಖಲೆಯ ಮಾರಾಟವಾಗಿದೆ.

ಕುಡಿದು ವಾಹನ ಚಾಲನೆ ಮಾಡುವವರ ವಿರುದ್ಧ ಡಿ.24ರಿಂದಲೇ ಮೈಸೂರು ನಗರ ಸಂಚಾರ ಪೊಲೀಸರು 'ಡ್ರಂಕ್ ಅಂಡ್ ಡ್ರೈವ್' ತಪಾಸಣೆ ಆರಂಭಿಸಿದ್ದರು. ಅಲ್ಲದೆ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮದ್ಯಪಾನ ಮಾಡಿ ವಾಹನ ಚಲಾಯಿಸದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರು. ಹಾಗಾಗಿ ಮದ್ಯಪಾನಿಗಳಲ್ಲಿ ಕೆಲವರು ಈ ತಂಟೆ–ತಕರಾರೇ ಬೇಡ ಎಂದು ನಿರ್ಧರಿಸಿ, ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮದ್ಯಪಾನ ತ್ಯಜಿಸಿದಂತೆ ಕಂಡು ಬರುತ್ತಿದೆ. ಹಾಗಾಗಿ ಕಳೆದ ವರ್ಷಕ್ಕಿಂತ ಈ ಬಾರಿ 70,02,691 ರೂ ಮೌಲ್ಯದ 25,249.43 ಲೀಟರ್ ಮದ್ಯ(ಐಎಂಎಲ್) ಹಾಗೂ 39,77,974 ರೂ. ಮೌಲ್ಯದ 21,163.98 ಲೀಟರ್ ಬಿಯರ್ ವ್ಯಾಪಾರ ಕಡಿಮೆಯಾಗಿದೆ.

ಒಂದೇ ದಿನ 69.45 ಕೋಟಿ ಮದ್ಯ ಮಾರಾಟ: 2025ರ ಡಿ.31ರಂದು ಮೈಸೂರು ಜಿಲ್ಲೆಯ ವಿವಿಧ ■ 6ನೇ ಪುಟಕ್ಕೆ



ಫೈಲ್ ಚಿತ್ರ

ಡ್ಯೂಟಿ ಟ್ಯಾಕ್ಸ್, ಗಾಂಜಾ, ಅಫೀಮು ಹೆಚ್ಚಾಗಿದೆ

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಹೊಸ ವರ್ಷದ ಸಂಭ್ರಮಾಚರಣೆಗೆ ಬಳಸುತ್ತಿದ್ದ ಮದ್ಯದಲ್ಲಿ ಶೇ.35ರಷ್ಟು ಕಡಿಮೆ ವಹಿವಾಟಾಗಿದೆ. 1.94 ಲಕ್ಷ ಬಾಕ್ಸ್ ಸೇಲಾಗಿದೆ. 87 ಸಾವಿರ ಬಾಕ್ಸ್ ಬಿಯರ್ ಮಾರಾಟವಾಗಿದೆ. ಬಿಯರ್‌ನಲ್ಲಿ ಶೇ.27ರಷ್ಟು, ಐಎಂಎಲ್ ಮದ್ಯದ ಪ್ರಮಾಣ ಶೇ.35ರಷ್ಟು ಕಡಿಮೆಯಾಗಿದೆ. ಇದಕ್ಕೆ ಡ್ಯೂಟಿ(ಟ್ಯಾಕ್ಸ್) ಹೆಚ್ಚಾಗಿರುವುದರಿಂದ ಜನ ಮದ್ಯ ಖರೀದಿಸಲು ಹಿಂದೇಟು ಹಾಕಿರಬಹುದು. ಡ್ಯೂಟಿ ಟ್ಯಾಕ್ಸ್ ಹೆಚ್ಚಾಗಿರುವುದರಿಂದ ದುಬಾರಿ ಬೆಲೆ ಮದ್ಯ ಕುಡಿಯುತ್ತಿದ್ದವರು ಕಡಿಮೆ ಬೆಲೆಯ ಮದ್ಯ ಸೇವಿಸುವುದಕ್ಕೆ ಮುಂದಾಗುತ್ತಿದ್ದಾರೆ. ಇದರೊಂದಿಗೆ ಗಾಂಜಾ, ಡ್ರಗ್ಸ್, ಅಫೀಮು ಹಾವಳಿ ಹೆಚ್ಚಾಗಿದೆ. 10 ರೂ, 20 ರೂಗೆ ನಶೆಯಲ್ಲಿ ತೇಲಾಡುವ ವಸ್ತು ಸಿಗುತ್ತಿರುವುದರಿಂದ ಕೆಲವರು ಮದ್ಯ ಸೇವನೆಯಿಂದ ದೂರ ಸರಿದಿದ್ದಾರೆ. ಈ ಕಾರಣದಿಂದ ಮದ್ಯ ಮಾರಾಟ ಕಡಿಮೆಯಾಗುತ್ತಿದೆ. ಈ ಬೆಳವಣಿಗೆ ಕೇವಲ ಮೈಸೂರಿಗೆ ಮಾತ್ರ ಸೀಮಿತವಾಗದೇ ರಾಜ್ಯದಾದ್ಯಂತ ಇದೆ.

– ಎಸ್.ಗುರುಸ್ವಾಮಿ, ರಾಜ್ಯಾಧ್ಯಕ್ಷರು, ಫೆಡರೇಷನ್ ಆಫ್ ವೈನ್ ಮರ್ಚೆಂಟ್ ಅಸೋಸಿಯೇಷನ್

ಗಣರಾಜ್ಯೋತ್ಸವಕ್ಕೆ ರಾಜ್ಯ ರಾಜಕಾರಣದಲ್ಲಿ ಅಚ್ಚರಿ ಬೆಳವಣಿಗೆ!?

■ ಪೊಲೀಸ್ ಅಧಿಕಾರಿಗಳೊಂದಿಗೆ ಉಪಹಾರ ಕೂಟದಲ್ಲಿ ಗೃಹ ಸಚಿವ ಡಾ. ಪರಮೇಶ್ವರ್ ಸುಳಿವು ■ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಎಲ್ಲಾ ನಿಂತಿದೆ



ಬೆಂಗಳೂರು, ಜ.1(ಕೆಎಂಶಿ)– ಗಣರಾಜ್ಯೋತ್ಸವ ದಿನದಂದೇ (ಜನವರಿ–26) ರಾಜ್ಯ ರಾಜಕೀಯದಲ್ಲಿ ಅಚ್ಚರಿ ಬದಲಾವಣೆಯ ನಿರೀಕ್ಷೆ ಬಗ್ಗೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಇಂದಿಲ್ಲಿ ಸುಳಿವು ನೀಡಿದ್ದಾರೆ.

ಯಾರಿಗೆ ಪದೋನ್ನತಿಯಾಗುತ್ತದೆಂಬೋ ತಿಳಿಯದು. ವರಿಷ್ಠರು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಎಲ್ಲವೂ ನಿಂತಿದೆ ಎಂದು ಹೇಳಿದ್ದಾರೆ.


ಹೊಸ ವರ್ಷ ಆರಂಭದ ದಿನವಾದ ಇಂದು ತಮ್ಮ ಸರ್ಕಾರಿ ನಿವಾಸದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಉಪಹಾರ ಕೂಟದಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ್, ಈ ಬಾಂಬ್ ಸಿಡಿಸಿದ್ದಾರೆ. ಅಧಿಕಾರ ಹಸ್ತಾಂತರ ಮತ್ತು ತಮಗೆ ಪದೋನ್ನತಿ ಇಲ್ಲವೇ ಎಂಬ ಪ್ರಶ್ನೆಗೆ ಗಣರಾಜ್ಯೋತ್ಸವದ ದಿನಾಂಕವನ್ನು ಬಹಿರಂಗಪಡಿಸಿದ್ದಲ್ಲದೆ, ರಾಜಕಾರಣ ಎಂದ ಮೇಲೆ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ತಲುಪುವ ಬಯಕೆ ಇದ್ದೇ ಇರುತ್ತದೆ.

ರಾಜಕೀಯಕ್ಕೆ ಬಂದ ನಂತರ ಶಾಸಕನಾಗಬೇಕೆಂದು, ಜನಪ್ರತಿನಿಧಿಯಾಗುತ್ತಿದ್ದಂತೆ ಮಂತ್ರಿಯಾಗಬೇಕೆಂದು, ನಂತರ ಮುಖ್ಯಮಂತ್ರಿಯೂ ಆಗಬೇಕೆಂಬ ಹಂಬಲ ಎಲ್ಲರಿಗೂ ಇರುತ್ತದೆ. ಅದೇ ರೀತಿ ನನಗೂ ಇದೆ ನೋಡೋಣ, ಜನವರಿ 26ಕ್ಕೆ ವರಿಷ್ಠರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಎಲ್ಲವೂ ಅದರ ಮೇಲೆ ನಿಂತಿದೆ ಎಂದ ಪರಮೇಶ್ವರ್, ಹೆಚ್ಚಿನ ಮಾಹಿತಿ ನೀಡಲು ನಿರಾಕರಿಸಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಎರಡೂವರೆ ವರ್ಷ ಅವಧಿ ಪೂರ್ಣಗೊಂಡು ನವೆಂಬರ್ 20 ರಿಂದಲೇ ಅಧಿಕಾರ ಹಸ್ತಾಂತರ ವಿಷಯ ತಾರಕಕ್ಕೇರಿದೆ. ಅಧಿಕಾರ ಹಸ್ತಾಂತರ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಬಹಿರಂಗವಾಗಿಯೇ ತಮ್ಮ ತಮ್ಮ ನಾಯಕರನ್ನು ಬೆಂಬಲಿಸುವ ಕಾರ್ಯ ನಡೆದಿದೆ ಸಿದ್ದರಾಮಯ್ಯ ತಮ್ಮ ಅಧಿಕಾರ ಉಳಿಸಿಕೊಳ್ಳಲು, ಡಿ.ಕೆ. ಶಿವಕುಮಾರ್ ಪದೋನ್ನತಿ ಪಡೆಯಲು ತೆರೆಮರೆಯಲ್ಲೇ ಕಸರತ್ತು ನಡೆಸಿರುವ ಸಂದರ್ಭದಲ್ಲೇ ಗೃಹ ಸಚಿವರು ಬಾಂಬ್ ಸಿಡಿಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಎಡೆಮಾಡಿದೆ.

ಸುಗಮ ಸಂಭ್ರಮಾಚರಣೆ : ರಾಜ್ಯಾದ್ಯಂತ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಿದ್ದಕ್ಕೆ ಸಂತಸ ವ್ಯಕ್ತಪಡಿಸಿದ್ದಲ್ಲದೆ, ಸಾರ್ವಜನಿಕರು ಪೊಲೀಸರೊಂದಿಗೆ ಕೈಜೋಡಿಸಿದ್ದರಿಂದ ಸುಗಮವಾಗಿ ಸಂಭ್ರಮಾಚರಣೆ ನಡೆಯಿತು ಎಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಫೆ.1ರಿಂದ ಬಾಯಿ ಸುಡಲಿದೆ ಸಿಗರೇಟ್



ಪಾನ್ ಮಸಾಲವೂ ದುಬಾರಿ

ನವದೆಹಲಿ, ಜ.1– ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚುವರಿ ಅಬಕಾರಿ ಸುಂಕ ಮತ್ತು ಪಾನ್ ಮಸಾಲದ ಮೇಲೆ ಹೊಸ ಸೆಸ್ ವಿಧಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ಹೊಸ ತೆರಿಗೆ ಮತ್ತು ಸೆಸ್‌ಗಳು ಫೆಬ್ರವರಿ 1ರಿಂದ ಜಾರಿಗೆ ಬರಲಿದ್ದು, ಸಿಗರೇಟ್, ಬೀಡಿ, ಪಾನ್ ಮಸಾಲಗಳ ಬೆಲೆಯೂ ಏರಿಕೆಯಾಗಲಿದೆ.

ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸಿದ್ದು ಇದರ ಪ್ರಕಾರ, ತಂಬಾಕು ಮತ್ತು ಪಾನ್ ಮಸಾಲದ ಮೇಲಿನ ಹೊಸ ಸುಂಕಗಳು ಜಿಎಸ್‌ಟಿ ದರಕ್ಕಿಂತ ಹೆಚ್ಚಿರುತ್ತವೆ. ಪ್ರಸ್ತುತ, ಈ ಮಾದಕ ಸರಕುಗಳ ಮೇಲೆ ವಿಧಿಸಲಾಗುತ್ತಿರುವ ಪರಿಹಾರ ಸೆಸ್ ಹೆಚ್ಚಾಗಲಿದೆ. ಪಾನ್ ಮಸಾಲ, ಸಿಗರೇಟ್, ತಂಬಾಕು ಮತ್ತು ಅಂತಹ ಮಾದಕ ಉತ್ಪನ್ನಗಳ ಮೇಲೆ ಶೇ. 40ರಷ್ಟು ಜಿಎಸ್‌ಟಿ ವಿಧಿಸಲಾಗುತ್ತದೆ. ಜೊತೆಗೆ, ಪಾನ್ ಮಸಾಲದ ಮೇಲೆ ಆರೋಗ್ಯ ಮತ್ತು ■ 6ನೇ ಪುಟಕ್ಕೆ



SITE FOR SALE
40x60, ROOPA NAGAR LAYOUT, NORTH FACING, EXCELLENT LOCATION, WELL DEVELOPED AREA, GENUINE BUYERS ONLY, BROKERS EXCUSE, 1.55 CRS, CONTACT
7026500097



ಅಧಿಕಾರ ಹಸ್ತಾಂತರ ಗೊಂದಲದ ನಡುವೆಯೇ ಸಿಎಂ ಆಗಿ ಸಾವಿರ ದಿನ ಪೂರೈಸಿದ ಸಂಭ್ರಮಾಚರಣೆ

ಫೆಬ್ರವರಿಯಲ್ಲಿ ಬಜೆಟ್ ಮಂಡನೆ ಜೊತೆಗೆ ಬೃಹತ್ ಸಮಾವೇಶಕ್ಕೆ ಸಿದ್ದರಾಮಯ್ಯ ಸಿದ್ಧತೆ !

- ಕೃಷ್ಣಬೈರೇಗೌಡ, ಜಮೀರ್ ಅಹಮದ್‌ಗೆ ಇದರ ಉಸ್ತುವಾರಿ
- ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಆಹ್ವಾನಿಸಲು ತೀರ್ಮಾನ



ಬೆಂಗಳೂರು, ಜ.1 (ಕೆಎಂಶಿ)– ಅಧಿಕಾರ ಹಸ್ತಾಂತರ ವಿಚಾರ ರಾಜ್ಯ ಕಾಂಗ್ರೆಸ್ಸಿನಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಬೆನ್ನಲ್ಲೇ ಸಿದ್ದರಾಮಯ್ಯ ಎರಡನೇ ಅವಧಿಗೆ ಮುಖ್ಯಮಂತ್ರಿ ಆಗಿ ಒಂದು ಸಾವಿರ ದಿನ ಪೂರೈಸಿದ ಸಂಭ್ರಮಾಚರಣೆಯ ಸಿದ್ಧತೆಯಲ್ಲಿ ತೊಡಗಿದ್ದಾರೆ.


ಬರುವ ಫೆಬ್ರವರಿಗೆ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದು ಸಾವಿರ ದಿನ ಪೂರ್ಣವಾಗಲಿದೆ. ಅದೇ ದಿನ ವಿಧಾನಸಭೆ ಬಜೆಟ್ ಮಂಡಿಸಲು ಸಿದ್ಧತೆ ನಡೆಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಜೆಟ್ ಮಂಡನೆ ಬಳಿಕ ಬೃಹತ್ ಸಮಾವೇಶ ನಡೆಸಲು ತೀರ್ಮಾನಿಸಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಸಮಾವೇಶ ನಡೆಸುವ ಮೂಲಕ ರಾಜ್ಯ ಸರ್ಕಾರದ ಒಂದು ಸಾವಿರ ದಿನಗಳ ಸಾಧನೆಯ ಸಂಭ್ರಮಾಚರಣೆ ಮಾಡಲು ಸಿದ್ಧತೆ ನಡೆಸಿದ್ದಾರೆ. ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ವಯನಾಡು ಸಂಸದರಾಗಿರುವ ಪ್ರಿಯಾಂಕ ಗಾಂಧಿ ಅವರನ್ನು ಈ ಸಮಾವೇಶಕ್ಕೆ ಆಹ್ವಾನಿಸಲು ಚಿಂತನೆ ನಡೆಸಿದ್ದಾರೆ. ಈ ಇಬ್ಬರು ನಾಯಕರು ಚುನಾವಣೆ ಸಮಯದಲ್ಲಿ ರಾಜ್ಯದ ಗ್ಯಾರಂಟಿ ಯೋಜನೆಗಳನ್ನು ಪ್ರಕಟ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಇಬ್ಬರನ್ನು ಸಾವಿರ ದಿನದ ಸಮಾವೇಶಕ್ಕೆ ಆಹ್ವಾನಿಸಿ, ರಾಜ್ಯದ ಜನತೆಯ ಪರವಾಗಿ ಸನ್ಮಾನ ಮಾಡಲು ತೀರ್ಮಾನಿಸಿದ್ದಾರೆ. ಅದೇ ರೀತಿ ಸರ್ಕಾರವನ್ನು ಅಸ್ತಿತ್ವಕ್ಕೆ ತಂದ ರಾಜ್ಯದ ಜನರಿಗೆ ಕೃತಜ್ಞತೆ ಅರ್ಪಿಸುವುದು ಹಾಗೂ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಯಾವ ಯೋಜನೆಗಳನ್ನು ಜಾರಿಗೆ ತರಲಿದೆ ಎಂಬ ವಿಷಯಗಳನ್ನು ಪ್ರಕಟಿಸಲಿದ್ದಾರೆ.

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಕೃತಜ್ಞತಾ ಸಮಾವೇಶ ಏರ್ಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಚಿಂತನೆ ನಡೆಸಿದ್ದರು. ಆದರೆ ಅದಕ್ಕೆ ಸಮಯ ಮತ್ತು ಕೆಲವಾರು ವಿಷಯಗಳು ಅಡ್ಡಿ ಬಂದ ಹಿನ್ನೆಲೆಯಲ್ಲಿ ಅದನ್ನು ಮಾಡಲು ■ 6ನೇ ಪುಟಕ್ಕೆ

ಮೈಸೂರಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯ ಮನೆಗಳ ಫಲಾನುಭವಿಗಳಿಗೆ ಶೀಘ್ರ ಮಂಜೂರಾತಿ ಪತ್ರ

ಆಯಾಯ ಕ್ಷೇತ್ರದ ಶಾಸಕರಿಗೆ ಫಲಾನುಭವಿಗಳ ಆಯ್ಕೆ ಅಧಿಕಾರ



ಮೈಸೂರು, ಜ.1– ಮೈಸೂರಿನಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ನಿರ್ಮಿಸಲಾಗುತ್ತಿರುವ ಗುಂಪು ಮನೆಗಳಿಗೆ ಅರ್ಜಿ ಹಾಕಿ, ತಮ್ಮ ಪಾಲಿನ ವಂತಿಗೆ ಪಾವತಿಸಿರುವ ಫಲಾನುಭವಿಗಳಿಗೆ ಇನ್ನೆರಡು ವಾರದಲ್ಲಿ ಮಂಜೂರಾತಿ ಪತ್ರ ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಕೃಷ್ಣರಾಜ, ವರುಣ ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 1,700ಕ್ಕೂ ಹೆಚ್ಚು ಫಲಾನುಭವಿಗಳು ಮೊದಲ ಹಂತದ ಸಂಪೂರ್ಣ ವಂತಿಗೆ ಪಾವತಿಸಿದ್ದು, ಬ್ಯಾಂಕ್ ಸಾಲ ಸೌಲಭ್ಯಕ್ಕೆ ಅಗತ್ಯವಾಗಿರುವ ಮನೆ ಮಂಜೂರಾತಿ ಪತ್ರ ವಿತರಿಸಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಈಗಾಗಲೇ ನಗರ ಆಶ್ರಯ ವಸತಿ ಸಮಿತಿಗಳ ಅಧ್ಯಕ್ಷರಾಗಿರುವ ಆಯಾ ಕ್ಷೇತ್ರದ ಶಾಸಕರುಗಳಿಗೆ ಮಂಜೂರಾತಿ ಪತ್ರಗಳನ್ನು ತಲುಪಿಸಿದ್ದು, ಅವರು ಫಲಾನುಭವಿಗಳಿಗೆ ವಿತರಿಸುವ ದಿನಾಂಕ ನಿಗದಿಗೊಳಿಸಬೇಕಿದೆ.

ಎರಡು ಕಡೆ ಯೋಜನೆ: ಆರ್ಥಿಕ ದುರ್ಬಲ ವರ್ಗಕ್ಕೆ ಕಡಿಮೆ ದರದಲ್ಲಿ ಸೂರು ಕಲ್ಪಿಸುವ ಮಹತ್ವಾಕಾಂಕ್ಷೆಯಿಂದ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಮೈಸೂರಿನ ಎರಡು ಕಡೆ ಗುಂಪು ಮನೆಗಳನ್ನು ನಿರ್ಮಿಸಲಾಗುತ್ತಿದೆ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅರ್ಹರಿಗಾಗಿ ಮಂಡಕಳ್ಳಿಯಲ್ಲಿ 2,446 ಮನೆ, ಕೃಷ್ಣರಾಜ ಹಾಗೂ ವರುಣ ಕ್ಷೇತ್ರದ ಅರ್ಹರಿಗಾಗಿ 1,440 ಸೇರಿ ಒಟ್ಟು 3,886 ಗುಂಪು ಮನೆಗಳನ್ನು ನಿರ್ಮಿಸಲಾಗುತ್ತಿದೆ. ಸರ್ಕಾರಗಳ ಸಹಾಯಧನ, ಫಲಾನುಭವಿಗಳು ಪಾವತಿಸುವ ಮೊದಲ ■ 6ನೇ ಪುಟಕ್ಕೆ

- ಮಂಡಕಳ್ಳಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಫಲಾನುಭವಿಗಳಿಗಾಗಿ 2,446 ಮನೆ ಹಾಗೂ ಲಲಿತಾದ್ರಿಪುರದಲ್ಲಿ ಕೃಷ್ಣರಾಜ ಹಾಗೂ ವರುಣ ಕ್ಷೇತ್ರಗಳ ಫಲಾನುಭವಿಗಳಿಗಾಗಿ 1440 ಮನೆ ನಿರ್ಮಾಣ.
- ಸದ್ಯ ಕ್ರಮವಾಗಿ 1,100 ಹಾಗೂ 657 ಸೇರಿ ಒಟ್ಟು 1757 ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣೆಗೆ ಕ್ರಮ



ಮೈಸೂರು ಮಿತ್ರ ಶುಕ್ರವಾರ 2 ಜನವರಿ 2026

ಎಂಡಿಎಯಿಂದ ಬೊಮ್ಮೇನಹಳ್ಳಿ ವಸತಿ ಯೋಜನೆ ಪ್ರಕ್ರಿಯೆ ಆರಂಭ



ಮೈಸೂರು,ಜ.1(ಆರ್‌ಕೆ)– ಉದ್ದೇಶಿತ ಮೈಸೂರು ತಾಲೂಕು ಇಲವಾಲ ಹೋಬಳಿ, ಬೊಮ್ಮೇನಹಳ್ಳಿ ಬಳಿ ಸುಮಾರು 2 ಸಾವಿರ ಎಕರೆ ಪ್ರದೇಶದಲ್ಲಿ ಟೌನ್‌ಶಿಪ್ ನಿರ್ಮಾಣ ಯೋಜನೆಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ವು ಪ್ರಕ್ರಿಯೆ ಆರಂಭಿಸಿದೆ.

ಈ ಸಂಬಂಧ ಡಿಸೆಂಬರ್ 30 ರಂದು ಅಧಿಕೃತ ಪ್ರಕಟಣೆ ಹೊರಡಿಸಿರುವ ಪ್ರಾಧಿಕಾರದ ಆಯುಕ್ತ ಕೆ.ಆರ್. ರಕ್ಷಿತ್, ಪ್ರಾಧಿಕಾರದ ಅಧಿನಿಯಮ 2024ರ ಕಲಂ 40 ಮತ್ತು 41 ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ನಿಯಮಗಳು ಹಾಗೂ ಸರ್ಕಾರದ ಅದಿಸೂಚನೆ 2015ರ ಫೆಬ್ರವರಿ 11ರ ರೀತ್ಯಾ ಶೇ.50:50ರ ಅನುಪಾತದಲ್ಲಿ ರೈತರ ಸಹಭಾಗಿತ್ವದೊಂದಿಗೆ ವಸತಿ ಯೋಜನೆಯನ್ನು ಸಾಕಾರಗೊಳಿಸಲು ಎಂಡಿಎ ಉದ್ದೇಶಿಸಿದ್ದು ಸದರಿ ಯೋಜನೆಗೆ ಭೂಮಿ ನೀಡುವಂತಹ ಮಾಲೀಕರು ಯಾವುದೇ ಹೂಡಿಕೆಯಿಲ್ಲದೆ ಅಭಿವೃದ್ಧಿಪಡಿಸಿದ ನಿವೇಶನಗಳಲ್ಲಿ ಶೇ.50ರಷ್ಟನ್ನು ಪಡೆಯಬಹುದಾಗಿದೆ. ವಿಶಾಲ ರಸ್ತೆ, ಪಾರ್ಕ್, ಸಿಎ ನಿವೇಶನಗಳನ್ನು ಕಳೆದು ಡಾಂಬರ್ ರಸ್ತೆ, ಚರಂಡಿ, ವಿದ್ಯುತ್ ಸಂಪರ್ಕ, ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು, ಬೀದಿ ದೀಪ, ಸಮುದಾಯ ಭವನ, ಬಸ್ ನಿಲ್ದಾಣ, ಮಾಲ್, ಆರೋಗ್ಯ ಕೇಂದ್ರ ಸೇರಿದಂತೆ ಇನ್ನಿತರ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ ಲಭ್ಯವಾಗುವ ನಿವೇಶನಗಳ ಪೈಕಿ ಶೇ.50ರಷ್ಟನ್ನು ಭೂ ಮಾಲೀಕರಿಗೆ ನೀಡಲಾಗುವುದು ಎಂದು ರಕ್ಷಿತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗವಾಲ, ಬೊಮ್ಮೇನಹಳ್ಳಿ, ಕಮರವಳ್ಳಿ ಹಾಗೂ ದೊಡ್ಡಮಾರಗೌಡನಹಳ್ಳಿ ಗ್ರಾಮಗಳ ಕೆಲ ಸರ್ವೆ ನಂಬರ್‌ಗಳ ಭೂಮಿಯಲ್ಲಿ ಉದ್ದೇಶಿತ ವಸತಿ ಬಡಾವಣೆ ನಿರ್ಮಾಣಕ್ಕೆ ಭೂಮಾಲೀಕರು ಒಪ್ಪಿಗೆ ನೀಡುವಂತೆ ಆಯುಕ್ತರು ಮನವಿ ಮಾಡಿದ್ದು, ಹೆಚ್ಚಿನ ಮಾಹಿತಿಗಾಗಿ ಎಂಡಿಎ ಕಟ್ಟಡದ 2ನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 16 ಎ ಅಲ್ಲಿ ಭೂಸ್ವಾದೀನ ಶಾಖೆಯ ವಿಶೇಷ ಭೂ ಸ್ವಾಧೀನಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಶಿವತಾಂಡವ ನೃತ್ಯ–2 ಪ್ರದರ್ಶನ



ಮೈಸೂರಿನ ಕಲಾಮಂದಿರದಲ್ಲಿ ಶ್ರೀ ನಿಮಿಷಾಂಬ ಡಾನ್ಸ್ ಪ್ರಮೋಟರ್ಸ್ ವತಿಯಿಂದ 200 ಕಲಾವಿದರಿಂದ ಶಿವತಾಂಡವ ನೃತ್ಯ–2 ಪ್ರದರ್ಶನ ಪ್ರಸ್ತುತಪಡಿಸಲಾಯಿತು. ರಂಗಭೂಮಿ ಹಿರಿಯ ಕಲಾವಿದೆ ಡಾ.ಗಿರಿಜಾ ಲೋಕೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ನಟಿ ಪೂಜಾ ಲೋಕೇಶ್, ನಟ, ನಿರ್ದೇಶಕ ಸೃಜನ್ ಲೋಕೇಶ್, ರಂಗಭೂಮಿ ಕಲಾವಿದೆ ಶ್ರೀಮತಿ ಗ್ರೀಷ್ಮಾ ಸೃಜನ್ ಲೋಕೇಶ್, ವಿದ್ವಾನ್ ಶ್ರೀಧರ್ ಜೈನ್, ವಿದುಷಿ ಸೌಮ್ಯ ಶ್ರೀಧರ್ ಜೈನ್ ಮತ್ತಿತರರು ಉಪಸ್ಥಿತರಿದ್ದರು.

ಯುಗದ ಕವಿ ಜಗದ ಕವಿ ಕುವೆಂಪು

ಶಾಲಾ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕಿ ನಾಗಮ್ಮ ಅಭಿಮತ



ಶಾರದಾವಿಲಾಸ ಪಪೂರ್ವ ಕಾಲೇಜಲ್ಲಿ ನಡೆದ ಕುವೆಂಪು ಜಯಂತಿ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕಿ ನಾಗಮ್ಮ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಜ.1–ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿ ವೇದಿಕೆ ಸಮಾರೋಪ ಸಮಾರಂಭ ಹಾಗೂ ರಾಷ್ಟ್ರಕವಿ ಕುವೆಂಪುರವರ 121ನೇ ಜನ್ಮದಿನವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಜಿಲ್ಲಾ ಉಪನಿರ್ದೇಶಕಿ ನಾಗಮ್ಮ ಅವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಇಡೀ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಯುಗದ ಕವಿ ಜಗದ ಕವಿ ಎನಿಸಿಕೊಂಡ ಮಹಾನ್ ದಾರ್ಶನಿಕರು ಕುವೆಂಪು. ಪ್ರಕೃತಿಯ ವರ್ಣನೆಯನ್ನು ಮಲೆನಾಡಿನ ಪರಿಸರ ಹಾಗೂ ರಮ್ಯತೆಯನ್ನು ತಮ್ಮ ಬರಹಗಳ ಮೂಲಕ ದಾಖಲಿಸಿ ಕನ್ನಡದ ಪ್ರಕೃತಿಯ ಕವಿ ಎನಿಸಿಕೊಂಡವರು ಕುವೆಂಪು. ಇವರ ಕಾದಂಬರಿಗಳು, ನಾಟಕ, ಮಹಾಕಾವ್ಯ ಎಂದೆಂದಿಗೂ ಪ್ರಸ್ತುತ, ಕುವೆಂಪು ರಚಿಸಿದ ನಾಡಗೀತೆ ನಾಡಿನಲ್ಲಿ ಮಾತ್ರವಲ್ಲ ದೇಶ–ವಿದೇಶಗಳಲ್ಲೂ ಪ್ರಸಿದ್ಧಿ ಪಡೆದಿದೆ ಎಂದರು.

ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ದಿನೇಶ್ ಮಾತನಾಡಿ, ವಿದ್ಯಾರ್ಥಿ ವೇದಿಕೆಯು ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ಪ್ರೋತ್ಸಾಹ ನೀಡುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಒಂದಲ್ಲಾ ಒಂದು ವಿಶೇಷ ಗುಣ ಇರುತ್ತದೆ. ಅದನ್ನು ಜೀವನದಲ್ಲಿ ಬಳಸಿಕೊಂಡು ಬೆಳೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಕಳೆದ ವರ್ಷ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ್‌ಕುಮಾರ್, ಉಪನ್ಯಾಸಕ ರಾಜೇಂದ್ರಪ್ರಸಾದ್ ಹೊನ್ನಲಗೆರೆ, ಇಂಗ್ಲೀಷ್ ವಿಭಾಗದ ಮುಖ್ಯಸ್ಥ ಮನೋಜ್ ಕುಮಾರ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಶಿಲ್ಪ, ರಶ್ಮಿ, ಮಧುರ, ದಿವ್ಯಾ, ಲತಾ, ದೀಪಿಕಾ, ಮನೋಜ್‌ಕುಮಾರ್, ಮನೋಹರ್ ಮತ್ತಿತರರು ಉಪಸ್ಥಿತರಿದ್ದರು.

ಜ.4, ಚುಟುಕು ತಾರೆಗಳು ಕೃತಿ ಲೋಕಾರ್ಪಣೆ

ಮೈಸೂರು, ಜ. 1– ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ವೈದ್ಯವಾರ್ತಾ ಪ್ರಕಾಶನ ಪ್ರಕಟಿಸಿರುವ ಬಿಇಎಲ್ ವಿಶ್ರಾಂತ ಜನರಲ್ ಮ್ಯಾನೇಜರ್ ಮಲ್ಲರಾಜ ಅರಸ್ ವಿರಚಿತ ಚುಟುಕು ತಾರೆಗಳು ಕೃತಿ ಲೋಕಾರ್ಪಣೆ ಸಮಾರಂಭವನ್ನು ಜ. 4 ರಂದು ಬೆಳಗ್ಗೆ 10.45ಕ್ಕೆ ಕೆ.ಆರ್.ವನಂನಲ್ಲಿರುವ ಶ್ರೀರಾಮ ಸೇವಾ ಅರಸು ಮಂಡಲಿ ಮುಖ್ಯ ಸಭಾಂಗಣದಲ್ಲಿ (ಎಸ್‌ಎಂಟಿ ಆಸ್ಪತ್ರೆ ಹಿಂಭಾಗ) ಏರ್ಪಡಿಸಲಾಗಿದೆ.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ರಮಣಶ್ರೀ ಸಮೂಹ ಸಂಸ್ಥೆಗಳ ಅಧ್ಯಕ್ಷ ನಾಡೋಜ ಎಸ್.ಷಡಕ್ಷರಿ ಕೃತಿ ಲೋಕಾರ್ಪಣೆ ಮಾಡುವರು. ಮಾಜಿ ಸಚಿವ ಎಂ.ಶಿವಣ್ಣ ಚಾಮುಂಡೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ಹಿರಿಯ ಸಾಹಿತಿಗಳಾದ ನಾ. ದಿವಾಕರ ಮತ್ತು ಚುಟುಕು ಜಾಹ್ನವಿ ಸೀತಾಲಕ್ಷ್ಮಿ ವರ್ಮ ಕೃತಿ ಕುರಿತು ಮಾತನಾಡುವರು. ಶ್ರೀರಾಮ ಸೇವಾ ಅರಸು ಮಂಡಲಿ ಅಧ್ಯಕ್ಷ ಡಾ. ಸುಂದರರಾಜೇಅರಸ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕೆಇಬಿ ವಿಶ್ರಾಂತ ಚೀಫ್ ಇಂಜಿನಿಯರ್ ಕೆ.ಆರ್. ಲಕ್ಷ್ಮೀಕಾಂತ, ಬಿಇಎಲ್ ವಿಶ್ರಾಂತ ನಿರ್ದೇಶಕ ಹೆಚ್.ಎನ್.ರಾಮಕೃಷ್ಣ, ಕೃತಿ ಲೇಖಕ ಮಲ್ಲರಾಜ ಅರಸ್, ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್. ಅರಸ್ ಉಪಸ್ಥಿತರಿರುವರು.

ಪಿಕ್‌ಅಪ್ ವಾಹನದ ಟೈರ್ ಬ್ಲಾಸ್ಟ್; ಹೊಸ ವರ್ಷದ ಮೊದಲ ದಿನವೇ ಮೂವರ ದಾರುಣ ಸಾವು!

ಹಾಸನ, ಜ.1–ಹಾಸನದ ರಾಷ್ಟ್ರೀಯ ಹೆದ್ದಾರಿ 69ರಲ್ಲಿ ಸಂಭವಿಸಿದ ಭೀಕರ ಅಪಘಾತದಲ್ಲಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲೂಕಿನ, ತಂಗ್ಲಿ ಗ್ರಾಮದ ಶಬ್ಬೀರ್ (55), ತಿಮ್ಮಣ್ಣ (53), ಸಂಜಯ್ (45) ಮೃತ ಪಟ್ಟಿದ್ದಾರೆ. ಓರ್ವನಿಗೆ ಗಂಭೀರ ಗಾಯವಾಗಿದ್ದು , ಇನ್ನೂ ಉಳಿದ ಇಬ್ಬರಿಗೆ ಸಣ್ಣಪುಟ್ಟ ಗಾಯವಾಗಿದೆ. ಸದ್ಯ ಗಾಯಾಳನ್ನು ಕಡೂರು ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ.

ಸರಿಯಾದ ಸಮಯಕ್ಕೆ ಸಮಾರಂಭಕ್ಕೆ ಬಾರದ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿ

ಕಾರ್ಯಕ್ರಮದಿಂದ ಹೊರಬಂದು ಪ್ರತಿಭಟಿಸಿದ ವಿಶ್ವಕರ್ಮ ಸಮಾಜದ ಮುಖಂಡರು

ಶಾಸಕ ಹರೀಶ್‌ಗೌಡರಿಂದ ಮನವೊಲಿಕೆ, ಪ್ರತಿಭಟನೆ ಕೈಬಿಟ್ಟ ಮುಖಂಡರು



ವಿಶ್ವಕರ್ಮ ಸಮುದಾಯವನ್ನು ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ಕಡೆಗಣಿಸುತ್ತಿದ್ದಾರೆ ಎಂದು ಆರೋಪಿಸಿ ವಿಶ್ವಕರ್ಮ ಸಮುದಾಯದ ಮುಖಂಡರು ಕಲಾಮಂದಿರದ ಮುಂಭಾಗ ಪ್ರತಿಭಟನೆ ನಡೆಸಿದರು.



ಕಲಾಮಂದಿರದ ಕಿರುರಂಗಮಂದಿರದ ಆವರಣದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನ ಆಚರಿಸಲಾಯಿತು.

ಮೈಸೂರು,ಜ.1(ಜಿಎ)–ಸಮಾರಂಭಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಜನಪ್ರತಿನಿಧಿಗಳು ಮತ್ತು ಜಿಲ್ಲಾಧಿಕಾರಿ ಬಾರದ ಹಿನ್ನಲೆಯಲ್ಲಿ ವಿಶ್ವಕರ್ಮ ಸಮುದಾಯವನ್ನು ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ಕಡೆಗಣಿಸುತ್ತಿದ್ದಾರೆ ಎಂದು ಆರೋಪಿಸಿ ವಿಶ್ವಕರ್ಮ ಸಮುದಾಯದ ಮುಖಂಡರು ಕಲಾಮಂದಿರದ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಆಯೋಜಿಸಿದ್ದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಗೆ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಸ್ಥಳೀಯ ಪ್ರತಿನಿಧಿಗಳು ಭಾಗವಹಿಸದೆ ಇರುವುದನ್ನು ಕಂಡ ಸಮುದಾಯದ ಮುಖಂಡರು ಬೇಸರಗೊಂಡು ಕಾರ್ಯಕ್ರಮದಿಂದ ಹೊರ ಬಂದು ಪ್ರತಿಭಟನೆ ಮಾಡಲು ಮುಂದಾದರು.

ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ ಎಂದು ತಿಳಿದು ಸಮುದಾಯದ ಮುಖಂಡರು ಕಿರುರಂಗ ಮಂದಿರಕ್ಕೆ ಆಗಮಿಸಿದರು. ಈ ವೇಳೆ ಕಾರ್ಯಕ್ರಮಕ್ಕೆ ಯಾವುದೇ ಜನಪ್ರತಿನಿಧಿಗಳು ಆಗಮಿಸಿದ ಕಾರಣ 12 ಗಂಟೆ ಹೊತ್ತಿಗೆ ತಾಳ್ಮೆ ಕಳೆದುಕೊಂಡ ಸಮುದಾಯದ ಮುಖಂಡರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಬಳಿ ತೆರಳಿ ಕಾರ್ಯಕ್ರಮ ಆರಂಭವಾಗಲು ಏಕೆ ತಡವಾಗುತ್ತಿದೆ ಎಂದು ಪ್ರಶ್ನಿಸಿದರು. ಅದಕ್ಕೆ ಸುದರ್ಶನ್, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು ಮೈಸೂರಿನಲ್ಲಿ ಇಲ್ಲ. ಈ ಹಿನ್ನೆಲೆಯಲ್ಲಿ ಅವರು ಬರಲು ಸಾಧ್ಯವಾಗಿಲ್ಲ. ಸ್ವಲ್ಪ ಹೊತ್ತಿನಲ್ಲೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಆಗಮಿಸಲಿದ್ದಾರೆ. ಕಾರ್ಯಕ್ರಮ ಆರಂಭಿಸೋಣ ಎಂದು ಉತ್ತರಿಸಿದರು.

ನಂತರ ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ ಮತ್ತು ಡಾ.ಡಿ. ತಿಮ್ಮಯ್ಯ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದಂತೆ ಮುಖಂಡರು ತಮ್ಮ ಬೇಸರವನ್ನು ಹೊರ ಹಾಕಿ, ಡಿಸಿ, ಶಾಸಕರು, ಸಂಸದರು ಕಾರ್ಯಕ್ರಮಕ್ಕೆ ಆಗಮಿಸಬೇಕು ಎಂದು ಪಟ್ಟು ಹಿಡಿದು ಎಲ್ಲರೂ ಕಿರುರಂಗಮಂದಿರದಿಂದ ಹೊರ ಬಂದು ಕಲಾಮಂದಿರದ ಮುಂಭಾಗವಿರುವ ಮೆಟ್ಟಿಲುಗಳ ಮೇಲೆ ಕುಳಿತು ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಧ್ಯಾಹ್ನ 1 ಗಂಟೆ ಸುಮಾರಿಗೆ ಶಾಸಕ ಕೆ.ಹರೀಶ್‌ಗೌಡರು ಆಗಮಿಸಿ, ಏಕೆ ಪ್ರತಿಭಟನೆ ಮಾಡುತ್ತಿದ್ದೀರಾ ಎಂದು ಪ್ರಶ್ನಿಸಿದಾಗ 'ಸರ್ ನಾವು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಎಂದು ಆಗಮಿಸಿದ್ದೇವೆ. ಆದರೆ, ಇಲ್ಲಿ ಒಬ್ಬರು ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ. ಚಿಕ್ಕ ಸಮುದಾಯ ಎಂದು ಕಡೆಗಣಿಸುತ್ತಿದ್ದಾರೆ' ಎಂದು ಸಮುದಾಯದ ಮುಖಂಡರು ಅಳಲು ತೋಡಿಕೊಂಡರು. ಅದಕ್ಕೆ ಹರೀಶ್‌ಗೌಡ ಪ್ರತಿಕ್ರಿಯಿಸಿ, ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಅವರು ಮೈಸೂರಿನಲ್ಲಿ ಇಲ್ಲ. ಅವರು ಇದ್ದಿದ್ದರೆ, ತಪ್ಪದೇ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು ಎಂದರು.

ನಾನು ಬೇರೆಡೆ ಪ್ರವಾಸಕ್ಕೆ ತೆರಳಿದ್ದೆ. ಇಂದು ಮುಂಜಾನೆ 5 ಗಂಟೆಗೆ ಮೈಸೂರಿಗೆ ಬಂದೆ. ನಂತರ ಮನೆ ಬಳಿ ಬಂದಿದ್ದ ಜನರ ಸಮಸ್ಯೆಗಳನ್ನು ಆಲಿಸಿ ನಂತರ ಉಪಾಹಾರವನ್ನು ಸೇವಿಸದೇ ನೇರವಾಗಿ ಕಾರ್ಯಕ್ರಮಕ್ಕೆ ಬಂದಿದ್ದೇನೆ. ಕಾರ್ಯಕ್ರಮ ತಡವಾಗಿದೆ. ನಾನು ಮತ್ತು ಕಾಂಗ್ರೆಸ್ ಪಕ್ಷ ವಿಶ್ವಕರ್ಮ ಸಮುದಾಯದ ಜೊತೆ ಇದ್ದೇವೆ. ಬನ್ನಿ ಕಾರ್ಯಕ್ರಮ ಆರಂಭಿಸೋಣ ಎಂದು ಸಮಾಧಾನಪಡಿಸಿ, ಕಾರ್ಯಕ್ರಮಕ್ಕೆ ಕರೆ ತಂದರು.

ಕುಂಬಾರ, ನೇಕಾರ ಸೇರಿದಂತೆ ಕುಲ ಕಸುಬುಗಳು ಕಣ್ಮರೆ

ಪ್ರತಿಭಟನೆ ಕೈಬಿಟ್ಟ ನಂತರ ಕಿರುರಂಗಮಂದಿರಕ್ಕೆ ಮರಳಿದ ನಂತರ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಅಮರ ಶಿಲ್ಪಿ ಜಕಣಾಚಾರಿ ಅವರು ಎಷ್ಟೇ ವರ್ಷವಾದರೂ ಅಮರವಾಗಿ ಇರುತ್ತಾರೆ. ಈಗ ನಾವು ಇರುವ ಕಲಿಯುಗದಲ್ಲಿ ಯಂತ್ರ ಗಳೇ ಎಲ್ಲವನ್ನು ನಿರ್ವಹಿಸುತ್ತವೆ. ಆದರೆ ಈ ಹಿಂದೆ ಕಲ್ಲಿನಲ್ಲಿ ಒಂದು ರೂಪ ಕೊಡುವುದು ಬಹಳ ಕಷ್ಟದ ಕೆಲಸವಾಗಿತ್ತು. ಆದರೆ, ಅಂದಿನ ಶಿಲ್ಪಿಗಳ ಶ್ರಮ, ಶ್ರದ್ಧೆಯಿಂದಲೇ ಶಿಲ್ಪಕಲೆಯಲ್ಲಿ ಭಾರತವೇ ಶ್ರೇಷ್ಠವಾಗಿದೆ. ಅವರ ಕಲೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಕುಂಬಾರ, ನೇಕಾರ ವೃತ್ತಿ ಸೇರಿದಂತೆ ಅನೇಕ ಕುಲ ಕಸುಬುಗಳು ಕಣ್ಮರೆಯಾಗುತ್ತಿದೆ. ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕೆಲಸ ಮಾಡಬೇಕು ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಅಮರ ಶಿಲ್ಪಿ ಜಕಣಾಚಾರಿ ಅವರು ಸೂರ್ಯ ಚಂದ್ರ ಇರುವವರೆಗೂ ಇರುತ್ತಾರೆ. ಅವರ ಕೆತ್ತನೆ ಕಾರ್ಯಗಳು ಹಾಗೇ ಇದೆ. ವಿಶ್ವಕರ್ಮ ಸಮುದಾಯದವರು ಚಾಮರಾಜ ಕ್ಷೇತ್ರದಲ್ಲಿಯೇ 18 ಸಾವಿರ ಮತದಾರರಿದ್ದಾರೆ. ಅವರ ಮಕ್ಕಳನ್ನು ಸೇರಿದರೆ, 34 ಸಾವಿರಕ್ಕೂ ಹೆಚ್ಚಿದ್ದಾರೆ. ನಿಮ್ಮ ಬಗ್ಗೆ ನಮಗೆ ವಿಶೇಷ ಕಾಳಜಿ ಇದೆ. ಇಂದು ಎಲ್ಲರ ಕಸುಬು ಬದಲಾವಣೆ ಆಗಿದೆ. ಸಮುದಾಯ ಪ್ರಭಲವಾಗಬೇಕು ಎಂದರೆ ಕಾಲಕ್ಕ ತಕ್ಕಂತೆ ಬದಲಾಗಬೇಕು. ದಿನದಿಂದ ದಿನಕ್ಕೆ ಎಲ್ಲಾ ಕ್ಷೇತ್ರದಲ್ಲಿಯೂ ಪೈಪೋಟಿ ಹೆಚ್ಚಳವಾಗುತ್ತಿದೆ. ಅದಕ್ಕೆ ತಕ್ಕಂತೆ ಮಕ್ಕಳನ್ನು ಬೆಳೆಸಿ ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಇಂದು ಕಾರ್ಯಕ್ರಮಕ್ಕೆ ಜನಪ್ರತಿನಿಧಿಗಳು ಬಂದಿಲ್ಲ ಎಂದು ದೂರುತ್ತಿದ್ದೀರಿ. ಅದು ಸರಿ. ಆದರೆ ಮೊದಲು ನೀವು ಸಂಘಟಿತರಾಗಿ ಮುಂದಿನ ವರ್ಷ ಕಲಾಮಂದಿರದಲ್ಲಿ ಕಾರ್ಯಕ್ರಮ ನಡೆಯಬೇಕು ಆ ರೀತಿ ಜನರನ್ನು ಸೇರಿಸಬೇಕು. ಆಗ ಸಿಎಂ, ಪಿಎಂ ಎಲ್ಲರೂ ತಾವಾಗೇ ಬರುತ್ತಾರೆ. ಮೊದಲು ನೀವು ಹಕ್ಕನ್ನು ಕೇಳುವ ಮುನ್ನ ನಿಮ್ಮ ಕರ್ತವ್ಯ ಮಾಡಿ ಎಂದರು. ಕಾರ್ಯಕ್ರಮದಲ್ಲಿ ಎಡಿಸಿ ಶಿವರಾಜು, ನಿವೃತ್ತ ಡಿಡಿಪಿಐ ಮಂಟೇಲಿಂಗಾಚಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ...



ಮೈಸೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತದ ವತಿಯಿಂದ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



ಡಾ.ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಬಳಗದ ನೂತನ ವರ್ಷದ ಕ್ಯಾಲೆಂಡರ್ ಅನ್ನು ವಿಜಯನಗರದ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪ್ರೊ.ಭಾಷ್ಯಂ ಸ್ವಾಮೀಜಿ ಬಿಡುಗಡೆ ಮಾಡಿದರು. ಈ ವೇಳೆ ನಿರ್ಮಾಪಕ ಶ್ರೀನಿವಾಸ್, ಬಳಗದ ಗೌರವ ಅಧ್ಯಕ್ಷ ಸೋಮಣ್ಣ, ಅಧ್ಯಕ್ಷ ಬಿ.ಎಸ್.ರವಿ, ಕಾರ್ಯಾಧ್ಯಕ್ಷ ಬಿ.ಎಸ್.ಮಹೇಶ್, ಉಪಾಧ್ಯಕ್ಷ ಎಂ.ರಾಜೀವ್ ದೊರೆ, ಅಭಿಮಾನಿಗಳಾದ ಗೋವಿ, ಮಂಜಣ್ಣ, ಸಾಗರ್, ರವಿ, ರಾಜ, ಮೂರ್ತಿ ಮತ್ತಿತರರಿದ್ದರು.

ಜ.4, ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಜ.1– (ಎಂಟಿವೈ)– ಮೈಸೂರಿನ ಬೋಗಾದಿಯ ಗದ್ದಿಗೆ ಮುಖ್ಯ ರಸ್ತೆಯಲ್ಲಿರುವ ಬಯಲು ರಂಗಮಂದಿರದಲ್ಲಿ ಜ.4ರಂದು ಬೆಳಗ್ಗೆ 11ಕ್ಕೆ ಕರುನಾಡು ಟೈಲರ್ಸ್ ನೆರವು ನಿಧಿ ಸಮಿತಿಯ 3ನೇ ವಾರ್ಷಿಕೋತ್ಸವ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಸಮಿತಿಯ ರಾಜ್ಯಾಧ್ಯಕ್ಷ ಚನ್ನನಾಯಕ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರುನಾಡು ಟೈಲರ್ಸ್ ನೆರವು ನಿಧಿ ಸಮಿತಿಯ 3ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಮಿತಿ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಗುತ್ತದೆ. ಅಲ್ಲದೆ, ಸದಸ್ಯರಿಗೆ ಐಡಿ ಕಾರ್ಡ್ ವಿತರಿಸಲಾಗುತ್ತದೆ. ಕಾರ್ಯಕ್ರಮದ ಅಂಗವಾಗಿ ಆಯೋಜಿಸಿರುವ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಸಾರ್ವಜನಿಕರು ಪಾಲ್ಗೊಳ್ಳಬಹುದಾಗಿದೆ. ಇದೇ ವೇಳೆ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮವನ್ನು ಶಾಸಕ ಜಿ.ಟಿ. ದೇವೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಸದಸ್ಯರಿಗೆ ಗುರುತಿನ ಚೀಟಿ ವಿತರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಿತಿ ರಾಜ್ಯಾಧ್ಯಕ್ಷ ಚನ್ನನಾಯಕ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕರು ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಕರುನಾಡು ಟೈಲರ್ಸ್ ನೆರವು ನಿಧಿ ಸಮಿತಿ ಪದಾಧಿಕಾರಿಗಳಾದ ಕೋಮಲಾ, ಪ್ರಕಾಶ್, ಕುಮಾರ್ ಕಿರ್ಗಾವಲು, ಗೋವಿಂದ ನಾಯಕ, ಪರಮೇಶ್, ಪಲ್ಲವಿ ಇದ್ದರು.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಜ. 1– ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಜನವರಿ 6 ರಿಂದ 10 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6 ರಿಂದ 8.30 ಹಾಗೂ ಸಂಜೆ 6 ರಿಂದ 8.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.1.2026 ಶುಕ್ರವಾರ, ಮಳೆ ನಕ್ಷತ್ರ: ಮೂಲ, 29.12.2025 ರಿಂದ 10.01.2026 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಕೋ–ಆಪ್ಟೆಕ್ಸ್:** ಸಂಕ್ರಾಂತಿ ಪ್ರಯುಕ್ತ ವಿಶೇಷ ಪ್ರದರ್ಶನ ಮಾರಾಟ ಮೇಳ, ಉದ್ಘಾಟನೆ: ಕೋ–ಆಪ್ಟೆಕ್ಸ್ ಬೆಂಗಳೂರು ಪ್ರಾದೇಶಿಕ ವ್ಯವಸ್ಥಾಪಕ ಎನ್.ಸುಂದರ್‌ರಾಜನ್, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಬಿ.ರಾಘವೇಂದ್ರ, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.
- **ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮೈಸೂರು ವಿವಿ :** ನಗರ ದುರ್ಬಲತೆ ಮೌಲ್ಯಮಾಪನ ಮತ್ತು ಹವಾಮಾನ ಬದಲಾವಣೆ ಕುರಿತು ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉಪಸ್ಥಿತರು: ಡಾ.ಗೋಪಿಪ್ರಸಾದ್, ಪ್ರೊ.ಪ್ರಮೋದ್ ಗವಾರಿ, ಪ್ರೊ.ಕುಮಾರ, ಪ್ರೊ.ನಾಗೇಂದ್ರ, ಸ್ಥಳ: ಪ್ರೊ.ಕೆ.ಎಸ್.ರಂಗಪ್ಪ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಮಾತೃ ಮಂಡಲಿ ಬಾಲಕಿಯರ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಸಾಂಸ್ಕೃತಿಕ ಕ್ರೀಡೆ, ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮಾತೃ ಮಂಡಲಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಶ್ರೀಮತಿ ವಾಣಿ ಪ್ರಸಾದ್, ಉದ್ಘಾಟನೆ : ವಕೀಲೆ ಶ್ರೀಮತಿ ಸುಮನ, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಉಪಸ್ಥಿತರು : ಗೌರವ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಡಾ. ಯಮುನಾ, ಸ್ಥಳ: ವಜ್ರ ಮಹೋತ್ಸವ ಸಭಾಂಗಣ, ಮಾತೃ ಮಂಡಲಿ ವಿದ್ಯಾಸಂಸ್ಥೆ, ಬೆಳಗ್ಗೆ 10.30ಕ್ಕೆ.
- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ದಲಿತ ವಿದ್ಯಾರ್ಥಿ ಪರಿಷತ್, ದಲಿತ ಸಾಹಿತ್ಯ ಪರಿಷತ್:** ಭೀಮಾ ಕೋರೆಗಾಂವ್ ಯುದ್ಧದ ವಿಜಯೋತ್ಸವ ಆಚರಣೆ, ಸ್ಥಳ: ಅಂಬೇಡ್ಕರ್ ಪುತ್ಥಳಿಯ ಮುಂಭಾಗದ ಆವರಣ, ಮಾನಸಗಂಗೋತ್ರಿ, ಸಂಜೆ 4 ರಿಂದ.
- **ಮಹರ್ಷಿ ಪಬ್ಲಿಕ್ ಸ್ಕೂಲ್ :** ಮಹರ್ಷಿ ಪರಂಪರೆ–32, ವಾರ್ಷಿಕೋತ್ಸವ– ಮಹರ್ಷಿ ಬಳಗದ ಮಹೋತ್ಸವ, ಸಾನ್ನಿಧ್ಯ: ಸ್ವಾಮಿ ಇಷ್ಟಾನಾಥಾನಂದಜೀ ಮಹಾರಾಜ್, ಗೌರವ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಮಹರ್ಷಿ ಶಿಕ್ಷಣ ಸಂಸ್ಥೆ ಮ್ಯಾನೇಜಿಂಗ್ ಟ್ರಸ್ಟಿ ಡಾ. ಭವಾನಿ ಶಂಕರ್, ಸ್ಥಳ: ಮಹರ್ಷಿ ಸ್ಕೂಲ್ ಆವರಣ, ವಿಶ್ವೇಶ್ವರನಗರ, ಸಂಜೆ 4.45ಕ್ಕೆ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.
- **ಶ್ರೀ ನಟರಾಜ ಪಬ್ಲಿಕ್ ಸ್ಕೂಲ್:** ನಟರಾಜ ವೈಭವ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ: ನಿತೇಶ್ ಪಾಟೀಲ್, ಮುಖ್ಯ ಅತಿಥಿಗಳು: ಡಿಡಿಪಿಐ ಡಿ.ಉದಯಕುಮಾರ್, ಅಮ್ಮ ಜಿ.ರಾಮಚಂದ್ರ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಸ್ಕೂಲ್ ಪ್ರಿನ್ಸಿಪಾಲ್ ಪವಿತ್ರ, ಸ್ಥಳ: ಶ್ರೀ ನಟರಾಜ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಎಸ್. ಸುಬ್ಬುಲಕ್ಷ್ಮಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು–ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಚಪ್ಪದ್ ಎ.ಇ. ವಾಮನನ್ ನಂಬೂದರಿ – ಹಾಡುಗಾರಿಕೆ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, ಪರಾಗ–ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್. ಶಶಾಂಕ್–ಕೊಳಲು ವಾದನ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025, ವಿದುಷಿ ಜ್ಯೋತಿ ಹೆಗ್ಡೆ–ರುದ್ರವೀಣಾ ವಾದನ

ಬ್ಯಾನರ್ ಕಟ್ಟುವ ವಿಚಾರಕ್ಕೆ ಶಾಸಕರಾದ ಜನಾರ್ಧನ್ ರೆಡ್ಡಿ–ನಾರಾ ಭರತ್ ರೆಡ್ಡಿ ಬೆಂಬಲಿಗರ ಮಾರಾಮಾರಿ; ಗಾಳಿಯಲ್ಲಿ ಗುಂಡು

ಆಕಸ್ಮಿಕ ಗುಂಡು ತಗುಲಿ ಕಾಂಗ್ರೆಸ್ ಕಾರ್ಯಕರ್ತ ಬಲಿ

ಬಳ್ಳಾರಿ, ಜ.1–ಬಳ್ಳಾರಿಯಲ್ಲಿ ವಾಲ್ಮೀಕಿ ಪುತ್ಥಳಿ ಅನಾವರಣ ಕಾರ್ಯಕ್ರಮದ ಅಂಗವಾಗಿ ಬ್ಯಾನರ್ ಕಟ್ಟುವ ವಿಚಾರಕ್ಕೆ ಗಂಗಾವತಿ ಶಾಸಕ ಜನಾರ್ಧನ ರೆಡ್ಡಿ ಹಾಗೂ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಬೆಂಬಲಿಗರ ನಡುವೆ ಘರ್ಷಣೆ ಸಂಭವಿಸಿದೆ.

ಜನಾರ್ಧನ ರೆಡ್ಡಿ ಮನೆಯ ಬಳಿ ಈ ಎರಡು ಗುಂಪುಗಳ ನಡುವೆ ಕಲ್ಲು ತೂರಾಟ ಸಂಭವಿಸಿತ್ತು. ಈ ವೇಳೆ ಇಬ್ಬರು ಶಾಸಕರ ಭದ್ರತಾ ಸಿಬ್ಬಂದಿ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆನ್ನಲಾಗಿದ್ದು, ಈ ವೇಳೆ ಗುಂಡು ತಗುಲಿ ಯುವಕನೊಬ್ಬ ಸಾವನ್ನಪ್ಪಿದ್ದಾನೆ. ಸಾವನ್ನಪ್ಪಿರುವ ಯುವಕ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಎಂದು ತಿಳಿದು ಬಂದಿದೆ.

ಹವಂಬಾವಿ ಪ್ರದೇಶದಲ್ಲಿ ಮಾಜಿ ಸಚಿವ ಜನಾರ್ದನ ರೆಡ್ಡಿಯವರ ನಿವಾಸದ ಸಮೀಪ ಇಂದು ಸಂಜೆ ಹೊತ್ತಿಗೆ ಎರಡು ಗುಂಪುಗಳ ನಡುವೆ ಘರ್ಷಣೆ ಸಂಭವಿಸಿದೆ. ರೆಡ್ಡಿಯವರ ನಿವಾಸದ ಮುಂದೆ ಬ್ಯಾನರ್ ಅಳವಡಿಕೆ ವಿಚಾರಕ್ಕೆ ಯುವಕರ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದಿದೆ. ಈ ಗಲಾಟೆ ವಿಕೋಪಕ್ಕೆ ತಿರುಗಿ ಗಾಳಿಯಲ್ಲಿ ಗುಂಡು ಹಾರಿಸಲಾಗಿದೆ. ಈ ವೇಳೆ ಮಿಸ್ ಫೈರಿಂಗ್ ಆಗಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಬಲಿಯಾಗಿದ್ದಾನೆ.

ಎರಡೂ ಕಡೆಯಿಂದ ಕಲ್ಲುತೂರಾಟ: ವಾಲ್ಮೀಕಿ ಪುತ್ಥಳಿ ಉದ್ಘಾಟನೆ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಶುಭಕೋರುವ ಬ್ಯಾನರ್ ಆಳವಡಿಸಲಾಗುತ್ತಿತ್ತು. ಈ ವೇಳೆ ಜನಾರ್ಧನ ರೆಡ್ಡಿ ಮನೆಯ ಬಳಿಯೂ ಬ್ಯಾನರ್ ಆಳವಡಿಕೆ ಮಾಡಲು ಯತ್ನಿಸಿದ್ದಾರೆ. ಇದನ್ನ ಜನಾರ್ಧನ ರೆಡ್ಡಿ ಬೆಂಬಲಿಗರು ವಿರೋಧಿಸಿದ್ದಾರೆ. ನಂತರ ಮಾತಿನ ಚಕಮಕಿ ದೊಡ್ಡದಾಗಿದ್ದು, ಹೊಡೆದಾಟಕ್ಕೆ ಕಾರಣವಾಗಿದೆ. ನಂತರ ಶಾಸಕ ನಾರಾ ಭರತ್ ರೆಡ್ಡಿ ಅಪ್ತ ಸತೀಶ್ ರೆಡ್ಡಿ ಹಾಗೂ ಜನಾರ್ಧನರೆಡ್ಡಿ ಬೆಂಬಲಿಗರ ನಡುವೆ ಕಲ್ಲುತೂರಾಟ ನಡೆದಿದೆ.



ಉದ್ರಿಕ್ತರನ್ನು ಚದುರಿಸುತ್ತಿರುವ ಪೊಲೀಸರು

ಮಾಜಿ ಸಚಿವ ಜನಾರ್ಧನ ರೆಡ್ಡಿ ಹೇಳಿಕೆ: ಘಟನೆ ಬಗ್ಗೆ ಪ್ರತಿಕ್ರಿಯಿಸಿದ ಮಾಜಿ ಸಚಿವ ಜನಾರ್ದನ ರೆಡ್ಡಿ ಶಾಸಕ ನಾರಾ ಭರತ್ ರೆಡ್ಡಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಳೆದ ಎರಡೂವರೆ ವರ್ಷದಲ್ಲಿ ಭರತ್ ರೆಡ್ಡಿ ಏನೂ ಅಭಿವೃದ್ಧಿ ಮಾಡಿಲ್ಲ. ಹಾಗಾಗಿ ವಾಲ್ಮೀಕಿ ಪುತ್ಥಳಿ ಉದ್ಘಾಟನೆ ಕಾರ್ಯಕ್ರಮವನ್ನು ಅಬ್ಬರದಿಂದ ಮಾಡುತ್ತಿದ್ದಾರೆ. ನಮ್ಮ ಮನೆಯ ಮುಂದೆ ಬಂದು ಬ್ಯಾನರ್ ಕಟ್ಟುತ್ತಿದ್ದರು. ಇದಕ್ಕೆ ನಮ್ಮ ಸೆಕ್ಯುರಿಟಿ ಗಾರ್ಡ್ ಅಕ್ಷೇಪ ಮಾಡಿದ್ದಾರೆ. ನಮ್ಮ ಸೆಕ್ಯುರಿಟಿಗಳ ಮೇಲೆ ಹಲ್ಲೆ ಮಾಡಿದ್ದಾರೆ.



ರಾಜಶೇಖರ್

ಗಲಾಟೆ ದೊಡ್ಡದಾಗುತ್ತಿದ್ದಂತೆ ನಮ್ಮ ಮನೆಯ ಮುಂದೆ ಸತೀಶ್ ರೆಡ್ಡಿ ಗನ್‌ಮ್ಯಾನ್‌ಗಳೊಂದಿಗೆ ಬಂದಿದ್ದಾರೆ. ಉದ್ದೇಶ ಪೂರ್ವಕವಾಗಿ ನನ್ನನ್ನ ಮುಗಿಸಲು ಪ್ರಯತ್ನಿಸುತ್ತಿದ್ದಾರೆ. ನಾನು ಗಂಗಾವತಿಯಿಂದ ಬರುವುದನ್ನೇ ಕಾಯುತ್ತಿದ್ದಾರೆ. ನಾನು ಬಂದ ತಕ್ಷಣ ಅವರ ಗನ್ ಮ್ಯಾನ್‌ಗಳು ಫೈರಿಂಗ್ ಮಾಡಿದ್ದಾರೆ. ನಮಗೆ ಬುಲೆಟ್ ಸಿಕ್ಕಿವೆ. ಈ ಬಗ್ಗೆ ಶಾಸಕ ಭರತ್ ರೆಡ್ಡಿ ಹಾಗೂ ಅವರ ತಂದೆ ವಿರುದ್ಧ ದೂರು ದಾಖಲಿಸುತ್ತೇನೆ ಎಂದು ಜನಾರ್ಧನ ರೆಡ್ಡಿ ತಿಳಿಸಿದ್ದಾರೆ.

ಭರತ್ ರೆಡ್ಡಿ ವಾಗ್ದಾಳಿ: ಇತ್ತ ಶಾಸಕ ಭರತ್ ರೆಡ್ಡಿ ಕೂಡ ಜನಾರ್ಧನ ರೆಡ್ಡಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ವಾಲ್ಮೀಕಿ ಪುತ್ಥಳಿ ಸ್ಥಾಪನೆ ತಡೆಯುವ ಹುನ್ನಾರ ನಡೆಸಿದ್ದಾರೆ. ಫೈರಿಂಗ್‌ಗೆ ಕಾಂಗ್ರೆಸ್ ಕಾರ್ಯಕರ್ತ ಬಲಿಯಾಗಲು ಜನಾರ್ಧನ ರೆಡ್ಡಿ ಕಾರಣ ಎಂದು ದೂರಿದ್ದಾರೆ. ಈತನ ಚಿಲ್ಲರೆ ರಾಜಕಾರಣ ನನ್ನ ಮುಂದೆ ನಡೆಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜಶೇಖರ ರೆಡ್ಡಿಯನ್ನು ಜನಾರ್ಧನ ರೆಡ್ಡಿ, ಸೋಮಶೇಖರ ರೆಡ್ಡಿ ಕೊಲೆ ಮಾಡಿದ್ದಾರೆ, ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

ವಿದ್ಯುತ್ ಕಂಬಗಳಲ್ಲಿ ಬಲ್ಬ್‌ಗಳಿದ್ದರೂ ಕಗ್ಗತ್ತಲು!; ವಾಹನ ಸವಾರರು, ಪಾದಚಾರಿಗಳ ಪರದಾಟ

● ಮೈಸೂರು ಲಲಿತಮಹಲ್‌ನಗರ, ಗಿರಿದರ್ಶಿನಿ ಬಡಾವಣೆಗಳ ಭಾಗದಲ್ಲಿ ತಿ.ನರಸೀಪುರ ರಸ್ತೆಯ ದುಸ್ಥಿತಿ ● ಸ್ಥಳೀಯ ನಿವಾಸಿಗಳಿಂದ ಪ್ರತಿಭಟನೆ ಎಚ್ಚರಿಕೆ



ರಾತ್ರಿಯಾದರೆ ಈ ರಸ್ತೆಯಲ್ಲಿ ಕಗ್ಗತ್ತಲು ಆವರಿಸುವ ಮೂಲಕ ವಾಹನ ಸವಾರರು ಹಾಗೂ ಪಾದಚಾರಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮೈಸೂರು,ಜ.1(ಪಿಎಂ)– ವಿದ್ಯುತ್ ಕಂಬಗಳಲ್ಲಿ ಬಲ್ಬ್‌ಗಳಿದ್ದರೂ ಅವುಗಳು ಬೆಳಗದ ಕಾರಣ ಆ ರಸ್ತೆಯಲ್ಲಿ ವಾಹನ ಸವಾರರು ಹಾಗೂ ಪಾದಚಾರಿಗಳ ರಾತ್ರಿ ವೇಳೆ ಓಡಾಟ ಕಷ್ಟಕರವಾಗಿದೆ. ಮೈಸೂರಿನ ಲಲಿತಮಹಲ್ ನಗರ ಹಾಗೂ ಗಿರಿದರ್ಶಿನಿ ಬಡಾವಣೆಗಳ ಭಾಗದಲ್ಲಿನ ತಿ.ನರಸೀಪುರ ರಸ್ತೆಯ ದುಸ್ಥಿತಿ ಇದು.


ತಿ.ನರಸೀಪುರ, ಕೊಳ್ಳೇಗಾಲ, ಮಲೆ ಮಹದೇಶ್ವರ ಬೆಟ್ಟ, ಚಾಮರಾಜನಗರ, ಯಳಂದೂರು ಹಾಗೂ ತಮಿಳುನಾಡಿಗೂ ಸಂಪರ್ಕ ಕಲ್ಪಿಸುವ ಹೆದ್ದಾರಿ ಇದಾಗಿದ್ದು, ಇಲ್ಲಿನ ಲಲಿತಮಹಲ್‌ನಗರ ಹಾಗೂ ಗಿರಿದರ್ಶಿನಿ ಬಡಾವಣೆಗಳ ಭಾಗದಿಂದ ಬಹುದೂರದವರೆಗೆ ಈ ರಸ್ತೆಯಲ್ಲಿ (ತಿ.ನರಸೀಪುರ ರಸ್ತೆ) ಬೀದಿ ದೀಪಗಳು ಬೆಳಗದೇ ಸಾರ್ವಜನಿಕರು ಇಲ್ಲಿ ರಾತ್ರಿಯಾದರೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಎರಡು ಬಡಾವಣೆಗಳ ನಿವಾಸಿಗಳು ಹಾಗೂ ಇಲ್ಲಿನ ಆಸುಪಾಸಿನ ನಿವಾಸಿಗಳಲ್ಲಿ ಹೆಚ್ಚಿನ ಸಂಖ್ಯೆಯ ನಾಗರಿಕರು ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದು, ಕಂಪನಿಗಳು, ಕಾರ್ಖಾನೆಗಳಲ್ಲಿ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ಇಲ್ಲಿನ ನಿವಾಸಿಗಳು ತಮ್ಮ ಮನೆಗಳು ಹಾಗೂ ಕರ್ತವ್ಯ ಸ್ಥಳಗಳ ನಡುವೆ ಸಂಚರಿಸಲು ರಸ್ತೆಯಲ್ಲಿ ಆವರಿಸಿರುವ ಕತ್ತಲು ತೀವ್ರ ಅಡಚಣೆ ಉಂಟು ಮಾಡಿದೆ.

ನಮ್ಮ ಬಡಾವಣೆಗಳ ಮಗ್ಗುಲಲ್ಲೇ ಹಾದು ಹೋಗಿರುವ ಈ ಹೆದ್ದಾರಿಯಲ್ಲಿ ಬೀದಿ ದೀಪಗಳು ಬೆಳಗುತ್ತಿಲ್ಲ. ಇದರಿಂದ ರಾತ್ರಿ ವೇಳೆ ಓಡಾಡುವುದು ಕಷ್ಟಕರವಾಗುತ್ತಿದೆ. ಜೊತೆಗೆ ರಸ್ತೆಯೂ ಕಿರಿದಾಗಿದ್ದು, ಅಪಾಯಕಾರಿ ತಿರುವುಗಳು ಇವೆ. ಅಲ್ಲದೆ, ರಸ್ತೆಬೀದಿಯಲ್ಲಿರುವ ಭಾರೀ ಮರಗಳ ಕೊಂಬೆಗಳು ವಿಶಾಲವಾಗಿ ಹರಡಿಕೊಂಡಿದ್ದು, ಈ ಪೈಕಿ ಒಣ ಕೊಂಬೆಗಳ ಪರಿಶೀಲಿಸಿ ತೆರವುಗೊಳಿಸುವ ಕಾರ್ಯ ಸಹ ಆಗಾಗ್ಗೆ ಮಾಡುತ್ತಿಲ್ಲ. ಇದರಿಂದ ಈ ರಸ್ತೆಯಲ್ಲಿ ಆತಂಕದಲ್ಲೇ ಸಂಚರಿಸುವ ಅನಿವಾರ್ಯತೆ ಎದುರಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಾಹನ ಸವಾರರು ಕತ್ತಲಲ್ಲಿ ಸಾರಾಗವಾಗಿ ಸಾಗಲು ಸಾಧ್ಯವಾಗದೇ ಆಗಾಗ್ಗೆ ಅಪಘಾತಗಳು ಸಂಭವಿಸುವುದು ಸಾಮಾನ್ಯವಾಗುತ್ತಿದೆ. ಇಲ್ಲಿ ನಡೆದ ಅಪಘಾತದಲ್ಲಿ ಅನೇಕರು ಗಾಯಗೊಂಡಿದ್ದರೆ, ಕೆಲವರು ಪ್ರಾಣ ಸಹ ಕಳೆದುಕೊಂಡಿದ್ದಾರೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಸ್ಥಳೀಯ ಆಡಳಿತ ಏಕೆ ಗಮನ ಹರಿಸುತ್ತಿಲ್ಲ. ವಿದ್ಯುತ್ ಕಂಬ ಹಾಗೂ ದೀಪಗಳಿದ್ದರೂ ಅವುಗಳು ಏಕೆ ಬೆಳಗುತ್ತಿಲ್ಲ. ಇಷ್ಟು ಸಮಸ್ಯೆಗಳಿದ್ದರೂ ಸಂಬಂಧಿಸಿದವರು ದಿವ್ಯ ನಿರ್ಲಕ್ಷ್ಯ ವಹಿಸಿರುವುದಕ್ಕೆ ಕಾರಣವಾದರೂ ಏನು? ಇನ್ನು ಮುಂದಾದರೂ ಸಂಬಂಧಿಸಿದ ಅಧಿಕಾರಿಗಳು ಇಲ್ಲಿ ಬೀದಿ ದೀಪಗಳು ಬೆಳಗಲು ಕ್ರಮ ವಹಿಸುವ ಜೊತೆಗೆ ರಸ್ತೆಯನ್ನು ಸುಗಮ ಸಂಚಾರಕ್ಕೆ ಪೂರಕವಾಗಿ ಸಜ್ಜುಗೊಳಿಸಲು ಕ್ರಮ ವಹಿಸಬೇಕು. ಇಲ್ಲವಾದರೆ ಮೈಸೂರು ಮಹಾನಗರ ಪಾಲಿಕೆ, ಹೆದ್ದಾರಿ ಪ್ರಾಧಿಕಾರದ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

ಪತ್ರಿಕಾ ವಿತರಕರ ಸಂಘದ ಕ್ಯಾಲೆಂಡರ್ ಇಂದು ಬಿಡುಗಡೆ



ರಾಮದಾಸ್

ಮೈಸೂರು, ಜ.1– ಮೈಸೂರು ನಗರ ಪತ್ರಿಕಾ ವಿತರಕರ ಸಂಘದ 21ನೇ ವಾರ್ಷಿಕೋತ್ಸವದ ಅಂಗವಾಗಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ(ಜ.2) ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಪತ್ರಿಕಾ ವಿತರಕರ ಸಂಘದ ಗೌರವಾಧ್ಯಕ್ಷರಾದ ಮಾಜಿ ಸಚಿವ ಎಸ್.ಎ.ರಾಮದಾಸ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹಾಗೂ ವಿಧಾನಪರಿಷತ್ ಸದಸ್ಯ ಶಿವಕುಮಾರ್ ಅವರನ್ನು ಅಭಿನಂದಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತಿರುವನಂತಪುರಂ ಮೇಯರ್‌ಗೆ ಪ್ರಧಾನಿ ಮೋದಿ ಭಾವುಕ ಪತ್ರ

ತಿರುವನಂತಪುರ, ಜ.1– ಕೇರಳದ ರಾಜಧಾನಿ ತಿರುವನಂತಪುರಂ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಜಯಭೇರಿ ಸಾಧಿಸಿ ಮೇಯರ್ ಹುದ್ದೆಗೇರಿದ ಬಿಜೆಪಿ ಮುಖಂಡರಿಗೆ ಪ್ರಧಾನಿ ನರೇಂದ್ರ ಮೋದಿ ಭಾವನಾತ್ಮಕ ಪತ್ರ ಬರೆದಿದ್ದಾರೆ.



2026ರ ಹೊಸ ವರ್ಷದ ಸುಸಂದರ್ಭದಲ್ಲಿ ಮೇಯರ್ ಆಗಿ ನೇಮಕವಾಗಿರುವ ವಿವಿ ರಾಜೇಶ್ ಹಾಗೂ ಉಪ ಮೇಯರ್ ಆಶಾ ನಾತ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ಹಾಗೆಯೇ ಈ ಅಭೂತಪೂರ್ವ ಜಯಕ್ಕೆ ಕಾರಣವಾದ ಸ್ಥಳೀಯ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ವಿವಿ ರಾಜೇಶ್

ಇದೇ ಸಂದರ್ಭದಲ್ಲಿ ಕೇರಳದ ಜತೆಗಿನ ನಂಟನ್ನು ಸ್ಮರಿಸಿಕೊಂಡಿರುವ ನರೇಂದ್ರ ಮೋದಿ, ತಿರುವನಂತಪುರಂನೊಂದಿಗಿನ ತಮ್ಮ ನೆನಪನ್ನು ಹಂಚಿಕೊಂಡಿದ್ದಾರೆ. ಪದ್ಮನಾಭ ಸ್ವಾಮಿಯ ಅನುಗ್ರಹ ಪಡೆದಿರುವ ನನಗೆ ಕೇರಳದ ಈ ನೆಲದ ಮೇಲೆ ವಿಶೇಷ ಅಭಿಮಾನವಿದೆ ಎಂದಿದ್ದಾರೆ.

ಹಾಗೆಯೇ ತಿರುವನಂತಪುರ ನಗರವು ಹಲವಾರು ನಾಯಕರು, ಸಮಾಜ ಸುಧಾರಕರು, ಕಲಾವಿದರು, ಕವಿಗಳು, ಸಂಗೀತಗಾರರು, ಸಾಂಸ್ಕೃತಿಕ ದಿಗ್ಗಜರು, ಸಂತರನ್ನು ಹೊಂದಿರುವ ನಾಡಾಗಿದೆ. ಇಂಥ ನಗರವು ನಮ್ಮ ಪಕ್ಷಕ್ಕೆ ಆಶೀರ್ವಾದ ಮಾಡಿರುವುದು ಹೆಮ್ಮೆಯ ವಿಚಾರ ಎಂದಿದ್ದಾರೆ.

ಕೇರಳ ಹಾಗೂ ದೇಶದ ಅಗಣಿತ ಬಿಜೆಪಿ ಕಾರ್ಯಕರ್ತರ ಪರವಾಗಿ ಈ ಹೆಮ್ಮೆಯ ವಿಚಾರವನ್ನು ಹೇಳಿಕೊಳ್ಳಲು ಖುಷಿಯಾಗುತ್ತದೆ. ತಿರುವನಂತಪುರಂ ಜನತೆಯ ಈ ತೀರ್ಪು ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯುವ ವಿಚಾರವಾಗಿದೆ ಎಂದು ಮೋದಿ ಹೇಳಿದ್ದಾರೆ.

ದಶಕಗಳ ಕಾಲ ಕೇರಳದಲ್ಲಿನ ಬಿಜೆಪಿ ಕಾರ್ಯಕರ್ತರು ಕಠಿಣ ಹಾದಿಯನ್ನು ಸವೆಸಿ ಬಂದಿದ್ದಾರೆ. ಕೇರಳದ ಎಲ್‌ಡಿಎಫ್ ಹಾಗೂ ಯುಡಿಎಫ್ ಮೈತ್ರಿಕೂಟದ ದುರಾಡಳಿತವನ್ನು ವರ್ಷಗಳ ಕಾಲ ಇಲ್ಲಿನ ಜನರು ನೋಡಿದ್ದಾರೆ.ಇನ್ನೊಂದೆಡೆ ಕೇರಳದ ಸಂಸ್ಕೃತಿಯನ್ನು ನಾಶಪಡಿಸುವ ಪ್ರಯತ್ನವನ್ನು ಈ ಕೂಡ ಮಾಡುವುದರ ಜತೆಗೆ ದುರಾಡಳಿತ ಹಾಗೂ ಭ್ರಷ್ಟಾಚಾರದ ಮೂಲಕ ರಾಜ್ಯದ ಜನತೆಗೆ ಮೋಸ ಮಾಡಿದ್ದಾರೆ.

ಬಿಜೆಪಿ ಸಂಘಟನೆಯ ಮೇಲಿನ ನಿರಂತರ ಹಿಂಸಾಚಾರದ ಬಳಿಕವು ಕಾರ್ಯಕರ್ತರು ಪಕ್ಷಕ್ಕಾಗಿ ಧೈರ್ಯದಿಂದ ಎದೆ ತಟ್ಟಿ ನಿಂತಿದ್ದಾರೆ. ಜನರ ಧ್ವನಿಯಾಗಿ ಪಕ್ಷದ ಬಾವುಟವನ್ನು ಹಿಡಿದು ಧೈರ್ಯದಿಂದ ನಿಂತಿದ್ದಾರೆ ಎಂದು ಮೋದಿ ಕೊಂಡಾಡಿದ್ದಾರೆ. ಇಂದು ಭಾರತ ಮೊದಲು ಎನ್ನುವ ನಮ್ಮ ಸಿದ್ಧಾಂತದೊಂದಿಗೆ ನಿಂತು ಹೋರಾಡಿದ ಹಲವು ಕಾರ್ಯಕರ್ತರು ನಮ್ಮೊಂದಿಗೆ ಇಲ್ಲ. ಆದಾಗ್ಯೂ ಈ ಗೆಲುವು ಅವರಿಗೆ ಖುಷಿ ತರಿಸಲಿದೆ ಎಂದು ಮೋದಿ ಭಾವುಕ ನುಡಿಗಳನ್ನು ಬರೆದಿದ್ದಾರೆ. ಮೋದಿ ಅವರ ಪತ್ರವನ್ನು ರಾಜೇಶ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಸಂಕ್ರಾಂತಿ ಅಂಗವಾಗಿ ಆಹಾರ ಮೇಳ, ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜ.1–ಬಡಗನಾಡು ಬಳಗ ಮೈಸೂರು ವತಿಯಿಂದ ಜ.4ರಂದು ಸಂಕ್ರಾಂತಿ ಹಬ್ಬದ ಅಂಗವಾಗಿ ಮೈಸೂರಿನ ರಾಮಕೃಷ್ಣನಗರದಲ್ಲಿರುವ ಬಡಗನಾಡು ಭವನದಲ್ಲಿ ಸಂಕ್ರಾಂತಿ ಮೇಳ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಆಹಾರ ಮೇಳ ಬೆಳಗ್ಗೆ 10ರಿಂದ ಸಂಜೆ 7ರವರೆಗೆ ನಡೆಯಲಿದೆ. ಉಚಿತ ಆರೋಗ್ಯ ತಪಾಸಣಾ ಶಿಬಿರ ಮಧ್ಯಾಹ್ನ 1ರಿಂದ ಸಂಜೆ 6ರವರೆಗೆ ನಡೆಯಲಿದೆ.

WANTED
1.DELIVERY BOYS
With or Without Experience but Having Own Vehicle
2.COUNTER BOYS
With Experience in Working in Retail Medical Stores and Having Own Vehicle.
SEND RESUME TO:
The Manager, Raghulal and Company, Sayyaji Rao Road, Mysore 570001

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ

ಶ್ರೀಮತಿ ಭದ್ರಮ್ಮರವರು
ಶ್ರೀ ಚೆಲುವೇಗೌಡ ರವರ ಧರ್ಮಪತ್ನಿ (Civil Contractor) ನಿಧನ: 23-12-2025
ಇವರು ದಿನಾಂಕ: 23–12–2025ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ : 02–01–2026ನೇ ಶುಕ್ರವಾರ ಬೆಳಗ್ಗೆ 11.30 ಗಂಟೆಗೆ ಗೋಕುಲಂ ರುದ್ರಭೂಮಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ. ಭೋಜನ : ಮ. 1 ಗಂಟೆಗೆ ಸ್ಥಳ : ಸ್ವಗೃಹ, #369, ಸೂರ್ಯಬೇಕರಿ ಮುಖ್ಯ ರಸ್ತೆ, ವಿಜಯನಗರ ರೈಲ್ವೇ ಲೇಔಟ್, ಮೈಸೂರು
ದುಃಖತಪ್ತರು : ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

WANTED – SALES STAFF
REQUIRED SALESMAN / SALESGIRL - 5 Nos.
For Men's Ethnic Wear Showroom
Location: JP Nagar, Mysore
Salary + Incentives
Rs.15,000 – Rs. 25,000 per month
Interested candidates please contact:
Shivkumar : 94803 25758

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರಿವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ: 13,000 (24 CT)
Mob: 9108146123

40'x60' - N/F SITE FOR SALE
₹ 93 Lakhs
MUDA APPROVED SITE
8 kms from KR Circle
3 kms from APMC Yard
1 km from Ring Road
Near Utthanalli, Mysore.
Call: 99649-23399

COMMERCIAL BUILDING FOR SALE
@ Nanjumalige
30x35. Contact:
Mob: 9480988340

ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು ಅದರ ಮಾಲೀಕರುಗಳಾದ ಮೈಸೂರು ಸಿಟಿ, ಹಿನಕಲ್, ಹಳೆ ಅಂಚೆ ಕಛೇರಿ ರಸ್ತೆ, ಸುಪ್ರಿಯ ಆಸ್ಪತ್ರೆ ಹತ್ತಿರ, ಮನೆ ನಂ.968/1 ರಲ್ಲಿ ವಾಸವಾಗಿರುವ ಲೇಟ್ ಕೆಂಪೇಗೌಡ ರವರ ಮಗನಾದ ಶ್ರೀ. ಕೃಷ್ಣಗೌಡ ಕೆ. ಮೈಸೂರು ಸಿಟಿ, ಜೆ.ಪಿ. ನಗರ, 31ನೇ ಮುಖ್ಯ ರಸ್ತೆ, 26ನೇ ಅಡ್ಡ ರಸ್ತೆ, ಮನೆ ನಂ.172 ರಲ್ಲಿ ವಾಸವಾಗಿರುವ ಲೇಟ್ ಷಡಾಕ್ಷರಿ ರವರ ಧರ್ಮಪತ್ನಿಯಾದ ಶ್ರೀಮತಿ ಬಿ.ಎಸ್. ಸಿದ್ದಲಿಂಗಮ್ಮ ಹಾಗೂ ತುಮಕೂರು ಜಿಲ್ಲೆ, ತಿಪಟೂರು ಟೌನ್, ಮನೆ ನಂ.172 ರಲ್ಲಿ ವಾಸವಾಗಿರುವ ಶ್ರೀ. ಬಿಲ್ವರಾಜು ರವರ ಧರ್ಮಪತ್ನಿಯಾದ ಶ್ರೀಮತಿ ಬಿ.ವಿ. ಸುರೇಖ ರವರಿಂದ ಜಂಟಿ ಭೂ ಅಭಿವೃದ್ಧಿ ಕರಾರನ್ನು ಮಾಡಿಕೊಳ್ಳಲು ಮುಂದಾಗಿರುತ್ತಾರೆ.
ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಭೂ ಅಭಿವೃದ್ಧಿ ಕರಾರನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಭೂ ಅಭಿವೃದ್ಧಿ ಕರಾರನ್ನು ನೊಂದಣಿ ಮಾಡಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.
ಷೆಡ್ಯೂಲ್ ಸ್ವತ್ತಿನ ವಿವರ
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕಳಲವಾಡಿ ಗ್ರಾಮದಲ್ಲಿರುವ ಸರ್ವೆ ನಂ.189 ರ ವಿಸ್ತೀರ್ಣ 3 ಎಕರೆ ಜಮೀನು ಇದಕ್ಕೆ ಚೆಕ್ಕುಬಂಧಿ: ಪೂರ್ವಕ್ಕೆ : ಸರ್ವೆ ನಂ.148 ರ ಉಳಿಕೆ ಜಮೀನು ಮತ್ತು ಸರ್ವೆ ನಂ.179, ಪಶ್ಚಿಮಕ್ಕೆ : ಉದ್ಬೂರು ಗಡಿ, ಉತ್ತರಕ್ಕೆ : ಸರ್ಕಾರಿ ಓಣಿ ಮತ್ತು ಸರ್ವೆ ನಂ.148 ರ ಉಳಿಕೆ ಜಮೀನು, ದಕ್ಷಿಣಕ್ಕೆ: ಸರ್ವೆ ನಂ.148 ರ ಉಳಿಕೆ ಜಮೀನು ಮತ್ತು ಸರ್ವೆ ನಂ.175
Sd/- RAVI KIRAN. S, B.Sc., LL.B. ADVOCATE, KAR 713/2000, #1143/1E, 1st Floor, Chanakya Circle, Geetha Road, Chamarajapuram,Mysuru Ph: 9980776068
ದಿನಾಂಕ: 01–01–2026, ಸ್ಥಳ: ಮೈಸೂರು.

HP ಕೇವಲ ₹749/ ಪ್ರತಿ ಚದರ ಅಡಿ
ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ಬುಕಿಂಗ್ ಪ್ರಾರಂಭವಾಗಿದೆ
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
MUDA LIMITS
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
88840 71010
90713 86615

ಮೈಸೂರಿನಲ್ಲಿ DTCP Approved ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ
1) ಟಿ.ನರಸೀಪುರ ಮುಖ್ಯ ರಸ್ತೆ.
2) ಹೆಚ್.ಡಿ. ಕೋಟೆ ಮುಖ್ಯ ರಸ್ತೆ
3) ಕೆಲ್ಲಹಳ್ಳಿ ಪೆರಿಫೆರಲ್ ರಿಂಗ್ ರಸ್ತೆ.
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
Mob: 7411914135

14ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 14 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಗಳು: M.C. ಮಮತ, B.S. ಜಗದೀಶ್, ಹಾಗೂ ಕುಟುಂಬ ವರ್ಗದವರು
ಡಾ|| ಎಂ.ಎಸ್.ಚೆಲುವೇಗೌಡ
ಬೃಂದಾವನ ಬಡಾವಣೆ, ಮೈಸೂರು
ನಿಧನ : 2.1.2012

PROPERTIES FOR SALE
Ready for Registration
Prime Locations
43x93
East Facing Ashokapuram Railway Station 100 Mtr Near Bedarakanappa Temple.
40x60
Commercial Site East Facing Ramakrishna Nagar, 'H' Block
42.5x100
Commercial Property, 80 Feet Road Near NIE College Road ,
(Brokers Excuse)
9844924966

G9 projects Designing your Dreams
Vee2 Developers
SHOURYA LAYOUT
Adjoing
4TH STAGE VIJAYNAGAR
Plot Size 20×30 ₹ 29,00,000/-
MUDA APPROVED LAYOUT
Ready for Registration
8088-707-707

ಹಸಿರು ನಮ್ಮ ಉಸಿರು

ಮೊದಲನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ 1 ವರ್ಷ ಕಳೆದರೂ ನೀವು ನಮಗೆ ತೋರಿದ ಪ್ರೀತಿ, ಧೈಯ, ಆದರ್ಶ, ಸದ್ಗುಣಗಳು ನಮ್ಮ ಮನದಲ್ಲಿ ಅಚ್ಚಳಿಯದೆ ಉಳಿದಿದೆ, ಸದಾ ನಿಮ್ಮ ನೆನಪಿನಲ್ಲಿರುವ
ಶ್ರೀಮಾನ್ ಪರ್ವತಪ್ಪ ನವರು
ನಿಧನ 02-01-2025
ದುಃಖತಪ್ತರು : ಧರ್ಮಪತ್ನಿ ಪ್ರೇಮಮ್ಮ, ಮಕ್ಕಳು, ಸೊಸೆ, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು.

ಕಳೆದಿದೆ
H.B. ನರಸಿಂಹೇಗೌಡರಿಗೆ ಸೇರಿದ ಸೈಟ್ ನಂ–84, ಚಿಕ್ಕಹರದನಹಳ್ಳಿ (ಶ್ರೀರಾಂಪುರ 2ನೇ ಹಂತ). ಮೈಸೂರು ಇವರ ನಿವೇಶನಕ್ಕೆ ಸಂಬಂಧಪಟ್ಟ ಸ್ವಾಧೀನ ಪತ್ರ, ಖಾತೆ ಹಾಗೂ ಮಂಜೂರಾತಿ ಪತ್ರ ಕಳೆದುಹೋಗಿದೆ. ಯಾರಿಗಾದರೂ ಸಿಕ್ಕಿದರೆ ದಯವಿಟ್ಟು ಈ ಫೋನ್ ನಂಬರಿಗೆ ಕರೆಮಾಡಿ ತಿಳಿಸಬೇಕಾಗಿ ವಿನಂತಿ.
9986540236
9342666789

ಸಾರ್ವಜನಿಕ ಪ್ರಕಟಣೆ
ನನ್ನ ಕಕ್ಷಿದಾರರ ಇರಾದೆ ಮೇರೆಗೆ ಈ ನೋಟೀಸ್ ಅನ್ನು ಸಾರ್ವಜನಿಕ ಪ್ರಕಟಣೆಗಾಗಿ ನೀಡಲಾಗುತ್ತಿದೆ. ಏನೆಂದರೆ ಮನೆ ನಂ. 2954, 1ನೇ ಮೇನ್, 2ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮೈಸೂರು–570009 ಈ ಮನೆ ಲೇಟ್ ಎ.ವಿ.ಚಂಪಕಮಾಲಿನಿ ರವರ ಹೆಸರಿನಲ್ಲಿ ಇರುತ್ತದೆ ಮತ್ತು ಇದು ನ್ಯಾಯಾಲಯದ ವ್ಯಾಪ್ತಿಯಲ್ಲಿ ಇದ್ದು, ಓ.ಎಸ್. ನಂ.802/2021, 5ನೇ ಅಡಿಶನಲ್ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮೈಸೂರು, ಇಲ್ಲಿ ದಾವೆಯು ನಡೆಯುತ್ತಿರುತ್ತದೆ. ಈ ಮನೆಯ ಮೇಲೆ ಸಾರ್ವಜನಿಕರು ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.
ಮನೆ ಸಂಖ್ಯೆ : 2954, 1ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮೈಸೂರು – 570009
ವಕೀಲರು
ಕೆ. ರಾಮಕೃಷ್ಣ., ಎಂ.ಎ., ಎಲ್.ಎಲ್.ಬಿ
ವಕೀಲರು, KAR-346/06
1568 ಎರಡನೇ ಕ್ರಾಸ್, ಹೊಸಕೇರಿ ಕೆ.ಆರ್.ಮೊಹಲ್ಲಾ, ಮೈಸೂರು– 570 001
ಮೊ: 91087 47659

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಸಂಖ್ಯೆ/ಮೈಅಪ್ರಾ/ವ.ಕ–2/ಪಿ.ಆರ್–106/2025–26 ದಿನಾಂಕ : 29.12.2025
ಪತ್ರಿಕಾ ಪ್ರಕಟಣೆ
ಶ್ರೀ. ಎಸ್.ಕೆ.ಮದುಸೂಧನ ಬಿನ್ ಶ್ರೀ.ಕೃಷ್ಣ ಅಯ್ಯಂಗಾರ್ ರವರಿಗೆ ಮೈಸೂರು ನಗರದ ಜಯನಗರ ಟಿ ಕೊಪ್ಪಲು (ಕುವೆಂಪುನಗರ) ಜಿ ಮತ್ತು ಹೆಚ್ ಬ್ಲಾಕ್ ಬಡಾವಣೆಯಲ್ಲಿ ನಿವೇಶನ ಸಂಖ್ಯೆ: 1074 ಅಳತೆ 49.20+44.95/2 x 60 ಅಡಿ ನಿವೇಶನವು ನಗರ ವಿಶ್ವಸ್ಥ ಮಂಡಳಿಯಿಂದ ದಿನಾಂಕ: 17.05.1985 ರಂದು ಹರಾಜಿನಲ್ಲಿ ಪಡೆದಿದ್ದು, ದಿನಾಂಕ: 27.07.1985 ರಂದು ಸ್ವಾಧೀನ ಪತ್ರವನ್ನು ಪಡೆದಿರುತ್ತಾರೆ. ಕಡತ ಪರಿಶೀಲಿಸಲಾಗಿ ಮೂಲ ಮಂಜೂರಾತಿದಾರರಾದ ಶ್ರೀ. ಎಸ್.ಕೆ.ಮದುಸೂಧನ ರವರು ದಿನಾಂಕ: 08.07.1985 ರಂದು ಶ್ರೀ.ವಿ.ರಘುನಾಥ್ ಬಿನ್ ಲೇಟ್.ವರದರಾಜು ರವರಿಗೆ ನೋಂದಾಯಿತ ವಲ್ಲದ ಜಿ.ಪಿ.ಎ ನೀಡಿರುತ್ತಾರೆ. ತದನಂತರ ಸದರಿ ಜಿಪಿಎದಾರರಾದ ಶ್ರೀ.ವಿ. ರಘುನಾಥ್ ರವರು ಶ್ರೀಮತಿ. ವಿ.ವೀಣಾ ರವರಿಗೆ ಉಪ ನೋಂದಣಾಧಿಕಾರಿ ಮೈಸೂರು ನಗರ ಕೇಂದ್ರ ಕಛೇರಿಯಲ್ಲಿ 1ನೇ ಪುಸ್ತಕದ 3909 ಸಂಪುಟದಲ್ಲಿ 56–62ನೇ ಪುಟದಲ್ಲಿ 2989ನೇ ನಂಬರಾಗಿ ದಿನಾಂಕ: 09.09.1988 ರಂದು ನೋಂದಾಯಿತ ಶುದ್ಧ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಕ್ರಯದಾರರಾದ ಶ್ರೀಮತಿ.ವಿ. ವೀಣಾ ರವರು ಕ್ರಯಪತ್ರ ಕೋರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುವುದರಿಂದ, ಸದರಿಯವರ ಹೆಸರಿಗೆ ಮೇಲ್ಕಂಡ ನಿವೇಶನವನ್ನು ವರ್ಗಾವಣೆ ಮತ್ತು ಕ್ರಯಪತ್ರ ನೀಡುವ ಸಂಬಂಧ ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.
ಸಹಿ/– ವಿಶೇಷ ತಹಸೀಲ್ದಾರ್,
ವಲಯ ಕಛೇರಿ–2
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ನಕ್ಕರೆ ಅದೇ ಸ್ವರ್ಗ

ಅಟೆಂಡರ್: ಯಾಕೆ ಸರ್. ಸ್ಕೂಲಿಗೆ ಒಳ್ಳೆ ಫಲಿತಾಂಶ ಬಂದಿದ್ರೂ ಸಪ್ಪಗಿದ್ದೀರಾ?
ಮೇಷ್ಟ್ರು : 150 ವಿದ್ಯಾರ್ಥಿಗಳಲ್ಲಿ ಒಬ್ಬ ಫೇಲಾಗಿ ಬಿಟ್ಟಿದ್ದಾನೆ. ಅದಕ್ಕೆ ಬೇಜಾರು!
ಅಟೆಂಡರ್: ಒಬ್ಬನೇ ತಾನೇ ಅದಕ್ಯಾಕೆ ಬೇಜಾರ್ ಮಾಡ್ಕೋತ್ತೀರಾ?
ಮೇಷ್ಟ್ರು : ಆ ಹುಡುಗನೇ ನನ್ನ ಮಗ ಕಣ್ರೀ.

ಮೈಸೂರು ಮಿತ್ರ

ಶುಕ್ರವಾರ, ಜನವರಿ 2, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಜಗತ್ತು ಎಷ್ಟೇ ತಂತ್ರಜ್ಞಾನ ಹೊಂದಿದ್ದರೂ ಅನ್ನವನ್ನು ಆನ್‌ಲೈನ್‌ನಲ್ಲಿ ಬೆಳೆಯಲಾಗುವುದಿಲ್ಲ. ರೈತರ ಬೆವರಿನಿಂದ ಮಾತ್ರ ಸಾಧ್ಯ.

ವೇದ ಸುಳ್ಳಾದರೂ { ಪ್ರಾಮಾಣಿಕತೆಯಿಂದಲೇ
ಗಾದೆ ಸುಳ್ಳಾಗದು { ಪಾರಮಾರ್ಥ

ನಿಮ್ಮ ಪತ್ರಗಳು

ಪ್ರಯಾಣಿಕ ತಂಗುದಾಣಗಳಲ್ಲಿ ವಿದ್ಯುತ್ ತಂತಿಗಳೇ ಮೇಲ್ಛಾವಣಿ



ಮಾನ್ಯರೇ,

ರಾಜ್ಯದ ಮುಖ್ಯಮಂತ್ರಿಗಳ ತವರೂರಾದ ಮೈಸೂರಿನಲ್ಲಿ ಜನರ ಜೀವಕ್ಕೆ ಯಾವುದೇ ಬೆಲೆಯಿಲ್ಲದಂತಾಗಿದೆ. ಮೊನ್ನೆ ಮೊನ್ನೆಯಷ್ಟೆ ಮೈಸೂರು ಅರಮನೆಯ ಬಳಿ ಬಲೂನ್ ಬ್ಲಾಸ್ಟ್‌ನಿಂದ ಸಾವು ನೋವು ಕಂಡಿರುವ ಮೈಸೂರಿನಲ್ಲಿ ಕಾನೂನು ಸುವ್ಯವಸ್ಥೆ ವೈಫಲ್ಯಗಳಿಗೆ ಹಾಗೂ ಮಹಾನಗರ ಪಾಲಿಕೆಯ ನಿದ್ರಾವಸ್ಥೆಗೆ ಹತ್ತು ಹಲವು ಸಮಸ್ಯೆಗಳು ಕೈಗನ್ನಡಿಯಂತಿವೆ. ಮೈಸೂರು ನಗರದಾದ್ಯಂತ ಹಲವು ಕಡೆ ಹಳ್ಳ ಬಿದ್ದ ರಸ್ತೆಗಳು, ಬಾಯಿ ತೆರೆದು ಬಲಿಗಾಗಿ ಕಾದು ಕುಳಿತಿರುವ ಮ್ಯಾನ್ ಹೋಲ್‌ಗಳು, ಅನಧಿಕೃತ ರಸ್ತೆ ಡುಬ್ಬಗಳು ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿವೆ.

ಪ್ರಮುಖ ಬೀದಿಗಳಲ್ಲಿ ವ್ಯಾಪಾರಿಗಳು ಪಾದಚಾರಿ ರಸ್ತೆಗಳನ್ನು ಅತಿಕ್ರಮಣ ಮಾಡಿಕೊಳ್ಳುವುದು ಅವರ ಆಜನ್ಮ ಸಿದ್ಧ ಹಕ್ಕಿನಂತಾಗಿದೆ. ಇನ್ನು ನಗರದ ಬಹುತೇಕ ಕಡೆ ಬಸ್ ಸಂಚಾರಿಗಳಿಗೆ ಪ್ರಯಾಣಿಕರ ತಂಗುದಾಣಗಳಿಲ್ಲ. ತಂಗುದಾಣಗಳ ಬಳಿ ಬಸ್ ನಿಲ್ಲುವುದಿಲ್ಲ. ಇರುವ ತಂಗುದಾಣಗಳು ಯಮನ ಆವಾಸ ತಾಣಗಳಂತೆ ಭಾಸವಾಗುತ್ತಿವೆ. ಇದಕ್ಕೊಂದು ಸಣ್ಣ ಉದಾಹರಣೆ ಜೆ.ಪಿ.ನಗರದ ಬಳಿ ಇರುವ ವಿದ್ಯಾರಣ್ಯಪುರಂ ಆರಕ್ಷಕ ಠಾಣೆಯ ಮುಂದಿರುವ ತಂಗುದಾಣ. ಈ ತಂಗುದಾಣಕ್ಕೆ ಕುಳಿತುಕೊಳ್ಳುವ ಆಸನ ವ್ಯವಸ್ಥೆಯುಂಟು; ಆದರೆ ಕುಳಿತವರ ಪ್ರಾಣಕ್ಕೆ ಯಾವುದೇ ಗ್ಯಾರಂಟಿಯಿಲ್ಲ. ಇಲ್ಲಿ ಮಳೆ ಬರಲಿ, ಬಿಸಿಲಿರಲಿ ವಿದ್ಯುತ್ ತಂತಿಗಳೇ ಈ ಜನರಿಗೆ ಆಶ್ರಯ ನೀಡುತ್ತಿರುವ ಮೇಲ್ಛಾವಣಿಗಳು. ಅನಾಹುತ ಆದ ಮೇಲೆ ಪರಿಹಾರ ನೀಡುವ ಮೊಸಳೆ ಕಣ್ಣೀರಿನ ಮಂತ್ರಿಗಳಾಗಲಿ, ಮುಖ್ಯ ಮಂತ್ರಿಗಳೇ ಆಗಲಿ, ಶಾಸಕರಾಗಲಿ, ಆಡಳಿತ ಚುಕ್ಕಾಣಿ ಹಿಡಿದಿರುವ ಸಂಬಂಧಪಟ್ಟ ಅಧಿಕಾರಿಗಳಾಗಲಿ ಆದಷ್ಟು ಬೇಗ ಇಂತಹ ಸಮಸ್ಯೆಗಳಿಗೆ ಅಂತ್ಯಕಾಣಿಸಿ ಜನರ ಬದುಕನ್ನು ಹಸನಾಗಿಸಿರಿ ಎಂದು ಈ ಮೂಲಕ ಮನವಿ.

–ನಂದೀಶ ಬಿ., ಹದಿನಾರು

ವಿದೇಶಿ ವಸ್ತು ಸಂಗ್ರಹಾಲಯದಿಂದ ನಾಡಿನ ಶಿಲ್ಪಗಳನ್ನು ಹಿಂಪಡೆಯಿರಿ

ಮಾನ್ಯರೆ,

ಕರ್ನಾಟಕದ ಸಂಸ್ಕೃತಿ ಮತ್ತು ಐತಿಹಾಸಿಕ ಪರಂಪರೆಯ ಭಾಗವಾಗಿರುವ ಅನೇಕ ಅಮೂಲ್ಯವಾದ ಶಿಲ್ಪಗಳು ಮತ್ತು ಕಲಾಕೃತಿಗಳನ್ನು ವಿದೇಶಿಗರು ಕದ್ದೊಯ್ದು ತಮ್ಮ ತಮ್ಮ ವಸ್ತು ಸಂಗ್ರಹಾಲಯದಲ್ಲಿ ಇಟ್ಟುಕೊಂಡಿರುವುದು ಜನಜನಿತ. ಇವುಗಳನ್ನು ಹಿಂತೆಗೆದುಕೊಳ್ಳುವು ಅತ್ಯಾವಶ್ಯಕ. ಉದಾಹರಣೆಗೆ ಬ್ರಿಟಿಷ್ ಮ್ಯೂಸಿಯಂ (ಲಂಡನ್), ಲೂವ್ರೇ ಮ್ಯೂಸಿಯಂ (ಪ್ಯಾರಿಸ್), ಬೋಸ್ಟನ್ ಮ್ಯೂಸಿಯಮ್ ಆಫ್ ಫೈನ್ ಆರ್ಟ್ (ಅಮೆರಿಕ) ಮತ್ತು ಏಷಿಯನ್ ಆರ್ಟ್ ಮ್ಯೂಸಿಯಮ್ (ಸಾನ್ ಫ್ರಾನ್ಸಿಸ್ಕೋ)ಗಳಲ್ಲಿ ನಮ್ಮ ಕನ್ನಡ ಇತಿಹಾಸ ಸಂಸ್ಕೃತಿ ಬಿಂಬಿಸುವ ಅಮೂಲ್ಯವಾದ ಶಿಲ್ಪಗಳು ಹಲವಾರು ವರ್ಷಗಳಿಂದ ಉಳಿದುಕೊಂಡಿವೆ. ಇವುಗಳು ಹೊಯ್ಸಳ, ವಿಜಯನಗರ ಮತ್ತು ಚಾಲುಕ್ಯ ಕಾಲಘಟ್ಟಗಳ ಶಿಲ್ಪಕಲೆಯ ಅತ್ಯುತ್ತಮ ಉದಾಹರಣೆಗಳಾಗಿವೆ. ಈ ಶಿಲ್ಪಗಳು ಕೇವಲ ಕಲೆಯ ಪ್ರತಿಬಿಂಬವಲ್ಲ, ಅವು ನಮ್ಮ ಧಾರ್ಮಿಕ ಹಾಗೂ ಐತಿಹಾಸಿಕ ಪರಂಪರೆಯ ಭಾಗವಾಗಿವೆ. ಈ ಶಿಲ್ಪಗಳನ್ನು ಕರ್ನಾಟಕಕ್ಕೆ ಹಿಂತೆಗೆದು, ನಮ್ಮ ಕಲಾ ಸಂಗ್ರಹಗಳಲ್ಲಿ ಪ್ರದರ್ಶಿಸುವುದರಿಂದ, ನಮ್ಮ ಸಂಸ್ಕೃತಿಯ ಮಹತ್ವವನ್ನು ಮುಂದಿನ ಪೀಳಿಗೆಗೆ ಪರಿಚಯಿಸಬಹುದು. ಆದ್ದರಿಂದ ನಮ್ಮ ಕರ್ನಾಟಕ ಸರ್ಕಾರ ಈ ಅಮೂಲ್ಯವಾದ ಶಿಲ್ಪಗಳನ್ನು ಮತ್ತು ಕಲಾಕೃತಿಗಳನ್ನು ಹಿಂಪಡೆಯಬೇಕು.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.

ಕಾನೂನಿನ ಮುಂದೆ ಎಲ್ಲರು ಒಂದೇ ಅಲ್ಲವೆ?

ಮಾನ್ಯರೆ,

ಶ್ರೀಸಾಮಾನ್ಯ ತನ್ನ ಸ್ವತ್ತಿನ ವಿಚಾರವಾಗಿ ಖಾತೆ ಮಾಡಿಸಿಕೊಳ್ಳಲು, ಕಂದಾಯ ಕಟ್ಟಲು, ಟೈಟಲ್ ಡೀಡ್ ಪಡೆಯಲು, ಇ–ಖಾತಾ ಮಾಡಿಸಲು, ಮನೆ ನಿರ್ಮಿಸಲು ನಕ್ಷೆ ಅನುಮೋದನೆ ಪಡೆಯಲು, ಮನೆ ನಿರ್ಮಾಣದ ನಂತರ ಕಂಪ್ಲೀಷನ್ ರಿಪೋರ್ಟ್ ಪಡೆಯಲು, ಕೂರಲು, ನಿಲ್ಲಲು ಅನುಮತಿ ಪಡೆಯುವುದಕ್ಕಾಗಿ ಸರಕಾರಿ ಕಚೇರಿಗಳಿಗೆ ಅಲೆದೂ ಅಲೆದೂ ಚಪ್ಪಲಿಯ ಜೊತೆಗೆ ಕಾಲೂ ಸವೆಸಿಕೊಳ್ಳಬೇಕಾಗುತ್ತದೆ. ನ್ಯಾಯಾಲಯದ ಮೆಟ್ಟಿಲೇರಿ ಆದೇಶ, ನಿರ್ದೇಶನ, ಘೋಷಣೆ ತೀರ್ಪು ಡಿಕ್ರಿ ತಂದರೂ ಸಹ ನಮ್ಮ ಪಾಲಿಕೆ,ಪ್ರಾಧಿಕಾರ ಹಾಗೂ ಕಂದಾಯ ಇಲಾಖೆಗಳು ಕ್ಯಾರೇ ಎನ್ನುವುದಿಲ್ಲ.


ಆದರೆ ಯಲಹಂಕದ ಕೋಗಿಲು ಪ್ರಕರಣದಲ್ಲಿ ಸರಕಾರವೇ ಮುಂದೆ ನಿಂತು ಅಕ್ರಮಾದಿತ್ಯರ ಮುಂದೆ ಮಂಡಿಯೂರಿ ಶರಣಾಗಿ ಶರವೇಗದಲ್ಲಿ ಅವರ ಬೇಡಿಕೆಗಳನ್ನು ಈಡೇರಿಸಲು ಮುಂದಾಗಿದ್ದು ಹೇಗೆ?

ಭಾರತಿಯ ಸಾಕ್ಷ್ಯ ಸಂಹಿತೆ 2023,ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ಹಾಗೂ ಭಾರತೀಯ ನ್ಯಾಯ ಸಂಹಿತೆ 2023 ಇತ್ಯಾದಿ ಸಂಹಿತೆಗಳು ಯಲಹಂಕದ ಕೋಗಿಲಿಗೆ ಅನ್ವಯಿಸುವುದಿಲ್ಲವೇ?

ಯಲಹಂಕದ ಕೋಗಿಲು ಭಾರತದ ಭಾಗವಲ್ಲವೇ?

ಕಾನೂನಿನ ಮುಂದೆ ಎಲ್ಲರೂ ಸಮಾನರು. ಕೆಲವರು ಹೆಚ್ಚು ಸಮಾನರು!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ದೇಹದ ನೆನಪುಗಳು ಋಣಾನುಬಂಧ ತೊಡೆದು ಹಾಕುವುದು



ಋಣಾನುಬಂಧವನ್ನು ಪೋಷಕರಿಂದ ಮಗುವಿಗೆ ರವಾನಿಸಲ್ಪಡುವ ಅನುವಂಶಿಕ ಅಂಶಗಳ ಜತೆ ಸಮೀಕರಣ ಮಾಡಬಾರದು. ನೀವು ಎಲ್ಲಿಂದ ಬಂದಿರೆಂಬ ಒಂದು ದೈಹಿಕ ನೆನಪು ಅದು ಅಗತ್ಯವಾಗಿ ನಿಮ್ಮ ಚರ್ಮದ ಬಣ್ಣ, ನಿಮ್ಮ ಮೂಗಿನ ಆಕಾರ, ನಿಮ್ಮ ದೇಹದಾಕಾರ ಇತ್ಯಾದಿಗಳಿಂದ ಬಂದುದಲ್ಲ. ನಿಮ್ಮ ದೇಹವು ಯಾವುದೇ ರೀತಿಯ ಆತ್ಮೀಯತೆ ಮತ್ತೊಂದು ಭೌತಿಕ ಶರೀರದೊಂದಿಗೇ ಅಲ್ಲದೆ ಯಾವುದೇ ಭೌತಿಕ ವಸ್ತುಗಳಾಗಿರಬಹುದು ಎಲ್ಲವನ್ನೂ ನೆನಪಿನಲ್ಲಿಟ್ಟುಕೊಂಡಿರುತ್ತದೆ.

ದೇಹಕ್ಕೆ ಅದರದ್ದೇ ಆದ ನೆನಪುಗಳಿವೆ. ಇಂದು ಅದರ ಕುರಿತು ಸಂಶೋಧನೆಗಳು ನಡೆಯುತ್ತಿವೆ. ಸರಳವಾಗಿ ಹೇಳುವುದಾದರೆ ಉದಾಹರಣೆಗೆ ನಿಮ್ಮ ತಂದೆಯವರು ಮಗುವಾಗಿದ್ದಾಗ ಗುಂಡಗಿರುವ ವಸ್ತುಗಳ ಜತೆ ಆಟವಾಡಲು ಇಷ್ಟಪಡುತ್ತಿದ್ದರು ಹಾಗೂ ಅವುಗಳ ಜತೆ ಒಂದು ನಿರ್ದಿಷ್ಟ ಮಟ್ಟದ ಸಂಬಂಧವನ್ನು ಬೆಳೆಸಿಕೊಂಡಿದ್ದರು. ಅವರ ಮಗುವಾಗಿ, ಏಕೆಂದು ತಿಳಿಯದೆ, ನೀವು ಅಂತಹುದೇ ವಸ್ತುಗಳನ್ನು ಆಯ್ಕೆ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವಿರಿ. ಇಂತಹ ಪುನರಾವೃತ್ತಿಗಳು ಆಗುತ್ತವೆ ಎಂಬುದು ರುಜುವಾತಾಗಿದೆ. ಸರಳವಾಗಿ ಇದು ಏಕೆಂದರೆ, ಕೆಲವು ನಿರ್ದಿಷ್ಟ ಅನುವಂಶಿಕ ವಿಷಯಗಳನ್ನು ನೀವು ಅವರಿಂದ ಪಡೆದುಕೊಂಡಿರುತ್ತೀರಿ.

ಋಣಾನುಬಂಧ ಎನ್ನುವುದೊಂದಿದೆ, ಅದೊಂದು ನಿರ್ದಿಷ್ಟ ರೀತಿಯ ಶಾರೀರಿಕ ನೆನಪು. ಅದನ್ನು ನಿಮ್ಮೊಳಗೆ ಹೊಂದಿರುತ್ತೀರಿ. ಋಣಾನುಬಂಧವನ್ನು ಪೋಷಕರಿಂದ ಮಗುವಿಗೆ ರವಾನಿಸಲ್ಪಡುವ ಅನುವಂಶಿಕ ಅಂಶಗಳ ಜತೆ ಸಮೀಕರಣ ಮಾಡಬಾರದು.

ನೀವು ಎಲ್ಲಿಂದ ಬಂದಿರೆಂಬ ಒಂದು ದೈಹಿಕ ನೆನಪು. ಅದು ಅಗತ್ಯವಾಗಿ ನಿಮ್ಮ ಚರ್ಮದ ಬಣ್ಣ ನಿಮ್ಮ ಮೂಗಿನ ಆಕಾರ, ನಿಮ್ಮ ದೇಹದಾಕಾರ ಇತ್ಯಾದಿಗಳಿಂದ ಬಂದುದಲ್ಲ. ನಿಮ್ಮ ದೇಹವು ಯಾವುದೇ ರೀತಿಯ ಆತ್ಮೀಯತೆ ಮತ್ತೊಂದು ಭೌತಿಕ ಶರೀರದೊಂದಿಗೇ ಅಲ್ಲದೆ ಯಾವುದೇ ಭೌತಿಕ ವಸ್ತುಗಳಾಗಿರಬಹುದು ಎಲ್ಲವನ್ನೂ ನೆನಪಿನಲ್ಲಿಟ್ಟುಕೊಂಡಿರುತ್ತದೆ.

ನೀವು ಯಾರದಾದರೂ ಕೈಯನ್ನು ಹಿಡಿದುಕೊಂಡಿದ್ದರೂ ನೀವು ಋಣಾನುಬಂಧವನ್ನು ಬೆಳೆಸಿ ಕೊಳ್ಳುವಿರಿ. ಆದ್ದರಿಂದಲೇ ಭಾರತದಲ್ಲಿ ಕೈ ಜೋಡಿಸಿ ನಮಸ್ಕರಿಸುತ್ತಾರೆ. ಅವರು ಋಣಾನುಬಂಧವನ್ನು ಪಡೆಯಲು ಇಚ್ಛಿಸುವುದಿಲ್ಲ. ಕೆಲವು ವಸ್ತುಗಳನ್ನು ಕೊಟ್ಟು ತೆಗೆದುಕೊಳ್ಳುವಾಗಲೂ ಇದೇ ಪದ್ಧತಿಯನ್ನು ಅನುಸರಿಸುತ್ತಾರೆ ಉಪ್ಪು, ಎಳ್ಳು, ಇತ್ಯಾದಿ.

ಋಣಾನುಬಂಧ ಬೆಳೆಯುವುದನ್ನು ತಪ್ಪಿಸಿಕೊಳ್ಳಲು ಜನರು ಇಂತಹವುಗಳನ್ನು ಬೇರೆಯವರ ಕೈಗಳಿಂದ ತೆಗೆದುಕೊಳ್ಳುವುದಿಲ್ಲ. ಮೂಲಭೂತವಾಗಿ ಈ ಸಂಸ್ಕೃತಿಯು ಮುಕ್ತಿಯ ಕಡೆಗಿದ್ದರೂ, ಈ ತಿಳುವಳಿಕೆ ಹಾಗೂ ಈ ಸಂವೇದನೆಗಳು, ಜೀವನದಲ್ಲಿ ಬಂಧನಗಳನ್ನು ಬೆಳೆಸಿಕೊಳ್ಳುವುದಕ್ಕಲ್ಲ. ಆದರೆ ಅದನ್ನು ನಿಶ್ಚಯವಾಗಿ ಎಷ್ಟು ಅಗತ್ಯವೋ ಅಷ್ಟಕ್ಕೆ ಮಿತಿಗೊಳಿಸಿಕೊಳ್ಳುವುದಕ್ಕಾಗಿ.

ನೀವು ಋಣಾನುಬಂಧವನ್ನು ನಾನಾ ರೀತಿಯಲ್ಲಿ ಗಳಿಸಿಕೊಳ್ಳುವಿರಿ. ಆದರೆ ಲೈಂಗಿಕ ಸಂಬಂಧಗಳು ಅವು ಹಿಂದೆ ಬಿಡುವ ನೆನಪಿನ ಪರಿಮಾಣವನ್ನನುಸರಿಸಿ ಬೇರೆ ಯಾವುದರ ಸ್ಪರ್ಶ ಅಥವಾ ವಸ್ತುಗಳ ಸ್ಪರ್ಶಗಳಿಗಿಂತಲೂ ಗರಿಷ್ಠ ಮಟ್ಟದ ಪರಿಣಾಮವನ್ನು ಹೊಂದಿರುತ್ತವೆ. ಇದು ಅಪರಾಧ ಅಥವಾ ಅಪರಾಧದಿಂದ ತಪ್ಪಿಸಿಕೊಳ್ಳುವ ಪ್ರಶ್ನೆಯಲ್ಲ, ಅಪರಾಧವೆನ್ನುವುದು ಒಂದು ಸಾಮಾಜಿಕ ವಿಷಯವಾಗಿದೆ.

ನೀವು ಯಾವುದನ್ನು ಅಪರಾಧವೆಂದು ಭಾವಿಸುವಿರೋ ಅದು ಮೂಲಭೂತವಾಗಿ ನೀವು ಯಾವುದೇ ಸಮಾಜದಲ್ಲಿ ವಾಸಿಸುತ್ತಿದ್ದರೂ ನಿಮ್ಮ ಸುತ್ತಮುತ್ತಲಿರುವ ಜನರು ನಿಮಗೆ ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ಹೇಳಿರುವರೋ ಅದರ ಮೇಲೆ ಅವಲಂಬಿತವಾಗಿದೆ. ಒಂದು ಸಮಾಜದಲ್ಲಿ ಅಪರಾಧವೆನ್ನಿಸುವುದು ಮತ್ತೊಂದು ಸಮಾಜದಲ್ಲಿ ಅದು ಅಪರಾಧವೆನಿಸುವುದಿಲ್ಲ. ಇದು ಸಾಮಾಜಿಕ ಪರಿಸ್ಥಿತಿಗಳನ್ನು ಕುರಿತಾದದ್ದಲ್ಲ–ನಾವು ಕೇವಲ ಜೀವನದ ಇರುವಿಕೆಯ ದೃಷ್ಟಿಯಿಂದ ನೋಡುತ್ತಿದ್ದೇವೆ.

ಋಣಾನುಬಂಧದಿಂದ ಮುಕ್ತಿ ಪಡೆಯಲು ಹಲವಾರು ಪ್ರಕ್ರಿಯೆಗಳಿವೆ. ಭಾವನಾತ್ಮಕ ಮತ್ತು ಋಣಾನುಬಂಧಗಳ ಭಾರದಿಂದ ಮುಕ್ತಗೊಳಿಸಲು ಕೆಲವು ನಿರ್ದಿಷ್ಟ ಹಬ್ಬಗಳಿವೆ. ಲಿಂಗ ಭೈರವಿಯಂತಹ ನಿರ್ದಿಷ್ಟ ದೇವಸ್ಥಾನಗಳಲ್ಲಿ ಅಗ್ನಿ ಸ್ನಾನದಂತಹ ಧಾರ್ಮಿಕ ಸಂಸ್ಕಾರಗಳಿವೆ. ದಿನನಿತ್ಯದ ಸ್ನಾನವು ನಿಮ್ಮನ್ನು ಶುದ್ಧಿಗೊಳಿಸದಿದ್ದಾಗ, ಇಂತಹ ಸ್ನಾನದ ಉಪಯೋಗವನ್ನು ಪಡೆಯಬಹುದು.

ನೀವು ತಳೆದಿರುವ ಭೌತಿಕ ನೆನಪುಗಳನ್ನು ಸುಟ್ಟು ಹಾಕಲು ಇದೊಂದು ಮಾರ್ಗವಾಗಿದೆ ಕೇವಲ ಸಂಬಂಧಗಳನ್ನು ಕುರಿತ ಕಾರಣಕ್ಕಲ್ಲ. ನೀವು ಜನರೊಡನೆ, ಸನ್ನಿವೇಶಗಳೊಡನೆ, ಪರಿಸರದೊಡನೆ, ಅಥವಾ ಹಲವಾರು ಇಂತಹ ಪರಿಸ್ಥಿತಿ /ವಸ್ತುಗಳೊಡನೆ ಸಂಬಂಧ ಹೊಂದಿದಾಗ, ದೇಹವು ನೆನಪನ್ನು ಸಂಗ್ರಹಿಸಿಟ್ಟುಕೊಳ್ಳುತ್ತದೆ.

ಅಗ್ನಿ ಸ್ನಾನ ಮತ್ತು ದಿನನಿತ್ಯದ ಸ್ನಾನ ಇದ್ದೇ ಇರುತ್ತದೆ. ನನ್ನ ಜೀವನದಲ್ಲಿ, ನಾನು ಹೆಚ್ಚು ಹೆಚ್ಚು ಸಾಧನೆಯಲ್ಲಿ ನಿರತನಾದಾಗ, ಪ್ರತಿದಿನ ನಾನು ಆರೇಳು ಬಾರಿ ಸ್ನಾನ ಮಾಡುತ್ತಿದ್ದೆ. ಏಕೆಂದರೆ ನಿಮ್ಮ ಶರೀರವು ಅಷ್ಟು ಸಂವೇದನಾಶೀಲವಾಗಿರುತ್ತದೆ. ಉದಾಹರಣೆಗೆ, ನೀವೊಂದು ನಿರ್ದಿಷ್ಟ ದಿಂಬಿನ ಮೇಲೆ ಕುಳಿತುಕೊಳ್ಳುವಿರಿ, ಆ ದಿಂಬು ನಿಮಗೆ ಏನು ಮಾಡುತ್ತಿದೆ ಎನ್ನುವುದರ ಪ್ರಜ್ಞೆ ನಿಮಗೆ ತಿಳಿದಿದೆ. ಆದ್ದರಿಂದ ನೀವು ಅದನ್ನು ತೊಳೆಯಲು, ನಿಮ್ಮ ಶರೀರದ ಮೇಲೆ ನೀರನ್ನು ಸುರಿದುಕೊಳ್ಳುತ್ತೀರಿ, ನಾನು ದಿನಕ್ಕೆ ಆರೇಳು ಬಾರಿ ಸ್ನಾನ ಮಾಡಲೇಬೇಕೆಂಬ ಲೆಕ್ಕಾಚಾರ ಮಾಡಿರಲಿಲ್ಲ–ನನಗೆ ಬೇಕೆನಿಸಿದಾಗ ನಾನು ಸ್ನಾನ ಮಾಡುತ್ತಿದ್ದೆ.

ಬಹುತೇಕ ಯೋಗಿಗಳು ಕನಿಷ್ಠವೆಂದರೆ ದಿನಕ್ಕೆರಡು ಬಾರಿ ಸ್ನಾನ ಮಾಡುತ್ತಾರೆ. ಸಾಮಾನ್ಯವಾಗಿ ನದಿಗಳಲ್ಲಿ ಮುಳುಗಿ ಏಳುವುದಾಗಿರುತ್ತದೆ–ನೀವು ಹರಿಯುವ ನೀರಿನಲ್ಲಿ ಮುಳುಗುವುದರಿಂದ ನೀವು ಸ್ವಚ್ಛವಾಗುವಿರಿ.

ಕೆಲವು ಋತುಗಳಲ್ಲಿ ಉತ್ತರಾಯಣ ಮತ್ತು ದಕ್ಷಿಣಾಯಣದ ಪ್ರಾರಂಭದ ಪುಣ್ಯದಿನಗಳಲ್ಲಿ ಭಾರತ ಉಪಖಂಡದಲ್ಲಿ ಗಾಳಿಯು ಜೋರಾಗಿ ಬೀಸುತ್ತಿರುತ್ತದೆ. ಒಂದು ಸರಳ ವಿಧಾನವೆಂದರೆ, ನೀವು ನಿಮ್ಮ ದೇಹವನ್ನು ಗಾಳಿಗೊಡ್ಡಿ ನಿಲ್ಲುವುದು–ನಿಮಗೊಂದು ಸರಿಯಾದ ವಾಯುಸ್ನಾನವಾಗುತ್ತದೆ. ಇದು ನಿಮಗೆ ಅದ್ಭುತಗಳನ್ನು ಮಾಡುತ್ತದೆ.

ಇದನ್ನು ಪ್ರಯತ್ನಿಸಿ–ಜೋರಾದ ಮಂದ ಮಾರುತ ಬೀಸುವಾಗ, ಕೇವಲ ಸಡಿಲವಾದ ವಸ್ತ್ರಗಳನ್ನು ತೊಟ್ಟು ಕಣ್ಣು ಮುಚ್ಚಿ ಪ್ರಜ್ಞಾಯುತವಾಗಿ ಅಲ್ಲಿ ಅರ್ಧಗಂಟೆಯ ಕಾಲ ನಿಂತುಕೊಳ್ಳಿ ಮುಂದೆ–ಹಿಂದೆ ತಿರುಗಿ ನಿಂತುಕೊಳ್ಳಿ, ಮಂದಾನಿಲವು ನಿಮ್ಮ ಹಿಂದು ಮುಂದು ಎಲ್ಲ ಕಡೆಯೂ ಬೀಸಲಿ. ನಿಮಗೆ ನೀವು ಎಷ್ಟೋ ಹಗುರರಾಗುವಿರಿ ಮತ್ತು ಆರೋಗ್ಯವಾಗಿರುವಿರಿ ಎಂಬ ಅನುಭವವಾಗುತ್ತದೆ.

(ಸದ್ಗುರುಗಳು ಒಬ್ಬ ಯೋಗಿ, ಅನುಭಾವಿ ಹಾಗೂ ದಾರ್ಶನಿಕ. isha.sadhguru.org/in/kn)
(ಸದ್ಗುರುಗಳ ಇತರ ಪುಸ್ತಕ/ ವಿವರಗಳಿಗೆ ಸಂಪರ್ಕಿಸಿ: kannadapublications@ishafoundation.org)

ಯುವ ಲೇಖಕಿಯಾಗಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ 4ನೇ ತರಗತಿ ವಿದ್ಯಾರ್ಥಿನಿ ಸೇರ್ಪಡೆ!



ಪರಿಣಿತಾ ಬಿ

ಬೆಂಗಳೂರು: ನಗರದ 10 ವರ್ಷದ ಪರಿಣಿತಾ ಬಿ, ಯುವ ಲೇಖಕಿಯಾಗಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಈಗಾಗಲೇ ಸ್ಥಾನಗಳಿಸಿದ್ದಾಳೆ. ಆಕೆ ಸದ್ಯ ಬಸವನಗುಡಿಯ ಎನ್ ಇಟಿ ಪಬ್ಲಿಕ್ ಶಾಲೆಯಲ್ಲಿ 4ನೇ ತರಗತಿಯಲ್ಲಿ ಓದುತ್ತಿದ್ದು ಸುಬ್ಬು ಪಬ್ಲಿಕೇಷನ್ಸ್ ಪ್ರಕಟಿಸಿದ 'ಟೇಲ್ಸ್ ಬೈ ಪರಿ' ಪುಸ್ತಕವನ್ನು ಬರೆದಿದ್ದಾರೆ.

ಅವರ ತಂದೆ ಕೆ.ಬಾಲಾಜಿ, ಬೆಸ್ಕಾಮ್‌ನಲ್ಲಿ ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಿದ್ದಾರೆ, ಅವರ ತಾಯಿ ಡಾ.ಅನುಷಾ ಆರ್.ಗುಪ್ತಾ ದಂತವೈದ್ಯರು. ಟಿಎನ್‌ಐಇ ಜೊತೆ ಮಾತನಾಡಿದ ಪರಿಣಿತ ತಂದೆ ಬಾಲಾಜಿ, 'ನಾವು ಪರಿಣಿತಾಗೆ ಹಾಡುಗಳು ಮತ್ತು ಮಕ್ಕಳ ಕಥೆಗಳನ್ನು ಹೇಳುತ್ತಿದ್ದೆವು. ಆಗ ಅವಳು ತಮ್ಮದೇ ಆದ ಕಥೆಯನ್ನು ಬರೆಯಲು ನಿರ್ಧರಿಸಿದಳು. ಆಕೆ 8 ವರ್ಷದವಳಿದ್ದಾಗ, ವಿಭಿನ್ನ ಪದಗಳ ಅರ್ಥವನ್ನು ಕಲಿಯಲು ಪ್ರಾರಂಭಿಸಿ ಪುಸ್ತಕ ಬರೆಯುವುದಾಗಿ ನಮಗೆ ಹೇಳಿದಳು. ಕಥೆಗಳ ಪುಸ್ತಕವಾಗಿ ಪ್ರಕಟಿಸಬೇಕಾದರೆ ಕನಿಷ್ಠ 30 ಪುಟಗಳನ್ನು ಬರೆಯಲು ನಾನು ಆಕೆಗೆ ಹೇಳಿದ್ದೆ ಎಂದು ತಿಳಿಸಿದ್ದಾರೆ.

ಶಾಲೆ ನಂತರ ಅವಳು ತನ್ನ ಎಲ್ಲಾ ಪ್ರಯತ್ನಗಳನ್ನು ಮಾಡಿ 9 ವರ್ಷದವಳಿದ್ದಾಗ ಪುಸ್ತಕ ಬರೆಯಲು ಪ್ರಾರಂಭಿಸಿದಳು. ಆದಾಗ್ಯೂ, ಅವಳು ಅದನ್ನು ಬರೆಯುವುದನ್ನು ಪೂರ್ಣಗೊಳಿಸಿದಾಗ, ಪ್ರಕಾಶಕರನ್ನು ಹುಡುಕುವಲ್ಲಿ ನಮಗೆ ಸವಾಲುಗಳು ಎದುರಾದವು. ಅಂತಿಮವಾಗಿ, ಹುಬ್ಬಳ್ಳಿಯ ಸುಬ್ಬು ಪಬ್ಲಿಕೇಷನ್ಸ್‌ರವರು ಪುಸ್ತಕವನ್ನು ಪ್ರಕಟಿಸಲು ನಿರ್ಧರಿಸಿದರು. ಪರಿಣಿತಾ ಸಂಪಾದಕರು ಮತ್ತು ಸಚಿತ್ರಕಾರರೊಂದಿಗೆ ಕುಳಿತು ಅಗತ್ಯವಿರುವ ಚಿತ್ರಗಳ ಪ್ರಕಾರವನ್ನು ವಿವರಿಸಿದಳು. ನಾವು ಇಂಟರ್ನೆಟ್‌ನಿಂದ ಚಿತ್ರಗಳನ್ನು ಆಯ್ಕೆ ಮಾಡಲಿಲ್ಲ. ಅವೆಲ್ಲವುಗಳನ್ನು ಪರಿಣಿತಾರೆ ರಚಿಸಿದ್ದಾರೆ. ಬಹಳಷ್ಟು ಮಕ್ಕಳು ಪುಸ್ತಕ ಖರೀದಿಸಿ, ಅವರ ಕೆಲಸವನ್ನು ಮೆಚ್ಚಿದ್ದಾರೆ ಎಂದು ತಿಳಿಸಿದ್ದಾರೆ.

ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶನ



ಮೈಸೂರು ಪುರಭವನದಲ್ಲಿ ಜೈ ಭೀಮ್ ಮೈಸೂರು ಜಿಲ್ಲಾ ರಂಗಕಲಾ ಮತ್ತು ಸಾಂಸ್ಕೃತಿಕ ಸಂಘವು ಆಯೋಜಿಸಿದ್ದ ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ರಂಗಭೂಮಿ ಕಲಾವಿದರಾದ ಹುಯಿಲಾಳು ರಾಮಸ್ವಾಮಿ ಉದ್ಘಾಟಿಸಿದರು. ಈ ವೇಳೆ ಎಚ್.ಡಿ.ಕೋಟೆ ಪುಟ್ಟರಾಜು, ಡ್ರಾಮಾ ಮಾಸ್ಟರ್ ಕೆರಳ್ಳಿ ಮಾದೇವಸ್ವಾಮಿ, ಮುರುಡಗಳ್ಳಿ ಶಿವಣ್ಣ, ಉದ್ಬೂರು ಮೂರ್ತಿ, ಲೋಕೇಶ್ ಮಾಸ್ಟರ್, ಬೋರೇಗೌಡ, ಚೌಡೇಶ್, ಮಹಾದೇವು, ಬೋರಲಿಂಗು, ಸಿದ್ಧಾರ್ಥ ಇನ್ನಿತರರು ಉಪಸ್ಥಿತರಿದ್ದರು.

ಆಸ್ತಮಾ ಸೇರಿದಂತೆ ಶ್ವಾಸಕೋಶ ಸಂಬಂಧಿ ರೋಗಿಗಳಿಗಾಗಿ

ಪಿಕೆಟಿಬಿ–ಸಿಡಿ ಆಸ್ಪತ್ರೆಯಲ್ಲಿ ಪುನರ್ವಸತಿ ಕೇಂದ್ರ

- ಇಂತಹ ರೋಗಿಗಳ ಜೀವನ ಮಟ್ಟ ಸುಧಾರಣೆ ಸದುದ್ದೇಶ
- ಅತ್ಯಾಧುನಿಕ ಉಪಕರಣಗಳ ಬಳಕೆ ಮೂಲಕ ಸಹಜ ಚಿಕಿತ್ಸಾ ವಿಧಾನ



ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯಲ್ಲಿ 'ಶ್ವಾಸಕೋಶದ ಪುನರ್ವಸತಿ ಕೇಂದ್ರ.

ಮೈಸೂರು,ಜ.1(ಎಂಕೆ)– ದಮ್ಮು (ಆಸ್ತಮಾ) ಮತ್ತು ಶ್ವಾಸಕೋಶ ಸಂಬಂಧಿ ರೋಗಿಗಳ ಜೀವನ ಗುಣಮಟ್ಟ ಹೆಚ್ಚಿಸಲು ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯಲ್ಲಿ 'ಶ್ವಾಸಕೋಶದ ಪುನರ್ವಸತಿ ಕೇಂದ್ರ(pulmonary rehabilitation centre)'ವನ್ನು ಸದ್ಯದಲ್ಲಿಯೇ ಸಾರ್ವಜನಿಕ ಸೇವೆಗೆ ಲೋಕಾರ್ಪಣೆಗೊಳ್ಳಲಿದೆ.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ಸೇವೆ ನೀಡುತ್ತಿರುವ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯಲ್ಲಿ ದಮ್ಮು(ಆಸ್ತಮಾ) ಮತ್ತು ಶ್ವಾಸಕೋಶ ಸಂಬಂಧಿ ರೋಗದಿಂದ ಬಳಲುತ್ತಿರುವ ರೋಗಿಗಳ ಜೀವನ ಗುಣಮಟ್ಟ ಹೆಚ್ಚಿಸಲು, ಅತ್ಯಾಧುನಿಕ ಚಿಕಿತ್ಸಾ ಸಲಕರಣೆಗಳನ್ನು ಅಳವಡಿಸಲಾಗಿದೆ.

ಮೆಟ್ಟಿಲುಗಳನ್ನು ಹತ್ತಲು ಕಷ್ಟಪಡುವ, ಕಫ ಸಮಸ್ಯೆಯಿಂದ ಬಳಲುವ ರೋಗಿಗಳ ಅನುಕೂಲತೆಗಾಗಿ ಮೈಸೂರಿನಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ನಂತರ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯಲ್ಲಿ ಶ್ವಾಸಕೋಶದ ಪುನರ್ವಸತಿ ಕೇಂದ್ರ ಆರಂಭಿಸಲಾಗುತ್ತಿದೆ.

ಸುಮಾರು 11 ಲಕ್ಷ ರೂ. ವೆಚ್ಚದಲ್ಲಿ 'ಶ್ವಾಸಕೋಶದ ಪುನರ್ವಸತಿ ಕೇಂದ್ರ' ಅಭಿವೃದ್ಧಿಪಡಿಸಲಾಗಿದ್ದು, ವ್ಯಾಯಾಮದ ಮೂಲಕ ಶ್ವಾಸಕೋಶದ ಆರೋಗ್ಯ ವೃದ್ಧಿಸುವ ವಿವಿಧ ಬಗೆಯ ಅತ್ಯಾಧುನಿಕ ಸಲಕರಣೆಗಳನ್ನಿರಿಸಲಾಗಿದೆ. ಆಸ್ತಮಾ ರೋಗದಿಂದ ನಡೆಯಲು ಕಷ್ಟಪಡುವವರಿಗೆ ಹೊಸ ಚೈತನ್ಯ ನೀಡುವ ಕೇಂದ್ರ ಇದಾಗಲಿದ್ದು, ಶತಮಾನ ಪೂರೈಸಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿಯಲ್ಲಿ ನೀಡುವ ವೈದ್ಯಕೀಯ ಸೇವೆಯ ಗುಣಮಟ್ಟ ಹೆಚ್ಚಿಸಲಿದೆ.

'ಶ್ವಾಸಕೋಶದ ಪುನರ್ವಸತಿ ಕೇಂದ್ರ'ದಲ್ಲಿ ಆಧುನಿಕ ಆಟೋಮ್ಯಾಟಿಕ್ ಟ್ರೆಡ್‌ಮೀಲ್(Automatic Treadmill), ರಿಹ್ಯಾಬ್ ಟ್ರೆಡ್ ಮಿಲ್ ಫಿಚರ್ಸ್ (Rehab Treadmill Feature), ರೆಕುಮೆಂಟ್ ಸೈಕಲ್(Recumbent Cycle), ಕ್ರಾಸ್ ಟ್ರೈನರ್(Cross Trainer), ಅಪ್ಪರ್ ಅಂಡ್ ಲೋಯರ್ ಎಕ್ಸ್ಟ್ರಿಮಿಟಿ ಎಕ್ಸರ್ಸೈಜ್(upper and lower extremity exerciser), ಎಲಿಪ್ಟಿಕಲ್ ಟ್ರೈನರ್(elliptical trainer), ಡಂಬ್ ಬೆಲ್ಸ್ ಸೆಟ್(dumb bells set), ಎಕ್ಸರ್ಸೈಜ್ ಬಾಲ್ ಸೆಟ್, ಜಿಮ್ ಬಾಲ್ ಸೆಟ್(exercise ball set, gym bal set), ಆಕ್ಸಿಜನ್ ಸಿಲಿಂಡರ್ ಸೆಟ್, ಕ್ಯಾನುಲಾ(oxygen cylinder set, cannula), ಪರ್‌ಲೆಲ್ ಬಾರ್ (parallel bar), ಸ್ಟೇರ್‌ಕೆಸ್ ಸ್ಟ್ರೈನರ್ (staircase strainer), ಪೋಸ್ಚರ್ ಟ್ರೀಟ್‌ಮೆಂಟ್ ಟೇಬಲ್(postural drainage treatment table), ಸ್ಟ್ಯಾಂಡಿಂಗ್ ಫ್ರೇಮ್ ಸ್ಟ್ಯಾಂಡರ್ಡ್ (standing frame standard), ಮಲ್ಟಿ ಎಕ್ಸರ್ಸೈಜ್ ಚೇರ್ (multi exercise chair), ಟಿಲ್ಟ್ ಟೇಬಲ್ (tilt table motorized) ಸಲಕರಣೆಗಳ ಮೂಲಕ ಚಿಕಿತ್ಸೆ ನೀಡಲಾಗುತ್ತದೆ.



"ಶ್ವಾಸಕೋಶ ಸಂಬಂಧಿತ ಕಾಯಿಲೆಗಳು ಒಮ್ಮೆ ಬಂದರೆ, ಜೀವನಪರ್ಯಂತ ಇರಲಿದ್ದು, ಇದರಿಂದ ರೋಗಿಯ ಜೀವನ ಗುಣಮಟ್ಟ ಹಾಳಾಗಲಿದೆ. ದಮ್ಮು ಜಾಸ್ತಿಯಾದರೆ ತಮ್ಮ ಎಲ್ಲಾ ಕೆಲಸಗಳಿಗೂ ಬೇರೆಯವರನ್ನು ಆಶ್ರಯಿಸಬೇಕಾದ ಅನಿವಾರ್ಯತೆ ಇರಲಿದೆ. ಆದ್ದರಿಂದ ರೋಗಿಗಳ ಜೀವನ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ 'ಶ್ವಾಸ ಕೋಶದ ಪುನರ್ವಸತಿ ಕೇಂದ್ರವನ್ನು ಅಭಿವೃದ್ಧಿಪಡಿಸಲಾಗಿದ್ದು, ಒಂದೆರಡು ವಾರದಲ್ಲಿ ಉದ್ಘಾಟನೆಯಾಗಲಿದೆ.

–ಡಾ.ಸಿ.ಪ್ರಶಾಂತ್, ವೈದ್ಯಕೀಯ ಅಧೀಕ್ಷಕರು, ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆ


ಪ್ರತಿನಿತ್ಯ 8–10 ಜನರಿಗೆ ಚಿಕಿತ್ಸೆ: 'ಶ್ವಾಸಕೋಶದ ಪುನರ್ವಸತಿ ಕೇಂದ್ರ'ದಲ್ಲಿ ಪ್ರತಿನಿತ್ಯ 8–10 ಮಂದಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಗಿದ್ದು, ಗುಣಮಟ್ಟದ ಚಿಕಿತ್ಸೆಗಾಗಿ ಶ್ವಾಸಕೋಶಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಿರುವ ವೈದ್ಯರು ಮತ್ತು ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗುವುದು. ವ್ಯಾಯಾಮದ ಮೂಲಕವೇ ಕಫ ಹೊರತೆಗೆಯಲಾಗುವುದು ಎಂದು ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪ್ರಶಾಂತ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಇಲ್ಲೇ ಮೊದಲು: ಜೆಎಸ್‌ಎಸ್ ಆಸ್ಪತ್ರೆ ಬಿಟ್ಟರೆ, ಮೈಸೂರಿನಲ್ಲಿ ಪಿಕೆಟಿಬಿ ಆಸ್ಪತ್ರೆಯಲ್ಲಿ ಮಾತ್ರವೇ 'ಶ್ವಾಸಕೋಶದ ಪುನರ್ವಸತಿ ಕೇಂದ್ರ' ಸ್ಥಾಪನೆಯಾಗುತ್ತಿದೆ. ಅದರಲ್ಲೂ ರಿಹ್ಯಾಬ್ ಟ್ರೆಡ್ ಮಿಲ್ ಮೂಲಕ ನೀಡುವ ಚಿಕಿತ್ಸೆ ಬೇರೆ ಯಾವ ಆಸ್ಪತ್ರೆಗಳಲ್ಲಿಯೂ ಇಲ್ಲ. ದಮ್ಮು ಮತ್ತು ದುರ್ಬಲ ಶ್ವಾಸಕೋಶದಿಂದ ಬಳಲುವವರಿಗೆ ಈ ಕೇಂದ್ರವು ಅವರ ಬದುಕಿನಲ್ಲಿ ಹೊಸ ಚೈತನ್ಯ ನೀಡಲಿದೆ ಎಂದು ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾತ್ರಿಯಿಡೀ ಸಂಭ್ರಮಾಚರಣೆ; ಬೆಳಗಾಗೆದ್ದು ದೈವದ ಮೊರೆ

ಮೈಸೂರಲ್ಲಿ ಹೊಸ ವರ್ಷಾಚರಣೆ ಮೊದಲ ದಿನ ದೇವಾಲಯಗಳಲ್ಲಿ ರಶ್ಶೋ ರಶ್ಶು...



2026 ನೂತನ ವರ್ಷದ ಅಂಗವಾಗಿ ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ದರ್ಶನಕ್ಕಾಗಿ ಗುರುವಾರ ಚಾಮುಂಡಿಬೆಟ್ಟಕ್ಕೆ ಹರಿದು ಬಂದ ಭಕ್ತ ಸಾಗರ.



ಮೈಸೂರಿನ ವಿಜಯನಗರದ ಯೋಗನರಸಿಂಹ ಸ್ವಾಮಿ ದೇವಾಲಯದಲ್ಲಿ ಸಾಲುಗಟ್ಟಿ ನಿಂತಿರುವ ಭಕ್ತರು.



ಭಕ್ತರಿಗೆ ಲಾಡು ವಿತರಿಸುತ್ತಿರುವ ದೇವಾಲಯದ ಆಡಳಿತಾಧಿಕಾರಿ ಶ್ರೀನಿವಾಸ್

ಮೈಸೂರು,ಜ.1(ಎಂಟಿವೈ)- ಕಳೆದ ರಾತ್ರಿ ಬಹುಹೊತ್ತಿನವರೆಗೆ ಅರ್ಥಾತ್ ಇಂದು ಮುಂಜಾನೆವರೆಗೂ ಸಂಗೀತ ಹಾಗೂ ಪಾನಗೋಷ್ಠಿಯೊಂದಿಗೆ ಹೊಸ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಿದ್ದ ಮೈಸೂರಿಗರು, ಬೆಳಗಾಗೆದ್ದು, ಚಾಮುಂಡೇಶ್ವರಿ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಹೊಸ ವರ್ಷದಲ್ಲಿ ಸುಖ-ಶಾಂತಿ ದೊರಕಲೆಂದು ಪ್ರಾರ್ಥಿಸಿ, ವಿಶೇಷ ಪೂಜೆ ಸಲ್ಲಿಸಿ ದೈವದ ಮೊರೆ ಹೋದರು.

2025ಕ್ಕೆ ಸಡಗರದ ವಿದಾಯ ಹೇಳಿ, 2026ರ ಹೊಸ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಿದ್ದರು. ವಿವಿಧೆಡೆ ಪಾರ್ಟಿ, ಸಂಗೀತ, ನೃತ್ಯ ಹಾಗೂ ಪಾನಗೋಷ್ಠಿಯಲ್ಲಿ ಪಾಲ್ಗೊಂಡು ಸಂಭ್ರಮಾಚರಿಸಿದ್ದರು. ಅಂದ ಹಾಗೆ, ನೂತನ ವರ್ಷದ ಸ್ವಾಗತಕ್ಕಾಗಿ ವಿವಿಧ ಹೋಟೆಲ್, ರೆಸ್ಟೋರೆಂಟ್, ಕ್ಲಬ್ ಸೇರಿದಂತೆ ವಿವಿಧೆಡೆ ಆಯೋಜಿಸಿದ್ದ ಪಾರ್ಟಿಗಳಲ್ಲಿ ಪಾಲ್ಗೊಂಡು ಮೋಜು-ಮಸ್ತಿ ಮಾಡಿ ಹೊಸ ವರ್ಷವನ್ನು ಬರಮಾಡಿಕೊಂಡಿದ್ದ ಜನ ಹೊಸ ವರ್ಷದ ಮೊದಲ ದಿನ ವಿವಿಧ ದೇವಾಲಯಗಳಿಗೆ ತೆರಳಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಹಾಗಾಗಿ ಮೈಸೂರಿನ ಪ್ರಮುಖ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ಭಕ್ತರ ಜಾತ್ರೆಯೇ ನೆರೆದಂತೆ ಕಂಡು ಬಂದಿತು.

ಚಾಮುಂಡಿಬೆಟ್ಟದಲ್ಲಿ ಭಕ್ತರ ದಂಡು: ಹೊಸ ವರ್ಷದ ಸಂಭ್ರಮಾಚರಣೆಗಾಗಿ ಮೈಸೂರು ಅರಮನೆಯ ಆವರಣದಲ್ಲಿ ಕಳೆದ ರಾತ್ರಿ ಆಯೋಜಿಸಿದ್ದ ಪೊಲೀಸ್ ಬ್ಯಾಂಡ್, ಬಾಣ ಬಿರುಸುಗಳ ವೈಯ್ಯಾರವನ್ನು ವೀಕ್ಷಿಸಿ ಸಂಭ್ರಮಿಸಿದ್ದ ಮೈಸೂರಿಗರು ಸೇರಿದಂತೆ ಪ್ರವಾಸಿಗರು ಇಂದು ಬೆಳಗ್ಗೆಯಿಂದಲೇ ಕುಟುಂಬ ಸದಸ್ಯರೊಂದಿಗೆ ಚಾಮುಂಡಿಬೆಟ್ಟದತ್ತ ಧಾವಿಸತೊಡಗಿದರು. ಹಾಗಾಗಿ ಚಾಮುಂಡಿಬೆಟ್ಟದಲ್ಲಿ ಜನಜಂಗುಳಿ, ವಾಹನ ದಟ್ಟಣೆ ಹೆಚ್ಚಾಗಿತ್ತು. ಬೆಳಗ್ಗೆಯಿಂದ ಸಂಜೆವರೆಗೂ ಭಾರೀ ಸಂಖ್ಯೆಯಲ್ಲಿ ಭಕ್ತರು ನಾಡದೇವಿಯ ದರ್ಶನ ಪಡೆದರು.

ಧರ್ಮ ಹಾಗೂ ವಿಶೇಷ ದರ್ಶನದ ಸಾಲುಗಳಲ್ಲಿ ಅಪಾರ ಸಂಖ್ಯೆಯ ಭಕ್ತರು ಸಾಲುಗಟ್ಟಿ ನಿಂತಿದ್ದರಿಂದ ಬಹುತೇಕ ಭಕ್ತರು ದೇವಾಲಯದ ಮುಂಭಾಗದಲ್ಲಿಯೇ ಕೈ ಮುಗಿದು, ವಾಪಸ್ಸಾಗುತ್ತಿದ್ದ ದೃಶ್ಯ ಕಂಡು ಬಂದಿತು. ಸರದಿ ಸಾಲಿನಲ್ಲಿ ನಿಂತಿದ್ದ ಭಕ್ತರ ಸಂಖ್ಯೆಯಷ್ಟೇ ದೇವಾಲಯದ ಮುಂಭಾಗದಲ್ಲೂ ಭಕ್ತರು ಸೇರಿದ್ದರು. ದೇವಾಲಯದ ಸುತ್ತಲೂ ಓಡಾಡುವುದಕ್ಕೆ ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆ ಇದ್ದುದ್ದರಿಂದ ಮೊದಲೇ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ಸರಾಗವಾಗಿ ಭಕ್ತರು ಸರದಿ ಸಾಲಿನಲ್ಲಿ ಸಾಗಿ ದರ್ಶನ ಪಡೆದು ಪುನೀತರಾದರು.

ಪ್ರಸಾದ ವಿತರಣೆ: ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಟ್ಟದ ದಾಸೋಹ ಭವನದಲ್ಲಿ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಟ್ರಾಫಿಕ್ ಜಾಮ್: ಚಾಮುಂಡಿಬೆಟ್ಟಕ್ಕೆ ಬಂದಿದ್ದ ಭಕ್ತರಲ್ಲಿ ಬಹುತೇಕರು ತಮ್ಮ ಖಾಸಗಿ ವಾಹನಗಳಲ್ಲಿ ಬಂದಿದ್ದರಿಂದ ಚಾಮುಂಡಿಬೆಟ್ಟದ ರಸ್ತೆಯಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿತ್ತು. ಸಾರಿಗೆ ಬಸ್, ಪ್ರವಾಸಿ ವಾಹನ ಹಾಗೂ ಖಾಸಗಿ ವಾಹನಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಪದೇ ಪದೆ ಬೆಟ್ಟಕ್ಕೆ ಹೋಗುವ ಹಾಗೂ ಚಾಮುಂಡಿಬೆಟ್ಟದಿಂದ ವಾಪಸ್ಸಾಗುವ ವಾಹನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗುತ್ತಿತ್ತು.

ಲಕ್ಷಾಂತರ ಲಾಡು ಹಂಚಿಕೆ: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗ ನರಸಿಂಹಸ್ವಾಮಿ ದೇವಾಲಯದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಹೊಸ ವರ್ಷದ ಮೊದಲ ದಿನವಾದ ಇಂದು ಭಕ್ತರಿಗೆ ಲಾಡು ವಿತರಿಸಲಾಯಿತು. ಹೊಸ ವರ್ಷದ ಆರಂಭದ ಹಿನ್ನೆಲೆಯಲ್ಲಿ ವಿವಿದೆಡೆಯಿಂದ ಅಪಾರ ಸಂಖ್ಯೆಯ ಭಕ್ತರು ಆಗಮಿಸಿದ್ದರು. ಮುಂಜಾನೆ ನಾಲ್ಕು ಗಂಟೆಯಿಂದಲೇ ಭಕ್ತರು ತಂಡೋಪತಂಡವಾಗಿ ಯೋಗ ನರಸಿಂಹಸ್ವಾಮಿ ದೇವಾಲಯಕ್ಕೆ ಆಗಮಿಸಿ, ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಹುಣಸೂರು-ಮೈಸೂರು ಮುಖ್ಯ ರಸ್ತೆಯವರೆಗೂ ಭಕ್ತರು ಸಾಲುಗಟ್ಟಿ ನಿಂತಿದ್ದ ದೃಶ್ಯ ಬೆಳಗ್ಗೆಯೇ ಕಂಡು ಬಂದಿತು. ದೇವಾಲಯ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ಹಾಗೂ ಶ್ರೀನಿವಾಸ್ ಅವರು ಭಕ್ತರಿಗೆ ಲಾಡು ವಿತರಿಸಿದರು. ವಿವಿಧ ಗಾತ್ರದ ಸುಮಾರು 2 ಲಕ್ಷ ಲಾಡು ವಿತರಿಸಲು ದೇವಾಲಯದ ವತಿಯಿಂದ ವ್ಯವಸ್ಥೆ ಮಾಡಲಾಗಿತ್ತು. ರಾತ್ರಿ 11 ಗಂಟೆವರೆಗೂ ಭಕ್ತರು ದೇವರ ದರ್ಶನ ಪಡೆದು, ಪ್ರಸಾದವಾಗಿ ಲಾಡು ಸ್ವೀಕರಿಸಿದರು.

ಗಣಪತಿ ಆಶ್ರಮದಲ್ಲಿ: ಹೊಸ ವರ್ಷದ ಹಿನ್ನೆಲೆಯಲ್ಲಿ ಮೈಸೂರು-ನಂಜನಗೂಡು ರಸ್ತೆಯಲ್ಲಿರುವ ಗಣಪತಿ ಆಶ್ರಮಕ್ಕೆ ಭೇಟಿ ನೀಡಿ, ಅಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಾಲಯಕ್ಕೆ ನೂರಾರು ಮಂದಿ ಭಕ್ತರು ಭೇಟಿ ನೀಡಿ, ದೇವರ ದರ್ಶನ ಪಡೆದರು.

ಉತ್ತನಹಳ್ಳಿ: ಚಾಮುಂಡಿಬೆಟ್ಟಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಿದ್ದ ಕಾರಣ ನೂರಾರು ಮಂದಿ ಉತ್ತನಹಳ್ಳಿಯಲ್ಲಿರುವ ಜ್ವಾಲಾಮುಖಿ ಶ್ರೀ ತ್ರಿಪುರಸುಂದರಿ ದೇವಿ ದೇವಾಲಯಕ್ಕೆ ಭೇಟಿ ದೇವಿ ದರ್ಶನ ಪಡೆದರು.

ನಿಮಿಷಾಂಬದೇವಿ ದೇವಾಲಯ: ಶ್ರೀರಂಗಪಟ್ಟಣ ತಾಲೂಕಿನ ಗಂಜಾಂನಲ್ಲಿರುವ ಶ್ರೀ ನಿಮಿಷಾಂಬದೇವಿ ದೇವಾಲಯಕ್ಕೂ ಭಕ್ತರ ದಂಡು ಹೆಚ್ಚಿನ ಸಂಖ್ಯೆಯಲ್ಲಿ ಹರಿದು ಬಂತು. ಹೊಸ ವರ್ಷದ ಮೊದಲ ದಿನ ಶಕ್ತಿ ದೇವಿಯ ದರ್ಶನ ದಿಂದ ಒಳಿತಾಗಲಿದೆ ಎಂಬ ಪ್ರತೀತಿ ಇದೆ.

ನಂಜನಗೂಡು: ನಂಜನಗೂಡಿನ ಶ್ರೀ ನಂಜುಂಡೇಶ್ವರನ ಸನ್ನಿಧಿಯಲ್ಲಿಯೂ ಅಪಾರ ಸಂಖ್ಯೆಯ ಭಕ್ತರು, ಪ್ರವಾಸಿಗರು ದೇವರ ದರ್ಶನ ಪಡೆಯುವುದಕ್ಕೆ ಗಂಟೆಗಟ್ಟಲೇ ಸರದಿ ಸಾಲಿನಲ್ಲಿ ಕಾದು ನಿಲ್ಲುವಂತಾಯಿತು.

ಮೈಸೂರಿನ ವಿವಿಧೆಡೆ: ಈ ನಡುವೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಾಲಯ, ಇಟ್ಟಿಗೆಗೂಡಿನಲ್ಲಿರುವ ಶ್ರೀ ದುರ್ಗಾ ಪರಮೇಶ್ವರಿ ದೇವಾಲಯ, ಕೆಜಿ ಕೊಪ್ಪಲಿನಲ್ಲಿರುವ ಶ್ರೀ ಬಂದಂತಮ್ಮ ದೇವಿ ದೇವಾಲಯ, ಕೋಟೆ ಆಂಜನೇಯ ಸ್ವಾಮಿ ದೇವಾಲಯ ಸೇರಿದಂತೆ ಅನೇಕ ದೇವಾಲಯಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಗಳಲ್ಲಿ ದೇವರ ದರ್ಶನ ಪಡೆದು, ಪೂಜೆ ಸಲ್ಲಿಸುವ ಮೂಲಕ ಹೊಸ ವರ್ಷವನ್ನು ಸಂಭ್ರಮದ ಜೊತೆಗೆ ಭಕ್ತಿಯಿಂದ ಆಚರಿಸಿದರು.

ಅಹಿತಕರ ಘಟನೆಗಳಿಲ್ಲದೆ ಮೈಸೂರಲ್ಲಿ ಹೊಸ ವರ್ಷಾಚರಣೆ

ಮೈಸೂರು, ಜ.1(ಆರ್‌ಕೆ)- 2025ಕ್ಕೆ ವಿದಾಯ ಹೇಳಿ 2026 ಹೊಸ ವರ್ಷವನ್ನು ಮೈಸೂರು ನಗರ ಮತ್ತು ಜಿಲ್ಲಾದ್ಯಂತ ಸಂಭ್ರಮ-ಸಡಗರದಿಂದ ಸ್ವಾಗತಿಸಲಾಯಿತು. ಡಿಸೆಂಬರ್ 31ರಂದು ಹೊಸ ವರ್ಷಾಚರಣೆ ಪ್ರಯುಕ್ತ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತಲ್ಲದೆ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿತ್ತು. ಹೊಸ ವರ್ಷದ ಸಂಭ್ರಮದಲ್ಲಿ ಮಿಂದೆದ್ದ ಯುವ ಸಮೂಹ ಯಾವುದೇ ಅಹಿತಕರ ಸುರಕ್ಷಿತವಾಗಿ ಬುಧವಾರ ತಡರಾತ್ರಿ ಮನೆ ಸೇರಿಕೊಂಡರು.

ಮಧ್ಯರಾತ್ರಿವರೆಗೂ ಪಾನ, ಊತಣ ಕೂಟದೊಂದಿಗೆ ಸಂಭ್ರಮಾಚರಣೆಗೆ ಅವಕಾಶ ಮಾಡಿಕೊಡಲಾಗಿತ್ತಾದರೂ, ಹೋಟೆಲ್, ರೆಸ್ಟೋರೆಂಟ್, ರಿಕ್ರಿಯೇಷನ್ ಕ್ಲಬ್, ಸರ್ವಿಸ್ ಅಪಾರ್ಟ್‌ಮೆಂಟ್, ಫಾರ್ಮ್ ಹೌಸ್‌ಗಳಲ್ಲಿ ರಾತ್ರಿ 7ರಿಂದಲೇ ಪಾರ್ಟಿಗಳು ಆರಂಭವಾಗಿ ನೃತ್ಯ, ಸಂಗೀತ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಯಿತು. ಮದ್ಯಸೇವನೆ ಮಾಡಿದವರು ಸಹ ಸುರಕ್ಷಿತವಾಗಿ ಮನೆ ಸೇರಿದ್ದು, ಎಲ್ಲಿಯೂ ಅಪಘಾತ, ಅವಘಡಗಳಂತಹ ಅಹಿತಕರ ಘಟನೆ ನಡೆದ ಬಗ್ಗೆ ಮೈಸೂರು ನಗರ ಮತ್ತು ಜಿಲ್ಲಾದ್ಯಂತ ವರದಿಯಾಗಿಲ್ಲ. ಪ್ರಮುಖ ಜಂಕ್ಷನ್‌ಗಳು, ರಸ್ತೆಗಳು ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸರು ಹಾಜರಿದ್ದು, ಪಾನಮತ್ತರಾಗಿ ಮತ್ತಿನಿಂದ ತೂಳಲಾಡಿದವರ ಸುರಕ್ಷಿತವಾಗಿ ಮನೆಗೆ ತಲುಪಿಸಲು ನೆರವಾದರು. ರಾತ್ರಿ 12 ಗಂಟೆ ಆಗುತ್ತಿದ್ದಂತೆಯೇ ಪಾರ್ಟಿಯಲ್ಲಿದ್ದ ಯುವ ಸಮೂಹದ ಸಂಭ್ರಮ ಮುಗಿಲುಮುಟ್ಟಿತ್ತಲ್ಲದೆ, ಆಗಸದಲ್ಲಿ ಪಟಾಕಿಗಳ ಸದ್ದು, ಚಿತ್ತಾರ ಗಮನ ಸೆಳೆದವು. ಒಟ್ಟಾರೆ ಹೊಸ ವರ್ಷವನ್ನು ಸ್ವಾಗತಿಸುವ ಸಂಭ್ರಮಾಚರಣೆ ನಿರಾತಂಕವಾಗಿ ನೆರವೇರಿದೆ.



ಮೈಸೂರು ಹೋಟೆಲ್‌ವೊಂದರಲ್ಲಿ ಯುವತಿಯರ ನೂತನ ವರ್ಷಾಚರಣೆ ಸಂಭ್ರಮ

ಸಿಲ್ಕ್ ಶೋ ರೂಂ ಪಾಲಾದ ಎಂಡಿಎ ಕಟ್ಟಡ; ಇಟ್ಟಿಗೆಗೂಡು ನಿವಾಸಿಗಳಿಂದ ಇಂದು ಪ್ರತಿಭಟನೆ

ಮೈಸೂರು,ಜ.1(ಬಿಎಲ್‌ಯು)- ಮೈಸೂರು ಮೃಗಾಲಯ ಬಳಿಯ ಲೋಕರಂಜನ್ ಮಹಲ್ ರಸ್ತೆಯ ನೂತನ ಕಟ್ಟಡವನ್ನು ಖಾಸಗಿಯವರಿಗೆ ನೀಡಿದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ಇಟ್ಟಿಗೆಗೂಡು ನಿವಾಸಿಗರು ನಾಳೆ (ಜನವರಿ 2) ಪ್ರತಿಭಟನೆ ನಡೆಸಲಿದ್ದಾರೆ. ಇಟ್ಟಿಗೆಗೂಡಿನ ಮುಖ್ಯ ರಸ್ತೆಯಲ್ಲಿನ ಈ ಕಟ್ಟಡದಲ್ಲಿ ಮೊದಲು ಶಾಲೆ ಇತ್ತು. ಆದರೆ ಈ ಶಾಲೆಯನ್ನು ಬೇರೊಂದು ಶಾಲೆಗೆ ವಿಲೀನಗೊಳಿಸಲಾಯಿತು. ಹಳೆಯ ಕಟ್ಟಡವನ್ನು ನೆಲಸಮಗೊಳಿಸಿದ ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹೊಸ ಕಟ್ಟಡ ನಿರ್ಮಿಸಿತ್ತು. ಇದನ್ನು ಸರ್ಕಾರಿ ಕಚೇರಿ ಅಥವಾ ಶಿಕ್ಷಣ ಇಲಾಖೆಗೆ ನೀಡಬೇಕಿತ್ತು. ಆದರೆ ಈಗ ನೂತನ ಕಟ್ಟಡವನ್ನು ಖಾಸಗಿಯವರಿಗೆ ನೀಡಿ ಜನ ವಿರೋಧಿ ಕ್ರಮ ಕೈಗೊಂಡಿದೆ ಎಂದು ಇಟ್ಟಿಗೆಗೂಡಿನ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇಲ್ಲಿನ ನಿವಾಸಿಗಳು ನಾಳೆ ಖಾಸಗಿಯವರಿಗೆ ನೀಡಿರುವ ಈ ಕಟ್ಟಡದ ಮುಂದೆ ಪ್ರತಿಭಟನೆ ನಡೆಸಲಿದ್ದಾರೆ. ತರುವಾಯ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾಜಿ ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್ ತಿಳಿಸಿದ್ದಾರೆ.



2026-27ನೇ ರೋಟರಿ ಸೌತ್ ಈಸ್ಟ್‌ನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷ-ರೋಟೇರಿಯನ್ ಬಿ.ಆರ್. ವೆಂಕಟೇಶ್, ಪದಾಧಿಕಾರಿಗಳು: ವೆಂಕಟೇಶ್ ಬಿ ಆರ್, ಮುರಳೀಧರ ವೈ.ವಿ, ಸುರೇಶ್, ಮುರಳೀಧರ ಕೆ.ಎನ್, ರಾಜ್ ಭಟ್, ರಾಜೀವ್ ಎಂ., ಸೀಮಾ ಮರಿಸ್ವಾಮಿ. ನಿರ್ದೇಶಕರು: ಗೋವರ್ಧನ್ ಯಾದವ್, ಘನವಂತ ಮಳಲಿ, ಡಾ.ಇ.ಸಿ. ನಿಂಗರಾಜೇಗೌಡ, ಗಿರೀಶ್ ಎನ್.ಟಿ., ರಮೇಶ್‌ಬಾಬು ಎಸ್.ಎನ್., ರಮೇಶ್‌ರಾವ್, ರವೀಂದ್ರ, ಗಿರೀಶ್ ಹೆಚ್.ಎಸ್.

ಸುರಕ್ಷಿತ ಹೊಸ ವರ್ಷಾಚರಣೆಗೆ ಸಿಎಂ ಸಂತಸ

ರಾಜ್ಯ ಪೊಲೀಸರ ಕರ್ತವ್ಯಕ್ಕೆ ಶ್ಲಾಘನೆ



ಬೆಂಗಳೂರು, ಜ.1 (ಕೆಎಂಶಿ)- ಅಹಿತಕರ ಘಟನೆಗಳಿಗೆ ಆಸ್ಪದ ನೀಡದೆ, ಸುರಕ್ಷಿತ ಹಾಗೂ ಅಷ್ಟೇ ಅದ್ದೂರಿಯಾಗಿ ಹೊಸ ವರ್ಷವನ್ನು ಬರಮಾಡಿಕೊಳ್ಳಲು ನಮ್ಮ ಕರ್ನಾಟಕ ಪೊಲೀಸರು ತೋರಿದ ಶಿಸ್ತು, ಸಮರ್ಪಣೆ ಮತ್ತು ಅವಿಶ್ರಾಂತ ಪ್ರಯತ್ನಗಳು ಶ್ಲಾಘನೀಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ನಮ್ಮ ಪೊಲೀಸರ ವೃತ್ತಿಪರತೆ ಮತ್ತು ಸಾರ್ವಜನಿಕ ಸುರಕ್ಷತೆಯೆಡೆಗಿನ ಬದ್ಧತೆಯು ನೈಜ ಸೇವಾ ಮನೋಭಾವದ ದ್ಯೋತಕ. ಪ್ರತಿಯೊಬ್ಬ ಪೊಲೀಸ್ ಸಿಬ್ಬಂದಿ ಮತ್ತು ಅವರ ಕುಟುಂಬಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಹೊಸವರ್ಷವು ಎಲ್ಲ ಕನ್ನಡಿಗರಿಗೂ ಸುಖ, ಸಂತಸ, ಸಮೃದ್ಧಿ ತರಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ.

ಅಭಿನಂದನೆ



ಗ್ರಾಹಕರ ಸ್ನೇಹ ಮಿತ್ರ ಎಂದೇ ಹೆಸರಾದ ಯೂನಿಯನ್ ಬ್ಯಾಂಕಿನ ಉದ್ಯೋಗಿ ಶ್ರೀಮತಿ ಸರೋಜಮ್ಮ ನಿವೃತ್ತಿ ಹೊಂದಿದ್ದ ಹಿನ್ನೆಲೆಯಲ್ಲಿ ಗಂಗಾ ಬಳಗದ ವತಿಯಿಂದ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಬಳಗದ ಸಂಚಾಲಕರಾದ ಎಸ್.ಪ್ರಸಾದ್, ಎ.ಮಂಜುಳ, ಎಂ.ಪಿ.ಶ್ರೇಯಸ್, ಎಂ.ಗೀತಾ, ಅರ್ಪಿತಾ ಇದ್ದರು.

ರಾಜ್ಯದ ಲಕ್ಷಾಂತರ ಬಡವರ ಹೊರತಾಗಿ ಪರ ರಾಜ್ಯದ ಮುಸ್ಲಿಂರ ಓಲೈಕೆ ಯತ್ನ; ಆರ್.ಅಶೋಕ್ ಆರೋಪ

ಬೆಂಗಳೂರು,ಜ.1(ಕೆಎಂಶಿ)-ಸ್ವಂತ ಸೂರಿಲ್ಲದೆ, ನಿವೇಶನವಿಲ್ಲದೆ ಅರ್ಜಿ ಹಾಕಿ ಕಾಯುತ್ತಿರುವ ನಮ್ಮ ರಾಜ್ಯದ ಲಕ್ಷಾಂತರ ಬಡವರು, ಪರಿಶಿಷ್ಟ ಮತ್ತು ಹಿಂದುಳಿದ ಸಮುದಾಯಗಳ ಬಡ ಕುಟುಂಬಗಳಿಗೆ ನೆರವಾಗಬೇಕಾಗಿದ್ದ ಕಾಂಗ್ರೆಸ್ ಸರ್ಕಾರ ಪರ ರಾಜ್ಯದ ಮುಸ್ಲಿಮರ ಓಲೈಕೆಗೆ ಮಣೆ ಹಾಕಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.



ಕರ್ನಾಟಕದ ನೆಲವನ್ನ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದ ವಲಸಿಗರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದನ್ನು ಬಿಟ್ಟು ಹೈಕಮಾಂಡ್ ಆದೇಶಕ್ಕೆ ಮಂಡಿಯೂರಿದೆ ಈ ನಾಡದ್ರೋಹಿ ಕಾಂಗ್ರೆಸ್ ಸರ್ಕಾರ ಎಂದರು.

ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ, ಜ.6ಕ್ಕೆ ಸಚಿವರೊಂದಿಗೆ ಪಡಿತರ ವಿತರಕರ ಸಭೆ

ಮೈಸೂರು, ಜ.1(ಎಂಕೆ)- ಕರ್ನಾಟಕ ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘದ ವತಿಯಿಂದ ಜ.6ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಕಮಿಷನ್ ವಿತರಣೆ, ಸರ್ವರ್ ಸಮಸ್ಯೆ ಬಗೆಹರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕೇಂದ್ರ ಹಾಗೂ ರಾಜ್ಯ ಸಚಿವರೊಂದಿಗೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಟಿ.ಕೃಷ್ಣಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಸುಮಾರು 20 ಸಾವಿರ ಪಡಿತರ ವಿತರಕರಿದ್ದು, ಕಮಿಷನ್ ಹಣ ವಿತರಿಸಲು ತಾಂತ್ರಿಕ ಸಮಸ್ಯೆಯಾಗುತ್ತಿರುವುದರಿಂದ ಡಿಬಿಡಿ ಮುಖಾಂತರ ತಿಂಗಳ ಕಮಿಷನ್ ಹಣ ನೀಡಬೇಕು. ಸಮರ್ಪಕ ಪಡಿತರ ವಿತರಣೆ ಏಕರೂಪ ತಂತ್ರಜ್ಞಾನ ಒದಗಿಸಿ ಸರ್ವರ್ ಸಮಸ್ಯೆ ಬಗೆಹರಿಸಬೇಕು. ಪಡಿತರ ವಿತರಕರಿಗೆ ಸರ್ಕಾರದಿಂದ ಉಚಿತವಾಗಿ ಕಂಪ್ಯೂಟರ್, ಬಯೋಮೆಟ್ರಿಕ್ ಹಾಗೂ ಪ್ರಿಂಟರ್ ಮಿಷನ್ ನೀಡಬೇಕು ಎಂದು ಕಾರ್ಯಕ್ರಮದಲ್ಲಿ ಸಚಿವರಿಗೆ ಮನವಿ ಮಾಡಲಾಗುವುದು. ಹಾಗೆಯೇ 10 ಕೆ.ಜಿ ಅಕ್ಕಿ ಜೊತೆಗೆ ಉಪ್ಪು, ಬೇಳೆ, ಅಡುಗೆ ಎಣ್ಣೆ ಸಕ್ಕರೆ, ಬೆಲ್ಲ, ವಿವಿಧ ಬಗೆಯ ಕಾಳುಗಳನ್ನು ನೀಡಬೇಕು. 6 ವರ್ಷದಿಂದ ಬರಬೇಕಾಗಿರುವ ಇಕೆವೈಸಿ ಹಣ ಬಿಡುಗಡೆ ಮಾಡಬೇಕೆಂದು ಕೋರಲಾಗುವುದು. ಕಳೆದ 2 ತಿಂಗಳಿಂದ ಸರ್ವರ್ ಸಮಸ್ಯೆಯೇ ದೊಡ್ಡದಾಗಿದ್ದು, ಪಡಿತರ ವಿತರಣೆ ತೀವ್ರ ತೊಂದರೆಯಾಗುತ್ತಿದೆ ಎಂದರು. ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘದ ನಿರ್ದೇಶಕ ಗೋಪಾಲ್, ಮೈಸೂರು ನಗರ ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೊರೆಸ್ವಾಮಿ, ಶಿವಣ್ಣ, ರವಿ ಮತ್ತಿತರರಿದ್ದರು.

ಲಯನ್ಸ್ ಶಾಲೆಯಲ್ಲಿ ಕ್ರೀಡಾ ದಿನಾಚರಣೆ



ಲಯನ್ಸ್ ಶಾಲೆಯಲ್ಲಿ ಕ್ರೀಡಾ ದಿನಾಚರಣೆ ವೇಳೆ ವಿದ್ಯಾರ್ಥಿಗಳಿಗೆ ಉಪಹಾರ ವಿತರಿಸಲಾಯಿತು.

ಮೈಸೂರು,ಜ.1(ಎಂಕೆ)- ಮೈಸೂರಿನ ತಿಲಕ್‌ನಗರದಲ್ಲಿರುವ ಲಯನ್ಸ್ ಕ್ಲಬ್ ಆಫ್ ಮೈಸೂರಿನ ಲಯನ್ಸ್ ಶಾಲೆಯಲ್ಲಿ ಕ್ರೀಡಾ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ-317 ಜಿಲ್ಲಾ ಗವರ್ನರ್ ಕೆ.ಎಲ್.ರಾಜಶೇಖರ ಸೇವಾ ಮನೋಭಾವದ ದೃಷ್ಟಿಯಿಂದ ಅತ್ಯಂತ ಕಡಿಮೆ ಶುಲ್ಕದಲ್ಲಿ ಉತ್ತಮ ವಿದ್ಯಾಭ್ಯಾಸ ನೀಡುತ್ತಾ ಬರುತ್ತಿರುವ ಲಯನ್ಸ್ ಶಾಲೆಯು, ಆಟೋಟ ಸ್ಪರ್ಧೆಗಳಿಗೂ ಪ್ರೋತ್ಸಾಹ ನೀಡುವ ಮೂಲಕ ಮಕ್ಕಳಲ್ಲಿನ ಕೌಶಲ್ಯ ಗುರಿತಿಸಿ ಪ್ರೋತ್ಸಾಹ ನೀಡುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಪಡೆದು ಉನ್ನತ ಸ್ಥಾನಗಳನ್ನು ಪಡೆದುಕೊಳ್ಳುವಂತಾಗಲಿ ಎಂದು ಹಾರೈಸಿದರು.

ಲಯನ್ಸ್ ಇಂಟರ್ ನ್ಯಾಷನಲ್-317 ಜಿಲ್ಲಾ ಖಜಾಂಚಿ ಸುನಿಲ್ ಕುಮಾರ್, ಹೆಚ್ಚುವರಿ ಕಾರ್ಯದರ್ಶಿ ಜೆ.ಲೋಕೇಶ್, ಮಾಜಿ ಜಿಲ್ಲಾ ಗವರ್ನರ್ ಡಾ.ಪ್ರಭಾಮಂಡಲ, ಶಾಲೆಯ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಸಿ.ಮೋಹನ್ ಕುಮಾರ್, ಲಯನ್ಸ್ ಕ್ಲಬ್ ಆಫ್ ಮೈಸೂರ್ ಅಧ್ಯಕ್ಷ ಕೃಷ್ಣಮೂರ್ತಿ, ಖಜಾಂಚಿ ಮಾಯಣ್ಣ, ಪ್ರಾಂತೀಯ ಅಧ್ಯಕ್ಷ ಹೊನ್ನರಾಜು, ವಲಯ ಅಧ್ಯಕ್ಷ ಬಿ.ಶಿವಣ್ಣ, ಹೆಚ್.ಪಿ.ಸುರೇಶ್, ಶಿವರಾಜು, ಪಿ.ರಮೇಶ್, ಗಿರೀಶ್, ಎಸ್.ಎಂ. ಶಿವಕುಮಾರ್, ಗೀತಾಮೂರ್ತಿ, ಮುಖ್ಯ ಶಿಕ್ಷಕಿ ಹೇಮಾವತಿ ಮತ್ತಿತರರಿದ್ದರು.

ಸಿಂಧುವಳ್ಳಿ ಗ್ರಾಪಂನಲ್ಲಿ ಅಕ್ರಮದ ಆರೋಪ

ಮೈಸೂರು,ಜ.1(ಎಂಟಿವೈ)- ಸಿಂಧುವಳ್ಳಿ ಗ್ರಾಪಂನಲ್ಲಿ ವಾರ್ಡ್ ಮತ್ತು ಗ್ರಾಮ ಸಭೆ ನಡೆಸದೇ ವಿವಿಧ ಅಭಿವೃದ್ಧಿ ಕಾರ್ಯದಲ್ಲಿ ನಡೆಸಿರುವ ಅಕ್ರಮ ಮುಚ್ಚಿ ಹಾಕುವ ಹುನ್ನಾರ ನಡೆಸಲಾಗುತ್ತಿದೆ ಎಂದು ಸಿಂಧುವಳ್ಳಿ ಗ್ರಾಪಂ ಮಾಜಿ ಉಪಾಧ್ಯಕ್ಷ ಡಾ.ಉಮಾಪತಿ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾ.ಪಂನಲ್ಲಿ ಬೀದಿ ದೀಪಗಳ ಖರೀದಿ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಅಕ್ರಮ ನಡೆದಿದೆ. ಈ ಅವ್ಯವಹಾರ ಮುಚ್ಚಿ ಹಾಕುವ ಸಲುವಾಗಿಯೇ ಕಾಲಕಾಲಕ್ಕೆ ವಾರ್ಡ್ ಸಭೆ, ಗ್ರಾಮಸಭೆ, ಜಮಾಬಂದಿ ನಡೆಸಿಲ್ಲ. 5 ವರ್ಷಗಳಲ್ಲಿ ಇದುವರೆಗೆ ಕೇವಲ 2 ಜಮಾಬಂದಿ ಕಾರ್ಯಕ್ರಮ ನಡೆಸಲಾಗಿದೆ. ಎರಡೇ ಎರಡು ವಾರ್ಡ್ ಹಾಗೂ ಗ್ರಾಮ ಸಭೆ ನಡೆದಿವೆ. ಖರೀದಿಸಿರುವ ಹೈಮಾಸ್ಕ್ ದೀಪಗಳು ಕಳಪೆಯವು. ಇದರಿಂದ ಗ್ರಾಪಂಗೆ ಅಪಾರ ನಷ್ಟವಾಗಿದೆ ಎಂದು ದೂರಿದರು. ಗೋಷ್ಠಿಯಲ್ಲಿ ಮುಖಂಡರಾದ ಟಿ.ಎನ್.ಮಹೇಶ್, ದೊಡ್ಡಕಾನ್ಯ, ವಿಜಯಕುಮಾರ್, ಚಲುವರಾಜ್, ಮಹೇಶ್ ಅಂಕನಹಳ್ಳಿ ಇದ್ದರು.

ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಿಸಿ ಹೊಸ ವರ್ಷಾಚರಣೆ...



ಮೈಸೂರಿನ ಚಾಮುಂಡಿಪುರಂನಲ್ಲಿರುವ ಸರ್ಕಾರಿ ಬಾಲಬೋಧಿನಿ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಿಸುವ ಮೂಲಕ ಮಾಜಿ ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್ 2026ರ ಹೊಸ ವರ್ಷ ಆಚರಿಸಿದರು. ಈ ವೇಳೆ ಕೆಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲರಾಜೇಅರಸ್, ವಿ.ಮಂಜುನಾಥ್, ನಿರಂಜನ್, ಮಹೇಶ್, ಲಕ್ಷ್ಮಣ್, ಶಿವಕುಮಾರ್ ಹಾಗೂ ಶಾಲೆ ಅಧ್ಯಾಪಕರು ಇದ್ದರು.

ಮೈಸೂರು ಮಿತ್ರ

ಕಲ್ಲಿನಲ್ಲಿ ಕಾವ್ಯ ಬರೆದ ಅಮರಶಿಲ್ಪಿ ಜಕಣಾಚಾರಿ


ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮಂಡ್ಯ, ಜ.1– ಕಲೆ, ಶ್ರದ್ಧೆ ಮತ್ತು ಶಕ್ತಿಗೆ ಕೊನೆ ಇಲ್ಲ ಎಂಬುದನ್ನು ನಿರೂಪಿಸಿದವರು ಹಾಗೂ ಲೇಖನಿಯಲ್ಲೇ ಕಾವ್ಯ ಬರೆಯುವುದು ಕಷ್ಟಕರ. ಅಂತಹದರಲ್ಲಿ ಕಲ್ಲಿನಲ್ಲಿ ಕಾವ್ಯ ಬರೆದ ಮಹಾನ್ ಚೇತನ ಅಮರಶಿಲ್ಪಿ ಜಕಣಾಚಾರಿ ಎಂದು ಜಿಪಂ ಸಿಇಓ ಕೆ.ಆರ್.ನಂದಿನಿ ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಗರದ ಕಲಾಮಂದಿರ ದಲ್ಲಿ ನಡೆದ ವಿಶ್ವಕರ್ಮ ಅಮರಶಿಲ್ಪಿ ಜಕಣಾ ಚಾರಿ ಸಂಸ್ಮರಣಾ ದಿನಾಚರಣೆಯನ್ನು ದೀಪ ಬೆಳಗಿಸಿ, ಅಮರಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ನಿಷ್ಠೆ, ಛಲ, ಹಠ, ಕಲೆ ಮತ್ತು ಸಾಧನೆ ಮಾಡುವ ಗುರಿ ಹೊಂದಿದ ವ್ಯಕ್ತಿಯಿಂದ ಮಾತ್ರ ಕಲ್ಲಿನಲ್ಲಿ ಕಾವ್ಯ ಕೆತ್ತಲು ಸಾಧ್ಯ. ಅಮರಶಿಲ್ಪಿ ಜಕಣಾಚಾರಿ ಅವರು ಯಾವುದೇ ಕೆಲಸವಾದರೂ, ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಪೂರ್ಣಗೊಳಿಸುತ್ತಿದ್ದರು. ಯುವ ಪೀಳಿಗೆಗೆ ಅಮರಶಿಲ್ಪಿ ಜಕಣಾಚಾರಿ ಸ್ಫೂರ್ತಿ ಎಂದರು.

ಪ್ರಸ್ತುತ ಆಧುನಿಕ ಕಾಲದಲ್ಲಿ ಎಲ್ಲಾ ಕಾರ್ಯಗಳು ತ್ವರಿತವಾಗಿ ಪೂರ್ಣಗೊಳ್ಳಬೇಕು ಎಂಬ ಮನೋಭಾವನೆ ಇದೆ ಆದರೆ ಜಕಣಾಚಾರಿ ಅವರು ಯಶಸ್ಸು ಮಂದಗತಿಯಲ್ಲಿ ಬಂದರೂ ಸಹ ಕಾರ್ಯ ಪರಿಪಕ್ವವಾಗಿ ಇರಬೇಕು ಎಂದು ನಂಬಿದ್ದರು. ಯಶಸ್ಸು ಗಳಿಸಲು ತಾಳ್ಮೆ, ಸಂಯಮ ಅಗತ್ಯ ಎಂದು ತೋರಿಸಿಕೊಟ್ಟ ಮಹಾನ್ ಚೇತನ ಅಮರಶಿಲ್ಪಿ ಜಕಣಾಚಾರಿ ಅವರು ಎಂದು ಬಣ್ಣಿಸಿದರು.

ಸಾಮಾನ್ಯರಿಗೆ ಕಲ್ಲು ಕಲ್ಲಾಗಿ ಕಂಡರೆ ಅಮರಶಿಲ್ಪಿ ಜಕಣಾಚಾರಿ ಅವರಿಗೆ ಕಲ್ಲು ಭಕ್ತಿಯ ಸ್ವರೂಪದಲ್ಲಿ ಗೋಚರಿಸುತ್ತಿತ್ತು. ಅಂತಹ ಭಕ್ತಿಯ ಆಂತರ್ಯದ ದೃಷ್ಟಿಯನ್ನು ಚೇತನರು ಹೊಂದಿದ್ದರು. ವಿಶ್ವದಾದ್ಯಂತ ಕಲೆಗಳಿಗೆ ಜಕಣಾಚಾರಿ ಅವರು ಸಹಕಾರ ಮೂರ್ತಿಯಾಗಿ ಕಾಣುತ್ತಾರೆ. ಕಲೆಯನ್ನು ಪ್ರತಿನಿಧಿಸುವ ಸಾಂಸ್ಕೃತಿಕ ರಾಯಭಾರಿಯಾಗಿ ಅಮರಶಿಲ್ಪಿ ಜಕಣಾಚಾರಿ ನಿಲ್ಲುತ್ತಾರೆ ಎಂದರು.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಬೋರೇಗೌಡ ಮಾತನಾಡಿ, ಸರ್ಕಾರದಿಂದ ವಿಶ್ವಕರ್ಮ ಸಮಾಜವನ್ನು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಸ್ವಾವಲಂಬಿಯಾಗಿಸಲು ನೀಡಲಾಗುತ್ತಿರುವ ಗಂಗಾ ಕಲ್ಯಾಣ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ ಸೇರಿದಂತೆ ಇನ್ನಿತರ ಯೋಜನೆಗಳ ಕುರಿತು ಸಭಿಕರಿಗೆ ಮಾಹಿತಿ ನೀಡಿದರು.

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗನಂದ್ ಅವರು ವಿಶ್ವಕರ್ಮ ಸಮಾಜದ ಯುವಕರಿಗೆ ಉದ್ಯೋಗ ದೊರಕಿಸಿಕೊಡುವ ನಿಟ್ಟಿನಲ್ಲಿ ಪಡೆಯಬಹುದಾದ ಯೋಜನೆಗಳ ಕುರಿತು ಮಾಹಿತಿ ನೀಡಿದರು.

ಇದೇ ವೇಳೆ ಸಾಧಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ವಿಶ್ವಕರ್ಮ ಸಮಾಜದ ಅಧ್ಯಕ್ಷ ತಿರುಮಲಾಚಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ನಂದೀಶ್, ವಿಶ್ವಕರ್ಮ ಸಮಾಜದ ಮುಖಂಡರಾದ ಸುದರ್ಶನ್, ರಮೇಶ್, ಸೋಮಶೇಖರ್, ಶ್ರೀನಿವಾಸ್ ಮತ್ತಿತರರಿದ್ದರು.

ಮೆರವಣಿಗೆಗೆ ಚಾಲನೆ: ವರ್ಣರಂಜಿತ ಬೆಳ್ಳಿ ರಥದ ಮೇಲೆ ಇರಿಸಲಾಗಿದ್ದ ಅಮರಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ್ ಅವರು ಪುಷ್ಪಾರ್ಚನೆ ಮಾಡಿ ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು. ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿಯಿಂದ ನಗರದ ಪ್ರಮುಖ ಬೀದಿಗಳಲ್ಲಿ ವಿವಿಧ ಕಲಾ ತಂಡಗಳೊಂದಿಗೆ ಸಂಚರಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ತಲುಪಿತು.

ಸಮಗ್ರ ಕನ್ನಡಿಗರ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ

ಮಂಡ್ಯದಲ್ಲಿ ವಾಟಾಳ್ ನಾಗರಾಜ್ ಪ್ರತಿಭಟನೆ


ಸಮಗ್ರ ಕನ್ನಡಿಗರ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದರು.

ಮಂಡ್ಯ: ಸಮಗ್ರ ಕನ್ನಡಿಗರ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಹಾಗೂ ಇತರರು ನಗರದಲ್ಲಿ ಈಡುಗಾಯಿ ಒಡೆದು, ಕಡ್ಲೇಪುರಿ ಹಂಚಿ ಗುರುವಾರ ವಿಶೇಷವಾಗಿ ಪ್ರತಿಭಟನೆ ನಡೆಸಿದರು.

ನಗರದ ಜಯ ಚಾಮರಾಜೇಂದ್ರ ಒಡೆಯರ್ ವೃತ್ತಕ್ಕೆ ಧಾವಿಸಿದ ವಾಟಾಳ್ ನಾಗರಾಜ್ ನೇತೃತ್ವದ ಕಾರ್ಯಕರ್ತರು, ರಾಜ್ಯ ಸರ್ಕಾರದ ಕನ್ನಡ ವಿರೋಧಿ ನೀತಿ ಖಂಡಿಸಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ವಾಟಾಳ್ ನಾಗರಾಜ್ ಮಾತನಾಡಿ, ಕನ್ನಡ ನೆಲದಲ್ಲಿ ಪರಭಾಷಿಕರ ದೌರ್ಜನ್ಯ ಹೆಚ್ಚಾಗಿದೆ. ಪ್ರತಿ ಜಿಲ್ಲೆ, ಜಿಲ್ಲೆಗಳಲ್ಲೂ ಪರಭಾಷಿಕರಾದ ಬಿಹಾರ, ಉತ್ತರಪ್ರದೇಶ, ರಾಜಸ್ತಾನ್, ತಮಿಳುನಾಡು, ಆಂಧ್ರದವರು ನೆಲೆಸಿದ್ದಾರೆ. ಪರಭಾಷಿಕರಿಂದ ಕನ್ನಡಿಗರ ಮೇಲೆ ಆಗುತ್ತಿರುವ ದಬ್ಬಾಳಿಕೆ ನಿಲ್ಲಿಸಬೇಕು. ಹಿಂದಿ ಬೇಡವೇ ಬೇಡ, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಖಂಡಿಸಿದರು.

ಕಾರವಾರ, ಮಂಗಳೂರು ಬಂದರು ಅಭಿವೃದ್ಧಿ ಆಗಬೇಕು. ಬೆಳಗಾವಿ ಉಳಿಸಬೇಕು. ಎಂಇಎಸ್ ನಿಷೇಧಿಸಬೇಕು. ಕನ್ನಡಿಗರ ಉದ್ಯೋಗಕ್ಕಾಗಿ ನಿರಂತರ ಹೋರಾಟ ಮಾಡುತ್ತಿದ್ದೇವೆ. ಆದರೆ ಇದುವರೆಗೆ ಪ್ರಾಮಾಣಿಕ ಚಿಂತನೆ ಇಲ್ಲ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಸೇರಿದಂತೆ ರಾಜ್ಯದ ಸಮಗ್ರ ಅಭಿವೃದ್ಧಿಯಾಗಬೇಕು. ಕೇರಳದಲ್ಲಿ ಕನ್ನಡಿಗರನ್ನು ಗುಲಾಮರ ರೀತಿ ಕಾಣುತ್ತಿದ್ದಾರೆ. ರಾಜ್ಯದಲ್ಲಿ ಕೇರಳಿಗರಿಗೆ ತೊಂದರೆಯಾದರೆ ಅವರು ಗಂಭೀರವಾಗಿ ಮಾತನಾಡುತ್ತಾರೆ. ಇದು ಸರಿಯಲ್ಲ. ಮುಂದಿನ ದಿನಗಳಲ್ಲಿ ಮಲಯಾಳಿಗಳಿಂದ ಕನ್ನಡಿಗರ ಮೇಲೆ ದೌರ್ಜನ್ಯವಾದಲ್ಲಿ ಮಲಯಾಳಿಗಳೇ ಕರ್ನಾಟಕ ಬಿಟ್ಟು ತೊಲಗಿ ಎಂಬ ಚಳವಳಿ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮೇಕೆದಾಟು ಯೋಜನೆಗಾಗಿ ಹೋರಾಟ ನಡೆಸಿದ್ದರು. ಆದರೆ ಅವರೇ ಅಧಿಕಾರಕ್ಕೆ ಬಂದರೂ ಏನೂ ಮಾಡಲಿಲ್ಲ. ತಮಿಳುನಾಡು ಸರ್ಕಾರದೊಂದಿಗೆ ಕೂಡಲೇ ವ್ಯವಹರಿಸಿ ತಕ್ಷಣ ಮೇಕೆದಾಟು ಯೋಜನೆಗೆ ಅನುಮತಿ ಪಡೆಯಬೇಕು ಎಂದು ಒತ್ತಾಯಿಸಿದರು.

ಮಹದಾಯಿ, ಕಳಸಾ ಬಂಡೂರಿ ಆಗಲೇಬೇಕು. ಇದಕ್ಕಾಗಿ ಜ.18ರಂದು ಹುಬ್ಬಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆ ಮುಂದೆ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು. ಗ್ರೇಟರ್ ಬೆಂಗಳೂರು ಬೇಡ. ಗಡಿನಾಡುಗಳ ಬೆಳವಣಿಗೆ ಆಗಬೇಕು. ಮೆಟ್ರೋ ದರ ಕಡಿಮೆ ಮಾಡಬೇಕು. ಆಲಮಟ್ಟಿ ಜಲಾಶಯ ಎತ್ತರಿಸಬೇಕು. ಕನ್ನಡದಲ್ಲೇ ನಾಮಫಲಕ ಅಳವಡಿಸಬೇಕು. ಪುರುಷರಿಗೂ ಉಚಿತ ಬಸ್ ಪಾಸ್, ಗೃಹಲಕ್ಷ್ಮಿ ಯೋಜನೆ ಜಾರಿಗೊಳಿಸಬೇಕು. ಪುರುಷರನ್ನು ಕಡೆಗಾಣಿಸಬಾರದು ಸೇರಿದಂತೆ ಹಲವು ಬೇಡಿಕೆಗಳನ್ನು ಇಟ್ಟುಕೊಂಡು ವರ್ಷಪೂರ್ತಿ ಪ್ರತಿಭಟನೆ ಮಾಡುತ್ತೇನೆ ಎಂದರು.

ಕನ್ನಡ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ್, ಮುಖಂಡರಾದ ಮಹಾಂತಪ್ಪ, ಬೆಟ್ಟಹಳ್ಳಿ ಮಂಜುನಾಥ್, ಕರವೇ ಹೆಚ್.ಡಿ.ಜಯರಾಂ, ನಾರಾಯಣ, ಪಾರ್ಥಸಾರಥಿ ಹಲವರು ಭಾಗವಹಿಸಿದ್ದರು.

ಕೆ.ಆರ್.ಪೇಟೆಯಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ


ಕೆ.ಆರ್.ಪೇಟೆಯಲ್ಲಿ ಕೋರೆಗಾಂವ್ ವಿಜಯೋತ್ಸವ ನಡೆಯಿತು.

ಕೆ.ಆರ್.ಪೇಟೆ, ಜ.1– ಸುಮಾರು 500 ಮಹರ್ ದಲಿತರು ಭೀಮಾ ಕೋರೆಗಾಂವ್‌ನಲ್ಲಿ ಮರಾಠಿ ಪೇಶ್ವೆಗಳಿಂದ ತಮ್ಮ ಮೇಲೆ ನಡೆಯುತ್ತಿದ್ದ ದೌರ್ಜನ್ಯ, ಅಪಮಾನ ತಾಳಲಾರದೇ ಸ್ವಾಭಿಮಾನ ಹಾಗೂ ಆತ್ಮಗೌರವದಿಂದ ಹೋರಾಡಿ 28 ಸಾವಿರ ಪೇಶ್ವೆಗಳ ವಿರುದ್ಧ 1818 ಜ.1 ರಂದು ವಿಜಯ ಸಾಧಿಸಿದ ದಿನವನ್ನು ಭೀಮಾ ಕೋರೆಗಾಂವ್ ವಿಜಯೋತ್ಸವವನ್ನಾಗಿ ಆಚರಿಸಲಾಗುತ್ತಿದೆ ಎಂದು ಪುರಸಭೆ ಸದಸ್ಯ ಡಿ.ಪ್ರೇಂಕುಮಾರ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕೆ.ಆರ್.ಪೇಟೆ ಛಲವಾದಿ ಮಹಾಸಭಾ ವತಿಯಿಂದ ಕೋರೆಗಾಂವ್ ವಿಜಯೋತ್ಸವ ಅಂಗವಾಗಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, 1818ರಲ್ಲಿ ನೂರಾರು ಮಹರ್ ಸೈನಿಕರು 28 ಸಾವಿರ ಪೇಶ್ವೆಗಳೊಂದಿಗೆ ಅಂದರೆ 2ನೇ ಬಾಜೀರಾಯನ ಸೈನ್ಯವನ್ನು ಮಣಿಸಿ ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ಅವರ ಸ್ಮರಣಾರ್ಥ ಜ.1 ರಂದು ಕೋರೆಗಾಂವ್ ವಿಜಯೋತ್ಸವ ಆಚರಿಸುತ್ತಿದ್ದೇವೆ ಎಂದರು.

ಛಲವಾದಿ ಮಹಾಸಭಾ ಕೆ.ಆರ್.ಪೇಟೆ ತಾಲೂಕು ಅಧ್ಯಕ್ಷ ನಟರಾಜು ಮಾತನಾಡಿದರು. ತಾಲೂಕು ಗೌರವಾಧ್ಯಕ್ಷ ಸೋಮಸುಂದರ್, ಛಲವಾದಿ ಮಹಾಸಭಾ ಹಾಸನ, ಮಂಡ್ಯ ಜಿಲ್ಲಾ ಉಸ್ತುವಾರಿ ಜಯರಾಂ, ಮಹೇಂದ್ರ, ತಾಲೂಕು ಅಧ್ಯಕ್ಷ ಸಮೀರ್, ಗೌರವಾಧ್ಯಕ್ಷ ಎ.ಸಿ.ಕಾಂತರಾಜು, ದಲಿತ ಯುವ ಮುಖಂಡರಾದ ನರಸಿಂಹ, ವೀರಭದ್ರ, ಚನ್ನಕೃಷ್ಣ ರವಿ, ಶಿವಕುಮಾರ್, ಶಂಕರ್, ರವಿ, ಯೋಗೇಶ್, ತಮ್ಮಯ್ಯ, ರಮೇಶ್, ರಾಮು, ಪ್ರದೀಪ್ ಕುಮಾರ್, ಬಸವರಾಜು, ಶೃತಿ, ರವಿಶ ಸೇರಿದಂತೆ ಉಪಸ್ಥಿತರಿದ್ದರು.



ಎಸ್ಪಿ ಅಧಿಕಾರ ಸ್ವೀಕಾರ

ಮಂಡ್ಯ ಜಿಲ್ಲಾ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ವಿ.ಜೆ.ಶೋಭಾರಾಣಿ ಅವರು ಗುರುವಾರ ನಿಕಟಪೂರ್ವ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರಿಂದ ಅಧಿಕಾರ ವಹಿಸಿಕೊಂಡರು.

ಚಿನಕುರಳಿಯಲ್ಲಿ ವಿಜೃಂಭಣೆಯ ಗುರುವಂದನೆ


ಚಿನಕುರಳಿಯಲ್ಲಿ ಗುರುವಂದನಾ ಹಾಗೂ ಸ್ನೇಹ ಸಮಾಗಮ ಕಾರ್ಯಕ್ರಮ ನಡೆಯಿತು.

ಚಿನಕುರಳಿ, ಜ.1– ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜು/ಪ್ರೌಢಶಾಲೆಯಲ್ಲಿ ಗುರುವಂದನಾ ಹಾಗೂ ಸ್ನೇಹ ಸಮಾಗಮ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು.

1993–94ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ ಸುಮಾರು 179 ವಿದ್ಯಾರ್ಥಿಗಳು ಗುರುವಂದನಾ ಹಾಗೂ ಸ್ನೇಹ ಸಮಾಗಮ ಕಾರ್ಯಕ್ರಮ ಆಯೋಜಿಸುವ ಮೂಲಕ ತಮ್ಮ ನೆಚ್ಚಿನ ಗುರುಗಳನ್ನು ಒಟ್ಟಿಗೆ ನೋಡುವ ಜೊತೆಗೆ ಆತ್ಮೀಯವಾಗಿ ಸನ್ಮಾನಿಸುವ ಹಿನ್ನೆಲೆಯಲ್ಲಿ 31 ವರ್ಷಗಳ ನಂತರ ವಾಟ್ಸಾಪ್ ಗ್ರೂಪ್ ರಚಿಸಿ ಸತತ ಒಂದೂವರೆ ವರ್ಷಗಳ ಪ್ರಯತ್ನದ ಫಲವಾಗಿ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಒಟ್ಟುಗೂಡಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ತಮಗೆ ವಿದ್ಯೆ ಬುದ್ಧಿ ಕಲಿಸಿದ ಗುರುಗಳಿಗೆ ಮೈಸೂರು ಪೇಟ ತೊಡಿಸಿ, ನೆನಪಿನ ಕಾಣಿಕೆ ನೀಡಿ ಕೃತಜ್ಞತಾ ಪೂರ್ವಕವಾಗಿ ವಿದ್ಯಾರ್ಥಿಗಳು ಆತ್ಮೀಯವಾಗಿ ಅಭಿನಂದಿಸಿದರು.

ನಿವೃತ್ತ ವಿಜ್ಞಾನ ಶಿಕ್ಷಕ ತಿಮ್ಮೇಗೌಡ ಮಾತನಾಡಿ, 1993–94ನೇ ಸಾಲಿನ ವಿದ್ಯಾರ್ಥಿಗಳು ಅಂದು ನಾವು ಅವರಿಗೆ ಪಾಠ ಮಾಡುತ್ತಿದ್ದ ರೀತಿ ನೆನೆದು ನಮ್ಮನ್ನು ನೆನಪಿನಲ್ಲಿ ಇಟ್ಟುಕೊಂಡು ಇಂದು ನಮ್ಮನ್ನು ಆಹ್ವಾನಿಸಿ ಸನ್ಮಾನಿಸುತ್ತಿರುವುದು ನನ್ನ ಜೀವನದಲ್ಲಿ ಮರೆಯಲಾಗದ ಕ್ಷಣ ಎಂದರು.

ನಿವೃತ್ತ ಗಣಿತ ಶಿಕ್ಷಕ ಎಂ.ಕೆ. ಜಗದೀಶ್ ಮಾತನಾಡಿ, ಅಂದಿನ ಕಾಲದಲ್ಲಿ ವಿದ್ಯಾರ್ಥಿಗಳು ಬಹಳ ಕಷ್ಟದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಆದರೂ ಸಹ ಚೆನ್ನಾಗಿ ಓದಿ ಇಂದು ನಮ್ಮನ್ನೆಲ್ಲಾ ನೆನಪಿಸಿಕೊಂಡು ಈ ಗೌರವ ನೀಡುತ್ತಿರುವುದು ನಮಗೆ ಸಂತಸ ತಂದಿದೆ ಎಂದರು.

ನಿವೃತ್ತ ಸಮಾಜ ಶಿಕ್ಷಕ ಪ್ರಕಾಶ್ ಮಾತನಾಡಿ, ನಾವು ವಿದ್ಯಾರ್ಥಿಗಳು ಒಳ್ಳೆಯ ಶಿಕ್ಷಣ ಪಡೆಯಲಿ ಎಂಬ ದೃಷ್ಟಿಯಿಂದ ಅವರನ್ನು ದಂಡಿಸುತ್ತಿದ್ದೆವು. ಅದರ ಫಲವಾಗಿ ಇಂದು ಎಲ್ಲಾ ವಿದ್ಯಾರ್ಥಿಗಳು ಒಂದೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿ ಸಮಾಜದಲ್ಲಿ ಹೆಸರು ಗಳಿಸಿ ಉತ್ತಮ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ ಇದು ನಮಗೆ ತುಂಬಾ ಖುಷಿಯಾಗುತ್ತಿದೆ ಎಂದರು.

ಕಾರ್ಯಕ್ರಮದ ನಂತರ ಎಲ್ಲರಿಗೂ ಹೋಳಿಗೆ ಊಟ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ತಮ್ಮ ಶಿಕ್ಷಕರು ಹಾಗೂ ಸ್ನೇಹಿತರನ್ನು ಭೇಟಿ ಮಾಡಿ ಸಂತಸಪಟ್ಟರು. ಕಾರ್ಯಕ್ರಮದಲ್ಲಿ ಶಿಕ್ಷಕ ರವೀಂದ್ರ ಬಾಬು, ಗುಮಾಸ್ತ ಶಶಿಧರ್, ಪ್ರಾಂಶುಪಾಲ ನಿಂಗೇಗೌಡ, ಶಿಕ್ಷಕರಾದ ಮಹೇಶ್ ಹಾಗೂ ಹಳೆಯ ವಿದ್ಯಾರ್ಥಿಗಳಿದ್ದರು.

ಒಂದನೇ ಪುಟದಿಂದ

ಮತ್ತೇರಿಸಿಕೊಂಡವರ ಸಂಖ್ಯೆ ಇಳಿಮುಖ!

ಸ್ವರೂಪದ ಮದ್ಯ ಮಾರಾಟ ಕೇಂದ್ರಗಳಿಗೆ ಕೆಎಸ್‌ಬಿಸಿಎಲ್ ಡಿಪೋದಿಂದ 5,71,15, 687.67 ರೂ. ಮೌಲ್ಯದ 62,796.98 ಲೀಟರ್ ಮದ್ಯ(ಐಎಂಎಲ್) ಹಾಗೂ 1,23,33,030.90 ರೂ. ಮೌಲ್ಯದ 44,883. 39 ಲೀಟರ್ ಬಿಯರ್ ಪೂರೈಕೆಯಾಗಿದೆ. ಒಟ್ಟಾರೆ ಒಂದೇ ದಿನ 69.45 ಕೋಟಿ ರೂ. ಮೌಲ್ಯದ ಮದ್ಯ ಬಿಕರಿಯಾಗಿದೆ.

ಕಳೆದ ವರ್ಷ ಭರ್ಜರಿ ವ್ಯಾಪಾರ: 2024ರ ಡಿ.31ರಂದು ಒಂದೇ ದಿನ 6,41,18, 379.36 ಮೌಲ್ಯದ 88,046.41 ಲೀಟರ್ ಮದ್ಯ ಹಾಗೂ 1,63,11,005.39 ರೂ. ಮೌಲ್ಯದ 66,047.37 ಲೀಟರ್ ಬಿಯರ್ ಮಾರಾಟವಾಗಿತ್ತು. ಹಾಗಾಗಿ 80.43 ಕೋಟಿ ರೂ. ಮೌಲ್ಯದ ಮದ್ಯ ಮಾರಾಟವಾಗಿತ್ತು.

ಡಿಸೆಂಬರ್‌ನಲ್ಲಿ 121 ಕೋಟಿ ಮೌಲ್ಯದ ವಹಿವಾಟು: ಈ ಮಧ್ಯೆ ಡಿಸೆಂಬರ್ 1 ರಿಂದ 31ರವರೆಗೆ ಮದ್ಯ ಪ್ರಿಯರು ದಾಖಲೆ ಪ್ರಮಾಣದಲ್ಲಿ ಮದ್ಯ ಸೇವನೆ ಮಾಡಿ ಮತ್ತೇರಿಸಿಕೊಂಡಿದ್ದಾರೆ. 96,78,88, 525.47 ರೂ. ಮೌಲ್ಯದ 12,27,369.26 ಲೀಟರ್ ಮದ್ಯ ಹಾಗೂ 24,20,80, 261.50 ರೂ. ಮೌಲ್ಯದ 9,37,087.86 ಲೀಟರ್ ಬಿಯರ್ ಮಾರಾಟವಾಗಿದೆ. 2025ರ ಡಿಸೆಂಬರ್ ತಿಂಗಳಲ್ಲಿ 121 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿದೆ. 2024ರ ಡಿಸೆಂಬರ್ ತಿಂಗಳಿನ ವಹಿವಾಟಿಗೆ ಹೋಲಿಸಿದರೆ ಈ ಬಾರಿ 17.84 ಕೋಟಿ ಮೌಲ್ಯದ ಮದ್ಯ ಹೆಚ್ಚಿಗೆ ಮಾರಾಟವಾಗಿದೆ.

2024ರ ಡಿಸೆಂಬರ್ ತಿಂಗಳಲ್ಲಿ 81,89,90,561.31 ರೂ. ಮೌಲ್ಯದ 11,46,255.00 ಲೀಟರ್ ಮದ್ಯ ಹಾಗೂ 21,26,30,359.30 ರೂ. ಮೌಲ್ಯದ 8,81,334.23 ಲೀಟರ್ ಬಿಯರ್ ಸೇರಿದಂತೆ 103.16 ಕೋಟಿ ರೂ. ಮೌಲ್ಯದ ಮದ್ಯ ಮಾರಾಟವಾಗಿತ್ತು.

ಮೈಸೂರು ಜಿಲ್ಲೆಯಲ್ಲಿ ಸಿಎಲ್–2(ವೈನ್‌ಸ್ಟೋರ್), ಸಿಎಲ್4(ಕ್ಲಬ್), ಸಿಎಲ್–7(ಬಾರ್‌ನೊಂದಿಗೆ ಊಟ, ವಸತಿ ಸೌಲಭ್ಯ), ಸಿಎಲ್–9(ಬಾರ್ ಅಂಡ್ ರೆಸ್ಟೋರೆಂಟ್) ಲೈಸೆನ್ಸ್ ಹೊಂದಿರುವ 1000ಕ್ಕೂ ಹೆಚ್ಚು ಮದ್ಯ ಮಾರಾಟ ಮಳಿಗೆಗಳಿವೆ. ಅದರೊಂದಿಗೆ 100ಕ್ಕೂ ಹೆಚ್ಚು ಎಂಎಸ್‌ಐಎಲ್ ಮಳಿಗೆಗಳಿವೆ. ಈ ಎಲ್ಲಾ ಕೇಂದ್ರಗಳಲ್ಲೂ ಮದ್ಯದ ಮಾರಾಟ ಭರ್ಜರಿಯಾಗಿ ಸಾಗಿದೆ.

ನಗರದಲ್ಲೇ ಹೆಚ್ಚು: ಹೊಸ ವರ್ಷದ ಎಣ್ಣೆ ಪಾರ್ಟಿ ಮೈಸೂರು ನಗರ ವ್ಯಾಪ್ತಿ ಭರ್ಜರಿಯಾಗಿ ನಡೆಯಲಿದ್ದು, ಜಿಲ್ಲೆಯ ವಹಿವಾಟಿನಲ್ಲಿ ಶೇ.70ರಷ್ಟು ಮದ್ಯ ಮಾರಾಟ ನಗರ ಪ್ರದೇಶದಲ್ಲೇ ನಡೆದರೆ, ಶೇ.30ರಷ್ಟು ಮದ್ಯ ಮಾರಾಟ ಗ್ರಾಮೀಣ ಪ್ರದೇಶದಲ್ಲಿ ನಡೆಯಲಿದೆ. ಕೆಲವರು ನಗರ ಪ್ರದೇಶದಿಂದ ಪಾರ್ಸೆಲ್ ತೆಗೆದುಕೊಂಡು ಹೋಗಿ ಗ್ರಾಮೀಣ ಪ್ರದೇಶದಲ್ಲಿ ಪಾರ್ಟಿ ಮಾಡಲಿದ್ದಾರೆ.

ಶೀಘ್ರ ಮಂಜೂರಾತಿ ಪತ್ರ

ಹಂತದ ವಂತಿಗೆ ಹಾಗೂ ಮನೆ ದಾಖಲಾತಿ ಆಧಾರದಲ್ಲಿ ಬ್ಯಾಂಕ್‌ಗಳು ನೀಡುವ ಸಾಲ, ಹೀಗೆ ಮೂರು ಮಾದರಿ ಹಣಕಾಸು ಹೊಂದಾಣಿಕೆಯೊಂದಿಗೆ ಈ ಯೋಜನೆ ಕಾರ್ಯಗತವಾಗುವುದರಿಂದ ಫಲಾನುಭವಿಗಳಿಗೆ ಮಂಜೂರಾತ್ರಿ ಪತ್ರ ವಿತರಿಸಿದರೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಹಾಯವಾಗಲಿದೆ.

ವರುಣಾಕ್ಕೆ 500 ಮನೆ: ಲಲಿತಾದ್ರಿಪುರದ ಶ್ರೀನಿವಾಸ ಬಡಾವಣೆ ಬಳಿ 9 ಎಕರೆ ಜಾಗದಲ್ಲಿ 205 ಕೋಟಿ ರೂ. ವೆಚ್ಚದಲ್ಲಿ ಒಟ್ಟು 1,440 ಗುಂಪು ಮನೆಗಳನ್ನು ನಿರ್ಮಿಸಲಾಗುತ್ತಿದೆ. ಪಾರ್ಕಿಂಗ್ ಇನ್ನಿತರ ಬಳಕೆಗಾಗಿ ಸಿಲ್ಟ್(ತಳ ನೆಲಮಹಡಿ) ಜೊತೆಗೆ 9 ಮಹಡಿಗಳನ್ನೊಳಗೊಂಡ ಈ ಕಟ್ಟಡವನ್ನು ಶಿಯರ್ ವಾಲ್ ತಂತ್ರಜ್ಞಾನದಲ್ಲಿ ನಿರ್ಮಿಸಲಾಗುತ್ತಿದೆ. ಇಲ್ಲಿನ ಒಟ್ಟು 1440ರಲ್ಲಿ ಕೃಷ್ಣರಾಜ ಕ್ಷೇತ್ರಕ್ಕೆ 940 ಹಾಗೂ ವರುಣ ಕ್ಷೇತ್ರಕ್ಕೆ 500 ಮನೆಗಳನ್ನು ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕೆಡಿಪಿ ಸಭೆಯಲ್ಲಿ ಸೂಚಿಸಿದ್ದರು. ಅದರಂತೆಯೇ ಮನೆಗಳನ್ನು ವಿಭಾಗಿಸಿ ಅರ್ಜಿ ಸ್ವೀಕರಿಸಿದ್ದು, ಸದ್ಯ ಹಣ ಪಾವತಿಸಿರುವ 657 ಮಂದಿಗೆ ಮಂಜೂರಾತಿ ಪತ್ರ ದೊರಕಲಿದೆ.

ಎರಡೂವರೆ ಸಾವಿರ ಸೂರು: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಫಲಾನುಭವಿಗಳಿಗಾಗಿ ಮಂಡಕಳ್ಳಿ ಬಳಿ ಬೃಹತ್ ಗುಂಪು ವಸತಿ ಯೋಜನೆ ಪ್ರಗತಿಯಲ್ಲಿದೆ. ಕರ್ನಾಟಕ ರಾಜ್ಯ ಮುಕ್ತ ವಿವಿ ಕಟ್ಟಡದ ಬಳಿಯ 34 ಎಕರೆ ಜಾಗದಲ್ಲಿ 206 ಕೋಟಿ ರೂ. ವೆಚ್ಚದಲ್ಲಿ 2,446 ಮನೆ ನಿರ್ಮಿಸುವ ಯೋಜನೆ ಇದಾಗಿದೆ. ಸದ್ಯ 1,920 ಮನೆಗಳ ನಿರ್ಮಾಣ ಪ್ರಗತಿಯಲ್ಲಿದ್ದು, ಇದರಲ್ಲಿ 1,100 ಮನೆ ಕಾಮಗಾರಿ ಅಂತಿಮ ಹಂತದಲ್ಲಿದೆ. ಈ ಹಿನ್ನೆಲೆಯಲ್ಲಿ ಇಷ್ಟು ಸಂಖ್ಯೆಯ ಫಲಾನುಭವಿಗಳಿಗೆ ಮನೆ ಮಂಜೂರಾತಿ ಪತ್ರ ವಿತರಿಸಲು ಸಿದ್ಧತೆ ನಡೆದಿದೆ.

ಗುಂಪು ಮನೆ ಯೋಜನೆಯಡಿ ಸಲ್ಲಿಕೆಯಾಗಿರುವ ಅರ್ಜಿಗಳ ಮಾಹಿತಿಯನ್ನು ನಗರ ಆಶ್ರಯ ವಸತಿ ಸಮಿತಿಗೆ ನೀಡಿದ್ದು, ಸಮಿತಿಯ ಅಧ್ಯಕ್ಷರೂ ಆದ ಆಯಾಯ ಕ್ಷೇತ್ರದ ಶಾಸಕರು ಜೇಷ್ಠತೆ ಆಧಾರದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ. ಬಳಿಕ ರಾಜೀವ್‌ಗಾಂಧಿ ವಸತಿ ನಿಗಮದ ಅನುಮೋದಿತ ಮಂಜೂರಾತಿ ಪತ್ರಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಿದ್ದಾರೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಸುಡಲಿದೆ ಸಿಗರೇಟ್

ರಾಷ್ಟ್ರೀಯ ಭದ್ರತಾ ಸೆಸ್ ವಿಧಿಸಲಾಗುತ್ತದೆ. ಇನ್ನು, ತಂಬಾಕು ಮತ್ತು ಸಂಬಂಧಿತ ಉತ್ಪನ್ನಗಳ ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು ಹೇರಲಾಗುತ್ತದೆ. ಬೀಡಿಗಳ ಮೇಲೆ ಶೇ.18 ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನ್ವಯವಾಗಲಿದೆ ಎಂದು ಸ್ಪಷ್ಟಪಡಿಸಲಾಗಿದೆ.

ಡಿಸೆಂಬರ್‌ನಲ್ಲಿ ಸಂಸತ್, ಪಾನ್ ಮಸಾಲಾ ತಯಾರಿಕೆಯ ಮೇಲೆ ಹೊಸ ಆರೋಗ್ಯ, ರಾಷ್ಟ್ರೀಯ ಭದ್ರತಾ ಸೆಸ್ ಹಾಗೂ ತಂಬಾಕಿನ ಮೇಲಿನ ಅಬಕಾರಿ ಸುಂಕವನ್ನು ವಿಧಿಸಲು ಅನುಮತಿಸುವ ಎರಡು ಮಸೂದೆಗಳನ್ನು ಅಂಗೀಕರಿಸಿತ್ತು. ಈ ಮಸೂದೆಯು ಪಾನ್ ಮಸಾಲ ತಯಾರಿಕೆ ಮತ್ತು ತಂಬಾಕಿನ ಮೇಲಿನ ಅಬಕಾರಿ ಸುಂಕದ ಜೊತೆಗೆ, ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ವಿಧಿಸಲು ಅವಕಾಶ ನೀಡುತ್ತದೆ. ಈ ಮಸೂದೆಯು ಸಂಸತ್‌ನಲ್ಲಿ ಅಂಗೀಕಾರಗೊಂಡಿದ್ದು, ಫೆಬ್ರವರಿ 1ರಿಂದ ಜಾರಿಗೆ ಬರಲಿದೆ.

ಸಂಭ್ರಮಾಚರಣೆ

ಸಾಧ್ಯವಾಗಿರಲಿಲ್ಲ. ಹೀಗಾಗಿ ಸಾವಿರ ದಿನ ಪೂರ್ಣಗೊಳಿಸಿರುವ ಸಮಯವನ್ನು ಬಳಸಿಕೊಂಡು ಬೃಹತ್ ಸಮಾವೇಶ ನಡೆಸಲು ತೀರ್ಮಾನಿಸಿದ್ದಾರೆ.

ಉಸ್ತುವಾರಿ : ಕಂದಾಯ ಸಚಿವ ಕೃಷ್ಣ ಬೈರೇಗೌಡ ಮತ್ತು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ನೇತೃತ್ವ ದಲ್ಲಿ ಈ ಸಮಾವೇಶ ನಡೆಯುತ್ತಿದ್ದು, ಸಮಾವೇಶದ ರೂಪುರೇಷೆಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರ ಜೊತೆ ಚರ್ಚೆ ನಡೆಸಿದ್ದಾರೆ.

ಕೇರಳಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ, ವೇಣುಗೋಪಾಲ್ ಅವರೊಂದಿಗೆ ತಿರುವನಂತಪುರದಲ್ಲಿ ಈ ಕುರಿತಂತೆ ಸುದೀರ್ಘ ಸಮಾಲೋಚನೆ ನಡೆಸಿದ್ದಾರೆ. ಫೆಬ್ರವರಿಯಲ್ಲಿ ಸಾವಿರ ದಿನದ ಸಂಭ್ರಮಾಚರಣೆಯ ಸಮಾವೇಶ ನಡೆಸುವ ಮೂಲಕ ಮುಂಬರುವ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗೆ ಪಕ್ಷದ ಪ್ರಚಾರಕ್ಕೆ ವಿದ್ಯುಕ್ತ ಚಾಲನೆ ನೀಡುವ ಕುರಿತಂತೆ ಮಾತುಕತೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಹುದ್ದೆಗೆ ಪಟ್ಟು ಹಿಡಿದಿದ್ದು, ಅದಕ್ಕಾಗಿ ಪ್ರತ್ಯೇಕ ಕಾರ್ಯತಂತ್ರ ರೂಪಿಸುತ್ತಿರುವ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಕಿರುವ ಹೊಸ ಪಟ್ಟು ಕುತೂಹಲ ಮೂಡಿಸಿದೆ. ಮುಖ್ಯ ಮಂತ್ರಿ ಆಗಿ ಐದು ವರ್ಷ ಪೂರ್ಣಗೊಳಿಸುತ್ತೇನೆ ಎಂದು ಈಗಾಗಲೇ ಘೋಷಿಸಿರುವ ಅವರು, ಇದೀಗ ಸಾವಿರ ದಿನದ ಸಂಭ್ರಮಾಚರಣೆಯ ಮೂಲಕ ತಮ್ಮ ಕುರ್ಚಿಯನ್ನು ಮತ್ತಷ್ಟು ಭದ್ರಪಡಿಸಿಕೊಳ್ಳಲು ಮುಂದಾಗಿದ್ದಾರೆ.

ಕೋಗಿಲಲ್ಲಿ ತೆರವುಗೊಂಡವರಲ್ಲಿ 90 ಮಂದಿಗೆ ಮಾತ್ರ ಮನೆ ಹಂಚಿಕೆ

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಸ್ಪಷ್ಟನೆ



ಬೆಂಗಳೂರು, ಜ.1– ಕೋಗಿಲು ಲೇಔಟ್‌ನ ಫಕೀರ್ ಕಾಲೋನಿಯಿಂದ ಸ್ಥಳಾಂತರಿಸಲ್ಪಟ್ಟ 400 ಕುಟುಂಬಗಳಿಗೆ ವಸತಿ ಕಲ್ಪಿಸಲಾಗುತ್ತಿದೆ ಎಂಬ ಹೇಳಿಕೆಯನ್ನು ಸ್ಪಷ್ಟವಾಗಿ ತಳ್ಳಿಹಾಕಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಕೇವಲ 90 ಕುಟುಂಬಗಳು ಮಾತ್ರ ಪರಿಹಾರಕ್ಕೆ ಅರ್ಹರಾಗಿದ್ದಾರೆ. ಅವರಿಗೆ ಮಾತ್ರ ಮನೆ ಹಂಚಿಕೆ ಮಾಡಲಾಗುವುದು ಎಂದು ಗುರುವಾರ ಹೇಳಿದ್ದಾರೆ.

ಇಂದು ನಗರದಲ್ಲಿ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಅವರು, ನಮ್ಮ ಇಲಾಖೆಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ನಡೆಸಿದ್ದಾರೆ. ಕೇವಲ 90 ಜನ ಸ್ಥಳೀಯ ನಿವಾಸಿಗಳಾಗಿದ್ದು, ಅವರಿಗೆ ಮತ್ತು ವಾಸ್ತವವಾಗಿ ಫಲಾನುಭವಿಗಳಾಗಿರುವವರಿಗೆ ಮಾತ್ರ ಮನೆಗಳನ್ನು ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಜಾತಿ, ವರ್ಗ, ಸಮುದಾಯದ ಆಧಾರದ ಮೇಲೆ ಕೆಲಸ ಮಾಡುತ್ತಿಲ್ಲ. ಕೋಗಿಲು ಪ್ರದೇಶದಲ್ಲಿ ಹಲವು ವರ್ಷಗಳಿಂದ ವಾಸವಾಗಿರುವ ಎಲ್ಲಾ ಸಮುದಾಯದವರಿಗೂ ಸೇರಿದ ಅರ್ಹ ಕುಟುಂಬಗಳಿಗೆ ಮನೆ ನೀಡಲಾಗುತ್ತಿದೆ ಎಂದರು.

ಬಿಜೆಪಿ ಪ್ರತಿಭಟನೆ ಎಚ್ಚರಿಕೆ: ಏತನ್ಮಧ್ಯೆ, ಅಕ್ರಮವಾಗಿ ಮನೆ ಹಂಚಿಕೆ ಮಾಡಿದರೆ ಜನವರಿ 5ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸುವುದಾಗಿ ಬಿಜೆಪಿ ಎಚ್ಚರಿಸಿದೆ.

ಯಲಹಂಕ ಬಿಜೆಪಿ ಶಾಸಕ ಎಸ್ ಆರ್ ವಿಶ್ವನಾಥ್, ನಿರ್ಮಾಣ ಕಾರ್ಯ ಅಪೂರ್ಣವಾಗಿ ಉಳಿದಿರುವುದರಿಂದ ಒಂದು ವರ್ಷದ ಹಿಂದೆ ಒಂದು ಲಕ್ಷ ರೂ. ಠೇವಣಿ ಇಟ್ಟ ಹಲವು ಜನರಿಗೆ ಇನ್ನೂ ಮನೆಗಳನ್ನು ಹಂಚಿಕೆ ಮಾಡಲಾಗಿಲ್ಲ. ನಿಯಮಗಳ ಪ್ರಕಾರ ಫಲಾನುಭವಿಗಳು ಗರಿಷ್ಠ ವಾರ್ಷಿಕ ಆದಾಯ ಮೂರು ಲಕ್ಷ ರೂ.ಗಳನ್ನು ಹೊಂದಿರಬೇಕು ಎಂದು ಅವರು ಹೇಳಿದ್ದಾರೆ.

ರಾಜೀವ್ ಗಾಂಧಿ ಆವಾಸ್ ಯೋಜನೆಯಡಿಯಲ್ಲಿ ಫಲಾನುಭವಿಗಳು ಬೆಂಗಳೂರಿನಲ್ಲಿ ಕನಿಷ್ಠ ಐದು ವರ್ಷಗಳ ಕಾಲ ವಾಸವಾಗಿರಬೇಕು ಮತ್ತು ಕಂದಾಯ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ನಿವಾಸಿ ಪ್ರಮಾಣಪತ್ರವನ್ನು ಹೊಂದಿರಬೇಕು ಎಂದು ವಿಶ್ವನಾಥ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.



ಪರಿಹಾರ ಕೋರಿ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಕೆ


ಬೆಂಗಳೂರು, ಜ.1– ಬೆಂಗಳೂರಿನ ಯಲಹಂಕ ಬಳಿಯ ಕೋಗಿಲು ಲೇಔಟ್‌ನ ಅನಧಿಕೃತ ಮನೆಗಳ ತೆರವು ಪ್ರಕರಣ ಸಂಬಂಧ ಕರ್ನಾಟಕ ಹೈಕೋರ್ಟ್‌ಗೆ ಗುರುವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ಸಲ್ಲಿಕೆಯಾಗಿದೆ.

ಮನೆ ಕಳೆದುಕೊಂಡಿರುವ ಜನರಿಗೆ ಪುನರ್ವಸತಿ ಮತ್ತು ಪರಿಹಾರ ನೀಡಬೇಕು ಎಂದು ಕೋರಿ ಜೈಬಾ ತಬಸ್ಸುಮ್ ಹಾಗೂ ಮತ್ತಿತರರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು, ಹಲವು ಬೇಡಿಕೆಗಳನ್ನು ನ್ಯಾಯಾಲಯದ ಮುಂದಿಟ್ಟಿದ್ದಾರೆ. ಕಳೆದ 30 ವರ್ಷಗಳಿಂದ ಇಲ್ಲಿ 3 ಸಾವಿರ ಜನ ವಾಸಿಸುತ್ತಿದ್ದಾರೆ. ವಸೀಂ, ಫಕೀರ್ ಕಾಲೋನಿಗಳ ತೆರವಿನಿಂದ ನಿರಾಶ್ರಿತರಾಗಿದ್ದು, ಅವರಿಗೆ ಎಸ್‌ಡಿಪಿಐ ಮತ್ತು ಎಂಐಎಂ ಪಕ್ಷಗಳು ಈಗ ನೆರವು ಒದಗಿಸುತ್ತಿವೆ.

ಸರ್ಕಾರ ಸಂತ್ರಸ್ತರಿಗೆ 5 ಕಿ.ಮೀ. ಅಂತರದಲ್ಲೇ ಮರುವಸತಿ ಕಲ್ಪಿಸಬೇಕು ಮತ್ತು ಅಲ್ಲಿಯವರೆಗೆ 3 ಹೊತ್ತಿನ ಪೌಷ್ಟಿಕಾಂಶಯುತ ಆಹಾರ ಒದಗಿಸಬೇಕು. 300 ಪ್ರತ್ಯೇಕ ಟೆಂಟ್, ಶೌಚಾಲಯದ ವ್ಯವಸ್ಥೆ ಕಲ್ಪಿಸಬೇಕು. ವೈದ್ಯಕೀಯ ವ್ಯವಸ್ಥೆ ಕಲ್ಪಿಸಿ ಆರೋಗ್ಯ ತಪಾಸಣೆ ಮಾಡಬೇಕು. ಜೊತೆಗೆ ಕಟ್ಟಡ ತೆರವಿಗೆ ಪರಿಹಾರ ನೀಡಬೇಕೆಂದು ಪಿಐಎಲ್ ನಲ್ಲಿ ಕೋರಲಾಗಿದೆ.

ಹೊಸ ವರ್ಷ 2026: ದೇಶದ ಜನತೆಗೆ ಪ್ರಧಾನಿ ಮೋದಿ ಶುಭಾಶಯ

ನವದೆಹಲಿ, ಜ.1– ಹೊಸ ಕ್ಯಾಲೆಂಡರ್ ವರ್ಷ 2026ಕ್ಕೆ ಕಾಲಿಟ್ಟಿದ್ದೇವೆ. ಈ ಸಂದರ್ಭದಲ್ಲಿ ದೇಶದ ಗಣ್ಯರು ಜನತೆಗೆ ಶುಭಾಶಯ ಕೋರಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ, ದೇಶ ಹಾಗೂ ವಿಶ್ವದ ಜನತೆಗೆ ಹೊಸ ವರ್ಷದ ಶುಭಾಶಯ ಕೋರಿದ್ದಾರೆ. ಅಲ್ಲದೆ ದೇಶದಲ್ಲಿ ಶಾಂತಿ ನೆಲೆಸಲು, ಪ್ರಜೆಗಳಿಗೆ ಉತ್ತಮ ಆರೋಗ್ಯ, ಸಮೃದ್ಧಿ ಸಿಗಲಿ ಎಂದು ಪ್ರಾರ್ಥಿಸಿದ್ದಾರೆ.

ತಮ್ಮ ಎಕ್ಸ್ ಸಂದೇಶದಲ್ಲಿ ಅವರು, ಮುಂಬರುವ ವರ್ಷವು ನಿಮ್ಮ ಪ್ರಯತ್ನಗಳಲ್ಲಿ ಯಶಸ್ಸು ಮತ್ತು ನೀವು ಮಾಡುವ ಎಲ್ಲದರಲ್ಲೂ ಸಾಧನೆಯೊಂದಿಗೆ ಉತ್ತಮ ಆರೋಗ್ಯ ಮತ್ತು ಸಮೃದ್ಧಿಯನ್ನು ತರಲಿ. ನಮ್ಮ ಸಮಾಜದಲ್ಲಿ ಶಾಂತಿ ಮತ್ತು ಸಂತೋಷ ನೆಲೆಸಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

2026 ಕ್ಕೆ ನಿಮ್ಮೆಲ್ಲರಿಗೂ ಶುಭಾಶಯಗಳು. ಈ ವರ್ಷವು ಎಲ್ಲರಿಗೂ ಹೊಸ ಭರವಸೆಗಳು, ಹೊಸ ನಿರ್ಣಯಗಳು ಮತ್ತು ಹೊಸ ಆತ್ಮವಿಶ್ವಾಸವನ್ನು ತರಲಿ ಎಂದು ನಾವು ಬಯಸುತ್ತೇವೆ. ಜೀವನದಲ್ಲಿ ಮುನ್ನಡೆಯಲು ಪ್ರತಿಯೊಬ್ಬರಿಗೂ ಪ್ರೇರಣೆ ನೀಡಲಿ ಎಂದು ಮೋದಿ ಆಶಿಸಿ ಸಂಸ್ಕೃತ ಶ್ಲೋಕ ಹಂಚಿಕೊಂಡಿದ್ದಾರೆ. ಜ್ಞಾನ, ನಿರ್ಲಿಪ್ತತೆ, ಸಂಪತ್ತು, ಶೌರ್ಯ, ವೈಭವ, ಶಕ್ತಿ ಮತ್ತು ಸ್ಮರಣಶಕ್ತಿ, ಸ್ವಾತಂತ್ರ್ಯ, ಕೌಶಲ್ಯ ಕಾಂತಿ ತಾಳ್ಮೆ ಸೌಮ್ಯತೆ ಎಂಬ ಅರ್ಥದ ಶ್ಲೋಕ ಹಂಚಿಕೊಂಡಿದ್ದಾರೆ.

ಗುವಾಹಟಿ–ಕೋಲ್ಕತ್ತಾ ನಡುವೆ ವಂದೇ ಭಾರತ್ ಸ್ಲೀಪರ್ ಸಂಚಾರ

ನವದೆಹಲಿ, ಜ.1– ವಿಶ್ವದರ್ಜೆಯ ಸೌಕರ್ಯಗಳು ಮತ್ತು ಆನ್‌ಬೋರ್ಡ್ ಸೌಕರ್ಯಗಳನ್ನು ಹೊಂದಿರುವ ಭಾರತದ ಮೊದಲ ವಂದೇ ಭಾರತ್ ಸ್ಲೀಪರ್ ರೈಲು, ಗುವಾಹಟಿ(ಕಾಮಾಕ್ಯ) ಮತ್ತು ಕೋಲ್ಕತ್ತಾದ ಹೌರಾ ನಡುವೆ ರಾತ್ರಿಯಿಡೀ ಗರಿಷ್ಠ ವೇಗದಲ್ಲಿ ಸಂಚರಿಸಲಿದ್ದು, ಶೀಘ್ರದಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಇದಕ್ಕೆ ಚಾಲನೆ ನೀಡಲಿದ್ದಾರೆ.

ಜನವರಿ 14ರ ನಂತರ ವಂದೇ ಭಾರತ್ ಸ್ಲೀಪರ್ ರೈಲಿನ ಪ್ರಾಯೋಗಿಕ ಸಂಚಾರ ಆರಂಭವಾಗಲಿದ್ದು, ಜನವರಿ 17 ಮತ್ತು 19ರ ನಡುವೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ರೈಲಿನ ಉದ್ಘಾಟಿಸಲಿದ್ದಾರೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ವಂದೇ ಭಾರತ್ ಸ್ಲೀಪರ್ ರೈಲಿನ ಉದ್ಘಾಟನೆಯ ನಿಖರವಾದ ದಿನಾಂಕವನ್ನು ಎರಡು ದಿನಗಳಲ್ಲಿ ಘೋಷಿಸಲಾಗುವುದು ಎಂದು ಅವರು ಹೇಳಿದ್ದಾರೆ. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ವೈಷ್ಣವ್, ವಂದೇ ಭಾರತ್ ಸ್ಲೀಪರ್ ರೈಲಿನ ದರಗಳು ಗುವಾಹಟಿ ಮತ್ತು ಕೋಲ್ಕತ್ತಾ ನಡುವಿನ ವಿಮಾನ ದರಗಳಿಗಿಂತ ಗಣನೀಯವಾಗಿ ಕಡಿಮೆ ಇರುತ್ತದೆ. ಏಕೆಂದರೆ ರೈಲುಗಳು ವಿಶೇಷವಾಗಿ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹೆಚ್ಚು ಕೈಗೆಟುಕುವ ರಾಷ್ಟ್ರೀಯ ಸಾರಿಗೆ ವಿಧಾನವನ್ನಾಗಿ ಮಾಡುವ ಪ್ರಧಾನಿ ಮೋದಿಯವರ ದೃಷ್ಟಿಕೋನಕ್ಕೆ ಅನುಗುಣವಾಗಿ ಬೆಲೆಗಳನ್ನು ನಿಗದಿಪಡಿಸಲು ನಿರ್ಧರಿಸಲಾಗಿದೆ ಎಂದರು.

ಗುವಾಹಟಿ ಮತ್ತು ಕೋಲ್ಕತ್ತಾ ನಡುವಿನ ವಿಮಾನ ಪ್ರಯಾಣಕ್ಕೆ ಸಾಮಾನ್ಯವಾಗಿ ಸುಮಾರು 6,000ರಿಂದ 8,000 ರೂ.ಗಳವರೆಗೆ ದರ ವಿಧಿಸಲಾಗುತ್ತದೆ. ವಿಮಾನ ದರಗಳಿಗೆ ಹೋಲಿಸಿದರೆ, ರೈಲ್ವೆ ಸಚಿವಾಲಯವು ವಂದೇ ಭಾರತ್ ಸ್ಲೀಪರ್ ರೈಲು ದರವನ್ನು ಸ್ವಲ್ಪ ಕಡಿಮೆ ಮಾಡಲು ನಿರ್ಧರಿಸಿದೆ. ವಂದೇ ಭಾರತ್‌ನಲ್ಲಿ, 3ನೇ ಎಸಿ ದರವು ಆಹಾರ ಸೇರಿದಂತೆ ಸುಮಾರು 2,300 ರೂ. ಇದ್ದರೆ, 2ನೇ ಎಸಿ ಸುಮಾರು 3,000 ರೂ. ಮತ್ತು 1ನೇ ಎಸಿ ಸುಮಾರು 3,600 ರೂ.ಗಳಾಗಿರುತ್ತದೆ. ಮಧ್ಯಮ ವರ್ಗವನ್ನು ಗಮನದಲ್ಲಿಟ್ಟುಕೊಂಡು ದರಗಳನ್ನು ನಿಗದಿಪಡಿಸಲಾಗಿದೆ ಎಂದು ಸಚಿವರು ಹೇಳಿದರು.

ಮೈಸೂರು ಮಿತ್ರ ಶುಕ್ರವಾರ 2 ಜನವರಿ 2026

ಜ್ಞಾನಪ್ರಕಾಶ್ ಸ್ವಾಮೀಜಿಗೂ ಗಾಂಧಿನಗರ ಉರಿಲಿಂಗಿ ಪೆದ್ದಿ ಮಠಕ್ಕೂ ಯಾವ ಸಂಬಂಧವಿಲ್ಲ

ಕಲ್ಬುರ್ಗಿ ಸೇಡಂ ತಾಲೂಕಿನ ಉರಿಲಿಂಗಿ ಪೆದ್ದಿ ಮಠದ ಪೀಠಾಧಿಪತಿ ಶ್ರೀ ಶಿವಲಿಂಗಸ್ವಾಮೀಜಿ ಸ್ಪಷ್ಟನೆ


ಶ್ರೀ ಶಿವಲಿಂಗಸ್ವಾಮೀಜಿ

ಮೈಸೂರು, ಜ.1(ಎಂಕೆ)– ಮೈಸೂರಿನ ಗಾಂಧಿನಗರದಲ್ಲಿರುವ ಉರಿಲಿಂಗಿ ಪೆದ್ದಿ ಮಠಕ್ಕೂ ಜ್ಞಾನಪ್ರಕಾಶ್ ಸ್ವಾಮೀಜಿ ಅಲಿಯಾಸ್ ಚಿಕ್ಕವೀರಯ್ಯ ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ಕಲ್ಬುರ್ಗಿ ಸೇಡಂ ತಾಲೂಕಿನ ಶ್ರೀ ಉರಿಲಿಂಗಿ ಪೆದ್ದಿ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಶಿವಲಿಂಗಸ್ವಾಮೀಜಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸೇಡಂನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಿಂದ 2005ರಲ್ಲಿಯೇ ಜ್ಞಾನಪ್ರಕಾಶ್ ಸ್ವಾಮೀಜಿಗೂ ಉರಿಲಿಂಗಿ ಪೆದ್ದಿ ಮಠಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಆದೇಶವಾಗಿದೆ. ಅಲ್ಲದೆ ಜ್ಞಾನಪ್ರಕಾಶ್ ಸ್ವಾಮೀಜಿ ಅವರನ್ನು 5ನೇ ಪೀಠಾಧಿಕಾರಿಯನ್ನಾಗಿ ಘೋಷಣೆ ಮಾಡಿರುವ ಶ್ರೀ ನಂಜುಂಡ ಸ್ವಾಮಿ ಅವರಿಗೂ ಕೂಡ ಮಠದೊಂದಿಗೆ ಯಾವ ಸಂಬಂಧವಿಲ್ಲ ಎಂಬುದನ್ನು ನ್ಯಾಯಾಲಯ ಸ್ಪಷ್ಟವಾಗಿ ತಿಳಿಸಿದೆ ಎಂದರು.

ಅದಾಗ್ಯೂ ಮಠದ ಉತ್ತರಾಧಿಕಾರಿ ಎಂದು ಹೇಳಿಕೊಳ್ಳುತ್ತಿರುವ ಜ್ಞಾನಪ್ರಕಾಶ್ ಸ್ವಾಮೀಜಿ, ಮೈಸೂರು ಜಿಲ್ಲೆ ದುದ್ದಗೆರೆ ಗ್ರಾಮದ 26 ಎಕರೆ 20 ಗುಂಟೆ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಿ, ಸಾರ್ವಜನಿಕರನ್ನು ವಂಚಿಸಿದ್ದಾರೆ. ಅಂಬೇಡ್ಕರ್ ಬಗ್ಗೆ ಮಾತನಾಡುವ ಅವರು, ಕಾನೂನು ಉಲ್ಲಂಘಿಸಿದ್ದಾರೆ ಎಂದು ದೂರಿದರು.

ಜ್ಞಾನಪ್ರಕಾಶ್ ಸ್ವಾಮೀಜಿ ಅವರೇ ಉರಿಲಿಂಗಿ ಪೆದ್ದಿ ಮಠದ ಉತ್ತರಾಧಿಕಾರಿಯಾಗಿದ್ದರೆ ನ್ಯಾಯಾಲಯದಲ್ಲಿ ಸಾಬೀತು ಪಡಿಸಲಿ ಎಂದು ಸವಾಲು ಹಾಕಿದರು. ಗಾಂಧಿನಗರ ನಿವಾಸಿಗಳಾದ ಎಂ.ಎನ್.ಪುಟ್ಟಸ್ವಾಮಿ, ಮಲ್ಲಿಕಾರ್ಜುನ, ಎಸ್.ಪ್ರಮೋದ್ ಉಪಸ್ಥಿತರಿದ್ದರು.

ಪಿಎಚ್‌ಡಿ ಪದವಿ



ಮೈಸೂರು: ಭೂಗೋಳಶಾಸ್ತ್ರ ವಿಷಯದಲ್ಲಿ ಕಿರಣ್‌ಕುಮಾರ್ ಪಿ.ಬಿ. ಅವರು ಮಂಡಿಸಿರುವ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ. ಪ್ರಾಧ್ಯಾಪಕಿ ಡಾ.ಪಿ.ಟಿ.ಭಾರತಿ ಅವರ ಮಾರ್ಗದರ್ಶನದಲ್ಲಿ 'ಜಿಐಎಸ್ ಮತ್ತು ದೂರಸಂವೇದಿ ಅನ್ವಯಿಕೆಗಳನ್ನು ಬಳಸಿಕೊಂಡು ಜಲಾನಯನ ಪ್ರದೇಶದ ಮೌಲ್ಯಮಾಪನ–ಚಿತ್ರದುರ್ಗ ಜಿಲ್ಲೆ ರಾಣಿಕೆರೆ ಜಲಾನಯನ ಪ್ರದೇಶ ಒಂದು ಅಧ್ಯಯನ' ವಿಷಯ ಕುರಿತು ಇಂಗ್ಲಿಷ್‌ನಲ್ಲಿ ಮಂಡಿಸಿರುವ ಮಹಾ ಪ್ರಬಂಧವನ್ನು ಪಿಎಚ್‌ಡಿ ಪದವಿಗೆ ಅಂಗೀಕರಿಸಲಾಗಿದೆ. ಮುಂದಿನ ವರ್ಷ ನಡೆಯುವ ವಾರ್ಷಿಕ ಘಟಿಕೋತ್ಸವದಲ್ಲಿ ಪಿಎಚ್‌ಡಿ ಪದವಿ ಪಡೆಯಲಿದ್ದಾರೆ.

ಸರ್ದಾರ್ ವಲ್ಲಭಭಾಯ್ ಪಟೇಲ್ ನಗರವೂ ಸೇರಿ ಇದಕ್ಕೆ ಹೊಂದಿಕೊಂಡ ಬಡಾವಣೆಗಳಲ್ಲಿ

ಮೂಲ ಸೌಕರ್ಯಕ್ಕೆ ಆಗ್ರಹಿಸಿ ನಿವಾಸಿಗಳ ಸಹಿ ಸಂಗ್ರಹ ಚಳುವಳಿ


ಕಲ್ಲು–ಮಣ್ಣಿನಿಂದ ಕಾಡಿನ ರಸ್ತೆಗಳಂತಿರುವ ಬಡಾವಣೆ ರಸ್ತೆಗಳು

"ಸರ್ದಾರ್ ವಲ್ಲಭಭಾಯ್ ಪಟೇಲ್ ನಗರಕ್ಕೆ ಮೂಲಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಹಲವು ವರ್ಷಗಳಿಂದ ಎಲ್ಲಾ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಮನವಿ ಪತ್ರ ಕೊಟ್ಟುಕೊಟ್ಟು ಸಾಕಾಗಿದೆ. ಇನ್ನಾದರೂ ಇಲ್ಲಿನ ಬಡಾವಣೆಗಳಿಗೆ ಮೂಲಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಸಹಿ ಸಂಗ್ರಹ ಚಳವಳಿ ಆರಂಭಿಸಲಾಗಿದೆ.

– ಪೊಲೀಸ್ ಬಡಾವಣೆ ನಿವಾಸಿಗಳು

ಮೈಸೂರು, ಜ.1(ಎಸ್‌ಪಿಎನ್)–ಮೈಸೂರಿನ ಸರ್ದಾರ ವಲ್ಲಭಭಾಯ್ ಪಟೇಲ್ ನಗರ(ಪೊಲೀಸ್ ಲೇಔಟ್‌ಗೆ) ಸೇರಿದಂತೆ ಇದಕ್ಕೆ ಹೊಂದಿಕೊಂಡಂತಿರುವ 25ಕ್ಕೂ ಅಧಿಕ ಬಡಾವಣೆಗಳಿಗೆ ಕುಡಿಯುವ ನೀರು, ರಸ್ತೆ ಡಾಂಬರೀಕರಣ ಸೇರಿದಂತೆ ಮೂಲ ಸೌಕರ್ಯ ಒದಗಿಸದ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳ ವಿರುದ್ಧ ಇಲ್ಲಿನ ನಿವಾಸಿಗಳು ಪತ್ರ ಚಳವಳಿ ಆರಂಭಿಸಿದ್ದಾರೆ.

ಸರ್ದಾರ್ ವಲಭಭಾಯ್‌ಪಟೇಲ್ ನಗರಕ್ಕೆ ಹೊಂದಿಕೊಂಡಂತೆ ಜೆಎಸ್‌ಎಸ್ ಬಡಾವಣೆ ಎರಡನೇ ಹಂತ, ಐಪಿಎಸ್ ಶ್ರೀನಿವಾಸ್‌ನಗರ, ವಸಂತನಗರ, ನೇತಾಜಿನಗರ, ಕೆಎಸ್‌ಆರ್‌ಟಿಸಿ ಬಡಾವಣೆ, ಶಾಂತವೇರಿ ಗೋಪಾಲಗೌಡ ನಗರ, ಗುರು ಮಲ್ಲೇಶ್ವರ ಬಡಾವಣೆ, ಸುಖದಾಯಿ, ಸಹೃದಯಿ(ಕೊಳ್ಳೇಗಾಲ ಬಡಾವಣೆ), ವಸಂತನಗರ ಸೇರಿದಂತೆ 25ಕ್ಕೂ ಅಧಿಕ ಬಡಾವಣೆಗಳಿಗೆ ಮೂಲ ಸೌಕರ್ಯ ಒದಗಿಸುವಂತೆ 450ಕ್ಕೂ ಹೆಚ್ಚು ಮನೆಗಳಿಗೆ ತೆರಳಿ ಸಹಿ ಸಂಗ್ರಹಿಸಿ, ಜಿಲ್ಲಾ ಉಸ್ತುವಾರಿ ಸಚಿವರಿಗೆ, ಈ ಭಾಗದ ಜನಪ್ರತಿನಿಧಿಗಳಿಗೆ ಹಾಗೂ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ ಎನ್ನುತ್ತಾರೆ ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ಕಾರ್ಯದರ್ಶಿ, ಇಲ್ಲಿನ ನಿವಾಸಿ ಡಿ.ಲೋಹಿತ್.

ಹಣ ಕಟ್ಟಿದರೂ ನೀರು ಕೊಡ್ತಿಲ್ಲ: ಕಳೆದೆರಡು ವರ್ಷಗಳ ಹಿಂದೆಯೇ ಕುಡಿಯುವ ನೀರು ಸರಬರಾಜಿಗೆ 2.5ಕೋಟಿ ಹಣವನ್ನು ಮುಡಾಗೆ ಕಟ್ಟಲಾಗಿದೆ. ಇಲ್ಲಿಯವರೆಗೂ ಕಾವೇರಿ ನೀರು ಪೂರೈಕೆಯಾಗಿಲ್ಲ.ಈಗ–ಆಗ ಅನ್ನುತ್ತಾರೆಯೇ ಹೊರತು, ಭರವಸೆ ಮಾತುಗಳು ಬಿಟ್ಟು, ಕೊಟ್ಟ ಮಾತು ಉಳಿಸಿಕೊಳ್ಳುತ್ತಿಲ್ಲ. ಅಲ್ಲದೆ, ಕಸ ಸಂಗ್ರಹಣೆಗೆ ನಿಗದಿತ ಸಮಯಕ್ಕೆ ಪೌರಕಾರ್ಮಿಕರು ಬರುತ್ತಿಲ್ಲ. ಇಲ್ಲಿನ ರಸ್ತೆ ಡಾಂಬರ್ ಕಂಡು 20 ವರ್ಷಗಳೇ ಕಳೆದಿವೆ. ಇಲ್ಲಿವರೆಗೂ ಮೂಲಸೌಕರ್ಯ ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹತ್ತಾರು ಮನವಿಗಳನ್ನು ಕೊಟ್ಟಿದ್ದೇವೆ. ಆದರೂ ನಮ್ಮ ನೋವುಗಳನ್ನು ಇಲ್ಲಿನ ಪ್ರತಿನಿಧಿಗಳು ಕೇಳುತ್ತಿಲ್ಲ ಎಂದು ಆರೋಪಿಸಿದ್ದಾರೆ.


ಮೂಲ ಸೌಕರ್ಯಕ್ಕಾಗಿ ಸಹಿ ಸಂಗ್ರಹಿಸುತ್ತಿರುವ ಸರ್ದಾರ್ ವಲ್ಲಭ ಭಾಯ್ ಪಟೇಲ್ ನಗರ ನಿವಾಸಿಗಳು

ತಿಪ್ಪಯ್ಯನಕೆರೆ ರಕ್ಷಣೆಗೆ ಮನವಿ: ಸರ್ದಾರ್ ವಲ್ಲಭಭಾಯ್ ಪಟೇಲ್ ನಗರಕ್ಕೆ ಹೊಂದಿಕೊಂಡಂತಿರುವ ತಿಪ್ಪಯ್ಯನಕೆರೆ ಸಂರಕ್ಷಣೆಗೆ ಮನವಿ ಮಾಡಲಾಗಿದೆ. ಆದರೂ ಕ್ರಮ ವಹಿಸಿಲ್ಲ. ಕೊರೊನಾ ಕಾಣಿಸಿಕೊಳ್ಳುವ ಮೊದಲು ಈ ಕೆರೆ ನಿರ್ವಹಣೆ ಚೆನ್ನಾಗಿತ್ತು. ಆದರೆ, ಈಗ ಬಡಾವಣೆ ಯುಜಿಡಿ ನೀರನ್ನು ತಿಪ್ಪಯ್ಯಕೆರೆಗೆ ಬಿಟ್ಟಿರುವುದರಿಂದ ಸೊಳ್ಳೆ, ನೊಣ ಹಾಗೂ ಹಂದಿಗಳ ಕಾಟ ಹೆಚ್ಚಾಗಿದೆ. ಅಲ್ಲದೆ, ತಿಪ್ಪಯ್ಯಕೆರೆ ಅಭಿವೃದ್ಧಿಗೆ ಹಲವಾರು ಬಾರಿ ಮನವಿ ಮಾಡಿದರೂ ಸಂಬಂಧಪಟ್ಟ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ಯಾರೂ ತಲೆಕೆಡಿಸಿಕೊಂಡಿಲ್ಲ ಎಂದು ಇಲ್ಲಿನ ನಿವಾಸಿ ಶಿವಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ.

ಬೀಟ್ ಪೊಲೀಸ್ ವ್ಯವಸ್ಥೆ ಜಾರಿಗೊಳಿಸಿ: ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ ಹಾಗೂ ಇದಕ್ಕೆ ಹೊಂದಿಕೊಂಡಂತಿರುವ 25ಕ್ಕೂ ಹೆಚ್ಚು ಬಡಾವಣೆಗಳಲ್ಲಿ 2 ಸಾವಿರ ಕುಟುಂಬಗಳು ವಾಸವಾಗಿವೆ. ರಾತ್ರಿ ವೇಳೆ ಅಪರಿಚಿತರ ಓಡಾಟ ಹೆಚ್ಚಾಗಿದೆ. ಆದರೂ, ಈ ಬಡಾವಣೆಗಳಿಗೆ ಪೊಲೀಸ್ ಬೀಟ್ ವ್ಯವಸ್ಥೆ ಇಲ್ಲ. ಬೀಟ್ ವ್ಯವಸ್ಥೆಯನ್ನು ಜಾರಿಗೊಳಿಸಬೇಕು ಮತ್ತು ಇಲ್ಲಿನ ನಿವಾಸಿಗಳೊಂದಿಗೆ ಪೊಲೀಸ್ ಇಲಾಖೆ ಸಭೆ ನಡೆಸಿ, ಇಲ್ಲಿನ ನಿವಾಸಿಗಳ ಭದ್ರತೆ ಆತಂಕವನ್ನು ದೂರ ಮಾಡಲಿ ಎನ್ನುತ್ತಾರೆ ಇಲ್ಲಿನ ನಿವಾಸಿ ಮಹೇಶ್.

ಕಸ ಸಂಗ್ರಹಣೆಗೆ ಖಾಸಗಿ ವ್ಯವಸ್ಥೆ: ಸರ್ದಾರ್ ವಲ್ಲಭಬಾಯ್ ಪಟೇಲ್ ನಗರ ಸೇರಿದಂತೆ 25ಕ್ಕೂ ಹೆಚ್ಚು ಬಡಾವಣೆಗಳಲ್ಲಿ ಸಂಗ್ರಹವಾಗುವ ಕಸವನ್ನು ಇಲ್ಲಿನ ನಿವಾಸಿಗಳೇ ಸಮಾನ ಮನಸ್ಕರ ವೇದಿಕೆ ಕಟ್ಟಿಕೊಂಡು ಪ್ರತಿ ಮನೆಗೆ 50 ರೂ. ಸಂಗ್ರಹಿಸಿ, ಕಸ ಸಂಗ್ರಹಣೆಗೆ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಗಮನಹರಿಸುವಂತೆ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಕ್ರಮ ವಹಿಸಿಲ್ಲ. ಒಟ್ಟಿನಲ್ಲಿ ಮನೆ ಕಂದಾಯ ಸಂಗ್ರಹಿಸುವ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳು, ಮೂಲಸೌಕರ್ಯ ಒದಗಿಸುವಲ್ಲಿ ಸಂಪೂರ್ಣ ವಿಫಲರಾಗುತ್ತಿದ್ದಾರೆ ಎಂದು ಇಲ್ಲಿನ ನಿವಾಸಿಗಳು ಆರೋಪಿಸಿದ್ದಾರೆ.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ


ಮೈಸೂರು ಶ್ರೀರಾಂಪುರ 2ನೇ ಹಂತದಲ್ಲಿನ ವೀರಶೈವ ಸ್ನೇಹ ಬಳಗದ ಶಿವ ದೇವಾಲಯದ ಆವರಣದಲ್ಲಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್‌ಎಂ ಗಣೇಶ್ ಪ್ರಸಾದ್ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಈ ಬಳಗದ ಅಧ್ಯಕ್ಷ ಪರಶಿವಪ್ಪ, ನಿರ್ದೇಶಕರಾದ ಸುರೇಶ್ ವಾಲಿ, ಪ್ರಕಾಶ್, ಕಟ್ಟಳ್ಳಿ ಪ್ರಸಾದ್ ಬಾಬು, ಗುರೂರು ಶ್ರೀಕಂಠಮೂರ್ತಿ, ಫಾರೆಸ್ಟ್ ಮಾದೇವಪ್ಪ, ಡಾ. ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.


ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಪದವಿಪೂರ್ವ ಕಾಲೇಜಿನಲ್ಲಿ ನೂತನ ವರ್ಷದ ಕ್ಯಾಲೆಂಡರ್ ಅನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ದಿನೇಶ್ ಆರ್ ಬಿಡುಗಡೆಗೊಳಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ.ಅಶೋಕ್‌ಕುಮಾರ್, ಉಪನ್ಯಾಸಕರಾದ ರಾಜೇಂದ್ರಪ್ರಸಾದ್ ಹೊನ್ನೆಲೆಗೆರೆ, ವೆಂಕಟರಾಮು, ಶ್ರೀಮತಿ ಶಿಲ್ಪ, ಡಾ.ಪೂಜಾ, ಶ್ರೀಮತಿ ದೀಪಿಕಾ, ಡಾ.ಉಮೇಶ್, ಮನೋಜ್‌ಕುಮಾರ್, ಮನೋಹರ್ ಅವರನ್ನು ಕಾಣಬಹುದು.


ಕರ್ನಾಟಕ ಸೇನಾ ಪಡೆ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಆವರಣದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಬಿಡುಗಡೆ ಮಾಡಿದರು. ಈ ವೇಳೆ ಯೋಗಾನರಸಿಂಹಸ್ವಾಮಿ ದೇವಸ್ಥಾನದ ವ್ಯವಸ್ಥಾಪಕ ಶ್ರೀನಿವಾಸ್, ಚಿತ್ರ ನಾಯಕನಟ ಎಸ್.ಜಯಪ್ರಕಾಶ್, ಡಾ.ರಘುರಾಂ ವಾಜಪೇಯಿ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿಜಿ ಗಂಗಾಧರ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮೈಸೂರು ಚಾಮರಾಜನಗರ ಸಹಕಾರಿ ಬ್ಯಾಂಕ್ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಬಿ.ಹೆಚ್.ಗೋವಿಂದೇಗೌಡ, ಎಂ.ಎನ್.ದೊರೆಸ್ವಾಮಿ, ಜಯಣ್ಣ, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಇನ್ನಿತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು,ಜ.1–ವಿ.ವಿ.ಮೊಹಲ್ಲಾ ಉಪವಿಭಾಗ ವ್ಯಾಪ್ತಿಯಲ್ಲಿ ತುರ್ತು ಕಾರ್ಯ ನಿಮಿತ್ತ ಜ.3ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿಜಯನಗರ 2ನೇ ಹಂತದಲ್ಲಿ ವಿದ್ಯಾವರ್ಧಕ ಕಾಲೇಜು ಹಿಂಭಾಗ, ಸಪ್ತಪದಿ ಚೌಲ್ಟ್ರಿ, ಆಯಿಸ್ವರ್ ಬೇ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಗೋಕುಲಂ 11 ಕೆ.ವಿ. ವಿದ್ಯುತ್ ಮಾರ್ಗ ವ್ಯಾಪ್ತಿಯ ಗೋಕುಲಂ 3ನೇ ಹಂತ, ಡಾರ್ಕ್ಸ್ ಕಾರ್ನರ್, ಮೈಸೂರು ಓನ್ ಗ್ರೌಂಡ್ ಮತ್ತು ESI ಕ್ವಾರ್ಟಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಬೃಂದಾವನ 11 ಕೆ.ವಿ. ವಿದ್ಯುತ್ ಮಾರ್ಗ ವ್ಯಾಪ್ತಿಯಲ್ಲಿ ಬರುವ ಜಯದೇವ ನಗರ, ಲೋಕನಾಯಕನಗರ, ಮಧುರಾನಗರ, ಲಿಂಗಯ್ಯನ ಕೆರೆ ಸುತ್ತಮುತ್ತ, ಪೋಸ್ಟ್ ಆಫೀಸ್ ಸುತ್ತಮುತ್ತ, ಹೆಬ್ಬಾಳ್ ಮುಖ್ಯ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಜೀವನ ಕಳೆದುಕೊಳ್ಳಬೇಡಿ, ಬದುಕಿ ಸಾಧಿಸಿ

ಮಾತೃಮಂಡಳಿ ಪ್ರೌಢಶಾಲೆ ವಾರ್ಷಿಕೋತ್ಸವದಲ್ಲಿ ಅಮ್ಮ ರಾಮಚಂದ್ರ ಕಿವಿಮಾತು


ಮೈಸೂರು ವಿ.ವಿ. ಮೊಹಲ್ಲಾ ಮಾತೃಮಂಡಳಿ ಪ್ರೌಢಶಾಲಾ ವಾರ್ಷಿಕೋತ್ಸವವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು.

ಮೈಸೂರು,ಜ.1–ಜೀವನ ಕಳೆದುಕೊಳ್ಳಬೇಡಿ, ಬದುಕಿ ಸಾಧಿಸಿ ಎಂದು ಅಂತಾರಾಷ್ಟ್ರೀಯ ಖ್ಯಾತಿಯ ಜಾನಪದ ಗಾಯಕ ಅಮ್ಮ ರಾಮಚಂದ್ರ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ವಿ.ವಿ. ಮೊಹಲ್ಲಾದ ಮಾತೃಮಂಡಳಿ ಪ್ರೌಢಶಾಲೆಯಲ್ಲಿ ಗುರುವಾರ ನಡೆದ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ನಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಾಲ್ಕು ವಿಷಯಗಳಲ್ಲಿ ಫೇಲಾದಾಗ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದಿದ್ದೆ. ಆದರೆ ನನ್ನ ತಾಯಿ ತಡೆದು, ಬುದ್ಧಿವಾದ ಹೇಳಿದರು. ಅದರಂತೆ ನಾನು ಕಷ್ಟಪಟ್ಟು ಓದಿ, ಎರಡು ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದು, ಈಗ ಪಿಎಚ್.ಡಿಯೂ ಮುಗಿದಿದ್ದು, ಜ.5ರಂದು ನಡೆಯುವ ಮೈಸೂರು ವಿವಿ ಘಟಿಕೋತ್ಸವದಲ್ಲಿ ಡಾಕ್ಟರೇಟ್ ಪಡೆಯುತ್ತಿದ್ದೇನೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಶಿಸ್ತು, ಕಠಿಣ ಪರಿಶ್ರಮ, ಆತ್ಮ ವಿಶ್ವಾಸ, ಛಲದಿಂದ ಏನು ಬೇಕಾದರೂ ಸಾಧಿಸಬಹುದು. ಶಿಕ್ಷಕರು ಹಾಗೂ ಪೋಷಕರ ಬೆಂಬಲದಿಂದ ಗುರಿ ಸಾಧಿಸುವ ಕಡೆ ಗಮನ ನೀಡಿ ಎಂದು ಸಲಹೆ ನೀಡಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ವಾಣಿ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷೆ ವಿಜಯ ಲಕ್ಷ್ಮಿ ಅರಸ್, ಉಪಸ್ಥಿತರಿದ್ದರು. ಸದಸ್ಯೆ ಶಕುಂತಲಾ ವೇಣು ಗೋಪಾಲ್, ಸದಸ್ಯರಾದ ಪದ್ಮಾ, ಉಷಾ ಹೆಗಡೆ, ಪಿಯು ಕಾಲೇಜು ಪ್ರಾಂಶುಪಾಲ ಸುರೇಶ್, ಸುಮಿತ್ರಾ, ಆನಂದರಾಮ್, ಮಮತಾ, ಹರೀಶ್ ಇನ್ನಿತರರಿದ್ದರು.

ಶಾಮನೂರು ಶಿವಶಂಕರಪ್ಪಗೆ ನುಡಿನಮನ; ಕ್ಯಾಲೆಂಡರ್ ಬಿಡುಗಡೆ



ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಹಿರಿಯ ರಾಜಕಾರಣಿ ದಿವಂಗತ ಡಾ.ಶಾಮನೂರು ಶಿವಶಂಕರಪ್ಪ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ಮೈಸೂರು,ಜ.1(ಎಂಕೆ)–ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಹಿರಿಯ ರಾಜಕಾರಣಿ ದಿವಂಗತ ಡಾ.ಶಾಮನೂರು ಶಿವಶಂಕರಪ್ಪ ಅವರಿಗೆ ನುಡಿನಮನ ಸಲ್ಲಿಸಿ, ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ದಿವಂಗತ ಡಾ.ಶಾಮನೂರು ಶಿವಶಂಕರಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮೌನಾಚರಣೆ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪುಷ್ಪಾರ್ಚನೆ ಮಾಡಿದ ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಡಾ.ಶಾಮನೂರು ಶಿವಶಂಕರಪ್ಪ ಅವರು, ಅಪರೂಪದ ರಾಜಕಾರಣಿ ಮಾತ್ರವಲ್ಲದೆ ಉದ್ಯಮಿ, ಲೋಕೋಪಕಾರಿ, ಶಿಕ್ಷಣ ತಜ್ಞ, ಕೃಷಿಕ ಮತ್ತು ಸಮಾಜ ಸೇವಕರೂ ಆಗಿದ್ದರು. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಸಾವಿರಾರು ಮಕ್ಕಳ ಭವಿಷ್ಯಕ್ಕೆ ಬೆಳಕಾಗಿದ್ದಾರೆ. ಸಮಾಜಕ್ಕೆ ಅಪಾರ ಕೊಡುಗೆ ನೀಡಿದ ಅವರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ನೆನೆದರು.

ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಖಜಾಂಚಿಗಳಾಗಿದ್ದ ಡಾ.ಶಾಮನೂರು ಶಿವಶಂಕರಪ್ಪ, ರಾಜಕಾರಣಿಯಾಗಿ ತ್ರಿವಿಧ ದಾಸೋಹಿಯಾಗಿ ಸಮಾಜಕ್ಕೆ ತಮ್ಮದೇ ಸೇವೆ ಸಲ್ಲಿಸಿದ್ದಾರೆ. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಿಕ್ಷಣ ಸಂಸ್ಥೆ ಸ್ಥಾಪಿಸುವ ಮೂಲಕ ಪ್ರೋತ್ಸಾಹ ನೀಡಿದ್ದಾರೆ. ಅವರ ಹತ್ತಾರು ಬಾಪೂಜಿ ಶಿಕ್ಷಣ ಸಂಸ್ಥೆಗಳಿಂದ ಸಾವಿರಾರು ಜನರ ಜೀವನ ಬದಲಾಗಿದೆ. 50ಕ್ಕೂ ಹೆಚ್ಚು ಉದ್ಯಾನವನಗಳನ್ನು ಸಹ ಅಭಿವೃದ್ಧಿ ಮಾಡಿದ್ದಾರೆ ಎಂದು ಸ್ಮರಿಸಿದರು.

ಬಳಿಕ ಪ್ರತಿಷ್ಠಾನದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಜ್ಯೋತಿಷಿ ವಿಷ್ಣು ಸಾಲಿಗ್ರಾಮ ಸ್ವಾಮಿ ದಿವ್ಯ ಸಾನಿಧ್ಯ ವಹಿಸಿದ್ದರು. ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಅಧ್ಯಕ್ಷ ಅಂಬಳೆ ಶಿವಣ್ಣ, ಬಿಜೆಪಿ ಮುಖಂಡ ಪಾರ್ಥಸಾರಥಿ, ಪಬ್ಲಿಕ್ ವಾಯ್ಸ್ ವಾಹಿನಿ ಮುಖ್ಯಸ್ಥ ರಾಜು ಕಾರ್ಯ, ವಕೀಲೆ ತನುಜಾ ಮಹೇಶ್, ನಟ ಸುಪ್ರೀತ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಅಪರೇಷನ್ ಸಿಂಧೂರ್ ಬಳಿಕ ಮೊದಲ ಬಾರಿಗೆ ಭಾರತ–ಪಾಕ್ ಪರಮಾಣು ಸ್ಥಾವರಗಳ ಪಟ್ಟಿ ವಿನಿಮಯ

ನವದೆಹಲಿ, ಜ.1– ಭಾರತ ಮತ್ತು ಪಾಕಿಸ್ತಾನ ಗುರುವಾರ ತಮ್ಮ ಪರಮಾಣು ಸ್ಥಾಪನೆಗಳ ಪಟ್ಟಿಯನ್ನು ವಿನಿಮಯ ಮಾಡಿಕೊಂಡವು. ಎರಡೂ ಕಡೆಯವರು ಪರಸ್ಪರ ಪರಮಾಣು ಸ್ಥಾಪನೆಗಳ ಮೇಲೆ ದಾಳಿ ಮಾಡುವುದನ್ನು ನಿಷೇಧಿಸುವ ದ್ವಿಪಕ್ಷೀಯ ಒಪ್ಪಂದದಡಿಯಲ್ಲಿ ಪಟ್ಟಿ ವಿನಿಮಯ ಮಾಡಿಕೊಳ್ಳಲಾಗಿದೆ.

ಕಳೆದ ಮೇನಲ್ಲಿ ಯುದ್ಧದ ನಂತರ ಎರಡೂ ದೇಶಗಳ ನಡುವಿನ ಸಂಬಂಧಗಳು ಸ್ಥಗಿತಗೊಂಡಿದ್ದರೂ ಪಟ್ಟಿಯ ವಿನಿಮಯ ನಡೆಯಿತು. ಪರಮಾಣು ಸ್ಥಾಪನೆಗಳು ಮತ್ತು ಸೌಲಭ್ಯಗಳ ಮೇಲಿನ ದಾಳಿ ನಿಷೇಧದ ಕುರಿತ ಒಪ್ಪಂದದ ನಿಬಂಧನೆಗಳ ಅಡಿಯಲ್ಲಿ ಪಟ್ಟಿ ವಿನಿಮಯ ನಡೆಯಿತು ಎಂದು ವಿದೇಶಾಂಗ ಸಚಿವಾಲಯ (MEA) ತಿಳಿಸಿದೆ. ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ರಾಜತಾಂತ್ರಿಕ ಮಾರ್ಗಗಳ ಮೂಲಕ ಇದನ್ನು ಏಕಕಾಲದಲ್ಲಿ ಮಾಡಲಾಯಿತು.

ಭಾರತ ಮತ್ತು ಪಾಕಿಸ್ತಾನ ಇಂದು ರಾಜತಾಂತ್ರಿಕ ಮಾರ್ಗಗಳ ಮೂಲಕ, ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ಏಕಕಾಲದಲ್ಲಿ, ಭಾರತ ಮತ್ತು ಪಾಕಿಸ್ತಾನ ನಡುವಿನ ಪರಮಾಣು ಸ್ಥಾಪನೆಗಳು ಮತ್ತು ಸೌಲಭ್ಯಗಳ ಮೇಲಿನ ದಾಳಿ ನಿಷೇಧದ ಕುರಿತ ಒಪ್ಪಂದದ ಅಡಿಯಲ್ಲಿ ಒಳಗೊಂಡಿರುವ ಪರಮಾಣು ಸ್ಥಾಪನೆಗಳು ಮತ್ತು ಸೌಲಭ್ಯಗಳ ಪಟ್ಟಿಯನ್ನು ವಿನಿಮಯ ಮಾಡಿಕೊಂಡವು ಎಂದು MEA ತಿಳಿಸಿದೆ.

ಸ್ವಿಡ್ಜರ್‌ಲ್ಯಾಂಡ್‌ನ ಕ್ರಾನ್ಸ್–ಮಾಂಟಾನಾ ಸ್ಕೀ ರೆಸಾರ್ಟ್‌ನಲ್ಲಿ ಸ್ಫೋಟ: 40 ಮಂದಿ ಸಾವು



ಕ್ರಾನ್ಸ್ ಮೊಂಟಾನಾ: ಸ್ವಿಟ್ಜರ್‌ಲ್ಯಾಂಡ್‌ನ ಐಷಾರಾಮಿ ಆಲ್ಪೈನ್ ಸ್ಕೀ ರೆಸಾರ್ಟ್ ಪಟ್ಟಣವಾದ ಕ್ರಾನ್ಸ್ ಮೊಂಟಾನಾದ ಬಾರ್‌ವೊಂದರಲ್ಲಿ ಭಾರೀ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ಕನಿಷ್ಠ 40 ಮಂದಿ ಸಾವು ಸಂಭವಿಸಿರುವ ಸಾಧ್ಯತೆಗಳಿವೆ ಎಂದು ತಿಳಿದುಬಂದಿದೆ. ಹೊಸ ವರ್ಷದ ಸಂಭ್ರಮದ ಹಿನ್ನೆಲೆಯಲ್ಲಿ ಪ್ರವಾಸಿಗರಿಂದ ಕಿಕ್ಕಿರಿದಿದ್ದ 'ಲೆ ಕಾನ್ಸ್ಟೆಲೇಷನ್' ಬಾರ್‌ನಲ್ಲಿ ಬೆಳಗಿನ ಜಾವ ಸುಮಾರು 1.30ರ ವೇಳೆಗೆ ಸ್ಫೋಟ ಸಂಭವಿಸಿದೆ. ನೈಋತ್ಯ ಸ್ವಿಟ್ಜರ್‌ಲ್ಯಾಂಡ್‌ನ ವಾಲಿಸ್ ಕ್ಯಾಂಟನ್‌ನ ಪೊಲೀಸ್ ವಕ್ತಾರ ಗೇಟನ್ ಲಾಥಿಯನ್ ಈ ಕುರಿತು ಪ್ರತಿಕ್ರಿಯಿಸಿ, ಘಟನೆಯಲ್ಲಿ ಹಲವರು ಗಾಯಗೊಂಡಿದ್ದು, 40ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕದಳ, ಆಂಬ್ಯುಲೆನ್ಸ್‌ಗಳು ಹಾಗೂ ಇತರೆ ತುರ್ತು ಸೇವೆಗಳು ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿವೆ. ಸ್ಥಳೀಯ ಮಾಧ್ಯಮಗಳು ಪ್ರಕಟಿಸಿದ ಚಿತ್ರಗಳಲ್ಲಿ ಸ್ಫೋಟ ಸಂಭವಿಸಿದ ಕಟ್ಟಡ ಬೆಂಕಿಗಾಹುತಿಯಾಗಿರುವುದು ಕಂಡುಬಂದಿದೆ. ಸ್ಫೋಟದ ಕಾರಣ ಮತ್ತು ಹಿನ್ನೆಲೆ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಸಾವು–ನೋವಿನ ಪ್ರಮಾಣ ಇನ್ನೂ ಖಚಿತವಾಗಿಲ್ಲ.

ರಾಜಸ್ಥಾನ ಗಡಿಯಲ್ಲಿ ಪಾಕಿಸ್ತಾನಿ ನುಸುಳುಕೋರನ ಬಂಧನ



ಜೈಸಲ್ಮೇರ್: ರಾಜಸ್ಥಾನದ ಜೈಸಲ್ಮೇರ್ ಜಿಲ್ಲೆಯ ಗಡಿಯ ಮೂಲಕ ಭಾರತಕ್ಕೆ ನುಸುಳಿದ್ದ ಪಾಕಿಸ್ತಾನಿ ಪ್ರಜೆಯನ್ನು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಗುರುವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಾಚ್ನಾ ಮತ್ತು ನೋಖ್ ಸೆಕ್ಟರ್‌ಗಳಿಗೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಈ ಒಳ ನುಸುಳುಕೋರನನ್ನು ಬಂಧಿಸಲಾಗಿದೆ ಎಂದು ಹೇಳಿದ್ದಾರೆ. ಪ್ರಾಥಮಿಕ ವಿಚಾರಣೆಯಲ್ಲಿ ನುಸುಳುಕೋರ ಮಾನಸಿಕವಾಗಿ ಅಸ್ವಸ್ಥನಾಗಿದ್ದಾನೆ. ಆದಾಗ್ಯೂ ಜಂಟಿ ವಿಚಾರಣಾ ಕೇಂದ್ರ(ಜೆಐಸಿ) ವಿವರವಾದ ವೈದ್ಯಕೀಯ ಪರೀಕ್ಷೆ ಮತ್ತು ವಿಚಾರಣೆಯ ನಂತರ ಆತನ ನಿಖರವಾದ ಸ್ಥಿತಿ ಮತ್ತು ಹಿನ್ನೆಲೆಯನ್ನು ದೃಢೀಕರಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಾಥಮಿಕ ವಿಚಾರಣೆ ವೇಳೆ ಆ ವ್ಯಕ್ತಿ ತನ್ನನ್ನು ತಾನು ರಾಣಾ ಮೊಹಮ್ಮದ್ ಅಸ್ಲಾಂ ಅವರ ಪುತ್ರ ಮತ್ತು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಸರ್ಗೋಧಾ ಜಿಲ್ಲೆಯ ನಿವಾಸಿ ಇಶ್ರತ್(35) ಎಂದು ಹೇಳಿಕೊಂಡಿದ್ದಾನೆ. ಆತನ ಬಳಿ ಪಾಕಿಸ್ತಾನಿ ಕರೆನ್ಸಿ ನೋಟುಗಳು, ಚಾಕು, ಇತರ ಕೆಲವು ವಸ್ತುಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಿಲ್ಲದ ದಾಳಿ: 50 ವರ್ಷದ ವ್ಯಕ್ತಿ 'ಸಜೀವ ದಹನ' ಯತ್ನ!



ಢಾಕಾ: ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದಾಳಿ ಮುಂದುವರೆದಿದೆ. ಉದ್ರಿಕ್ತ ಗುಂಪೊಂದು ಮತ್ತೊಬ್ಬ ಹಿಂದೂ ವ್ಯಕ್ತಿ ಮೇಲೆ ಹಲ್ಲೆ ನಡೆಸಿದೆ.

50 ವರ್ಷದ ಖೋಕೊನ್ ದಾಸ್ ಮೇಲೆ ಹಲ್ಲೆ ನಡೆಸಿದ ನಂತರ ಅವರಿಗೆ ಬೆಂಕಿ ಹಚ್ಚಿ ಸಜೀವವಾಗಿ ಸುಟ್ಟು ಹಾಕಲು ಯತ್ನಿಸಲಾಗಿದೆ. ಇದರಿಂದ ಗಂಭೀರವಾಗಿ ಗಾಯಗೊಂಡು ಸಾವು–ಬದುಕಿನ ನಡುವೆ ಹೋರಾಡುತ್ತಿದ್ದಾರೆ. ದೇಶದ ಶರಿಯತ್‌ಪುರ ಜಿಲ್ಲೆಯಲ್ಲಿ ಡಿ.31ರಂದು ಈ ಘಟನೆ ನಡೆದಿದೆ. ಖೋಕೊನ್ ದಾಸ್ ಮನೆಗೆ ಹೋಗುತ್ತಿದ್ದಾಗ ಅವರನ್ನು ಅಡ್ಡಗಟ್ಟಿದ ಗುಂಪೊಂದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದು, ಬೆಂಕಿ ಹಚ್ಚುವ ಮೂಲಕ ಸಜೀವವಾಗಿ ಸುಟ್ಟುಹಾಕಲು ಯತ್ನಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ. 2 ವಾರಗಳಲ್ಲಿ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆದ ನಾಲ್ಕನೇ ದಾಳಿ ಇದಾಗಿದೆ. ಈ ಹಿಂದೆ ಡಿಸೆಂಬರ್ 24ರಂದು ಬಾಂಗ್ಲಾದೇಶದ ಕಲಿಮೊಹರ್ ಯೂನಿಯನ್‌ನ ಹೊಸೈನ್‌ದಂಗ ಪ್ರದೇಶದಲ್ಲಿ 29 ವರ್ಷದ ಅಮೃತ್ ಮೊಂಡಲ್ ಎನ್ನಲಾದ ಯುವಕನ ಹತ್ಯೆಯಾಗಿತ್ತು.

ಭಯೋತ್ಪಾದಕನ ಆಸ್ತಿ ಮುಟ್ಟುಗೋಲು



ಪೂಂಛ್/ಜಮ್ಮು: ಜಮ್ಮು–ಕಾಶ್ಮೀರದ ಪೂಂಛ್ ಜಿಲ್ಲೆಯ ಮೆಂಧರ್‌ನಲ್ಲಿ, ಭಯೋತ್ಪಾದಕನಿಗೆ ಸೇರಿದ್ದ ಸ್ಥಿರಾಸ್ತಿಯನ್ನು ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ (ಯುಎಪಿಎ) ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು. ಮೆಂಧರ್ ಪೊಲೀಸರು ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ಜಂಟಿ ತಂಡವು, ನಕ್ಕಾ ಮಜ್ಹರಿ ಪ್ರದೇಶದಲ್ಲಿ ರುವ ಕೃಷಿ ಜಮೀನನ್ನು ವಶಪಡಿಸಿಕೊಂಡಿದೆ. ಆಸ್ತಿಯ ಮಾರುಕಟ್ಟೆ ಮೌಲ್ಯ 10 ಲಕ್ಷ ಎಂದು ಅಂದಾಜಿಸಲಾಗಿದೆ. ಇವು ಇಲ್ಲಿನ ನಿವಾಸಿ ರಫೀಕ್ ನಾಯ್ ಅಲಿಯಾಸ್ ಸುಲ್ತಾನ್‌ಗೆ ಸೇರಿದ ಆಸ್ತಿಯಾಗಿದೆ. ಇದೀಗ ಈತ ಪಾಕಿಸ್ತಾನದಲ್ಲಿದ್ದು, ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿದ್ದಾನೆ. 9 ಕ್ರಿಮಿನಲ್ ಪ್ರಕರಣಗಳಲ್ಲಿ ಬೇಕಾಗಿರುವ ಈತನನ್ನು ಭಯೋತ್ಪಾದಕ ಎಂದು ಘೋಷಿಸಲಾಗಿದೆ. ರಫೀಕ್, ನಿಷೇಧಿತ ಭಯೋತ್ಪಾದನಾ ಸಂಘಟನೆ ತಹ್ರೀಕ್‌ಉಲ್‌ಮುಜಾಹಿದ್ದೀನ್ ಮತ್ತು ಜಮ್ಮು ಕಾಶ್ಮೀರ ಘಜ್ನವಿ ಪಡೆಯ ಹ್ಯಾಂಡ್ಲರ್ ಹಾಗೂ ಲಾಂಚ್ ಕಮಾಂಡರ್ ಆಗಿದ್ದಾನೆ. ಪೂಂಛ್ ಮತ್ತು ರಜೌರಿ ಪ್ರಾಂತ್ಯಗಳಲ್ಲಿ ಶಸ್ತ್ರಾಸ್ತ್ರ ಮತ್ತು ಮಾದಕ ವಸ್ತು ಕಳ್ಳಸಾಗಣೆ, ಒಳನುಸುಳುವಿಕೆ ಹಾಗೂ ಭಯೋತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿದ್ದಾನೆ ಎಂಬುದು ತನಿಖೆಯಲ್ಲಿ ಪತ್ತೆಯಾಗಿದೆ.

ಹೊಸ ವರ್ಷದ ಮೊದಲ ದಿನವೇ ಕಾಡಾನೆ ದಾಳಿಗೆ ಕೃಷಿ ಕಾರ್ಮಿಕ ಬಲಿ

● ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರ ಆಕ್ರೋಶ ● ಆನೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಲು ಆಗ್ರಹ



ಪೊನ್ನಪ್ಪ

ಮಡಿಕೇರಿ, ಜ.1– ಕಾಡಾನೆ ದಾಳಿಗೆ ಸಿಲುಕಿ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಸೋಮವಾರಪೇಟೆ ತಾಲೂಕು ಶನಿವಾರಸಂತೆ ಹೋಬಳಿಯ ಗಣಗೂರು ಗ್ರಾಪಂ ವ್ಯಾಪ್ತಿಯ ಸಂಗಯ್ಯಪುರ ಗ್ರಾಮದಲ್ಲಿ ನಡೆದಿದೆ.

ಸಂಗಯ್ಯಪುರ ಗ್ರಾಮದ ನಿವಾಸಿ ಕೃಷಿ ಕಾರ್ಮಿಕ ಪೊನ್ನಪ್ಪ(62) ಮೃತ ದುರ್ದೈವಿ. ಘಟನೆ ಕುರಿತು ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೊಸ ವರ್ಷದ ಮೊದಲ ದಿನವೇ ಕಾಡಾನೆ–ಮಾನವ ಸಂಘರ್ಷಕ್ಕೆ ಜೀವ ಬಲಿಯಾದ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಆತಂಕ ಮೂಡಿದೆ.

ಬುಧವಾರ ಬೆಳಗಿನ ಜಾವ ಪೊನ್ನಪ್ಪ ಅವರು ಮನೆಯ ಮುಂಭಾಗದಲ್ಲಿರುವ ಜಮೀನಿಗೆ ಕೆಲಸಕ್ಕೆಂದು ತೆರಳಿದ್ದಾಗ ಮೊದಲಿಗೆ ಸಾಕು ನಾಯಿಯ ಮೇಲೆ ಕಾಡಾನೆ ದಾಳಿ ನಡೆಸಿ ಬಳಿಕ ಏಕಾಏಕಿ ಪೊನ್ನಪ್ಪ ಅವರ ಮೇಲೆ ದಾಳಿ ಮಾಡಿದೆ. ತೀವ್ರ ಸ್ವರೂಪದ ಗಾಯಗಳಿಂದ ಪೊನ್ನಪ್ಪ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಕಾಡಾನೆ ದಾಳಿಯಿಂದ ವ್ಯಕ್ತಿ ಮೃತಪಟ್ಟ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ದಾಳಿ ನಡೆಸಿದ ಕಾಡಾನೆಯನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಬೇಕು. ಈ ಭಾಗದ ಸೋಲಾರ್ ಬೇಲಿ, ಆನೆ ಕಂದಕಗಳ ದುರಸ್ಥಿಗೆ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಗ್ರಾಮ ವ್ಯಾಪ್ತಿಯಲ್ಲಿ ಉಪಟಳ ನೀಡುತ್ತಿರುವ ಕಾಡಾನೆಗಳ ಹಾವಳಿ ನಿಯಂತ್ರಿಸಲು ವೈಜ್ಞಾನಿಕವಾದ ಶಾಶ್ವತ ಪರಿಹಾರ ಸೂಚಿಸಬೇಕು. ಮೃತ ಪೊನ್ನಪ್ಪ ಬಡ ಕುಟುಂಬದವರಾಗಿದ್ದು ತಕ್ಷಣವೇ ಸೂಕ್ತ ಪರಿಹಾರ ನೀಡುವಂತೆ ಸ್ಥಳಕ್ಕೆ ಆಗಮಿಸಿದ್ದ ಎಸಿಎಫ್ ಗೋಪಾಲ್ ಅವರನ್ನು ಗ್ರಾಮಸ್ಥರು ಆಗ್ರಹಿಸಿದರು.


ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಆಕ್ರೋಶ ವ್ಯಕ್ತಪಡಿಸುತ್ತಿರುವ ಗ್ರಾಮಸ್ಥರು.

ಈ ಸಂದರ್ಭ ಗ್ರಾಮಸ್ಥರ ಅಹವಾಲು ಆಲಿಸಿ ಮಾತನಾಡಿದ ಅರಣ್ಯ ಅಧಿಕಾರಿ ಗೋಪಾಲ್, ಆನೆ ಕಂದಕ ಮತ್ತು ಸೋಲಾರ್ ಬೇಲಿ ಸಮರ್ಪಕ ನಿರ್ವಹಣೆಗೆ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಆಕಸ್ಮಿಕವಾಗಿ ಈ ದುರಂತ ನಡೆದ ಬಗ್ಗೆ ವಿಷಾಧಿಸಿದ ಆರ್‌ಎಫ್‌ಓ ಗೋಪಾಲ್, ಕಾಡಾನೆಗಳನ್ನು ಕಾಡುಗಟ್ಟುವ ಕಾರ್ಯಾಚರಣೆ ನಿರಂತರವಾಗಿ ನಡೆಯಲಿದೆ. ಮೃತ ಪೊನ್ನಪ್ಪ ಅವರ ಕುಟುಂಬಕ್ಕೆ ಇಲಾಖೆ ಮೂಲಕ ಸೂಕ್ತ ಪರಿಹಾರ ನೀಡಲಾಗುತ್ತದೆ ಎಂದು ಭರವಸೆ ನೀಡಿದರು. ಕಾಡಾನೆ ಸಂಚರಿಸುವ ಕಡೆಗಳಲ್ಲಿ ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು ಎಂದು ಮನವಿ ಮಾಡಿದರು. ಸ್ಥಳದಲ್ಲಿ ಆರ್‌ಎಫ್‌ಓ ಶೈಲೇಂದ್ರ, ಡಿಆರ್‌ಎಫ್‌ಓ ಶ್ರವಣಕುಮಾರ್, ಸಿಬ್ಬಂದಿಗಳಾದ ಈರಣ್ಣ, ವೆಂಕಟೇಶ್, ಪ್ರವೀಣ್ ಕುಮಾರ್, ರಂಜಿತ್, ವೇದಮೂರ್ತಿ ಇದ್ದರು.

ಅಪಘಾತದ ಸ್ಥಿತಿಯಲ್ಲಿ ಕಾರು; ಚಾಲಕ ಅನುಮಾನಾಸ್ಪದ ಸಾವು

ಇದೊಂದು ವ್ಯವಸ್ಥಿತ ಕೊಲೆ ಎಂದು ಕುಟುಂಬದವರಿಂದ ದೂರು


ಮೃತ ವ್ಯಕ್ತಿ ನವಾಜ್.


ಮೃತನ ಮೈಮೇಲೆ ಹಲ್ಲೆ ನಡೆದಿರುವ ಗಾಯದ ಗುರುತು.


ಅಪಘಾತದ ಸ್ಥಿತಿಯಲ್ಲಿರುವ ಕಾರು

ಮಡಿಕೇರಿ, ಜ.1– ರಸ್ತೆ ಬದಿಯಲ್ಲಿ ಅಪಘಾತವಾದ ಸ್ಥಿತಿಯಲ್ಲಿದ್ದ ಕಾರಿನಲ್ಲಿ ವ್ಯಕ್ತಿಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ವ್ಯವಸ್ಥಿತ ಕೊಲೆ ಶಂಕೆ ವ್ಯಕ್ತವಾಗಿದೆ.

ಪೊನ್ನಂಪೇಟೆ ತಾಲೂಕಿನ ಹಾತೂರು ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಗೋಣಿಕೊಪ್ಪಲು ಗ್ರಾಮದ ಹರಿಶ್ಚಂದ್ರ ಪುರ ನಿವಾಸಿ ನವಾಜ್(36) ಎಂಬಾತ ಮೃತಪಟ್ಟ ವ್ಯಕ್ತಿ.

ನವಾಜ್ ಗೋಣಿಕೊಪ್ಪದ ಖಾಸಗಿ ಲಾರಿ ಟ್ರಾನ್ಸ್ ಪೋರ್ಟ್ ಸಂಸ್ಥೆಯಲ್ಲಿ ಚಾಲಕನಾಗಿದ್ದು, ಬುಧವಾರ ರಾತ್ರಿ ನವಾಜ್ ಮೊಬೈಲ್‌ಗೆ ಕರೆಯೊಂದು ಬಂದಿತ್ತು ಎನ್ನಲಾಗಿದೆ. ಅದರಂತೆ ನವಾಜ್ ಕಾರಿನಲ್ಲಿ (ಕೆಎ.04–ಪಿ.5694) ಹಾತೂರು ಕಡೆಗೆ ತೆರಳಿದ್ದರು. ಮಧ್ಯರಾತ್ರಿ 2 ಗಂಟೆಯ ವೇಳೆಗೆ ಬೇರೊಬ್ಬ ಆಟೋ ಚಾಲಕ ಗೋಣಿಕೊಪ್ಪ ರಸ್ತೆಯಲ್ಲಿರುವ ನವಾಜ್ ಅವರ ಸಹೋದರ ಅಶ್ರಫ್ ಎಂಬವರ ಮನೆಗೆ ಆಗಮಿಸಿ ನವಾಜ್ ಅವರ ಕಾರು ರಸ್ತೆಯಲ್ಲಿ ಬಿದ್ದಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಿರುವುದಾಗಿ ಮಾಹಿತಿ ನೀಡಿದ್ದಾರೆ. ಅಶ್ರಫ್ ಆಸ್ಪತ್ರೆಗೆ ತೆರಳಿದಾಗ ನವಾಜ್ ಮೃತಪಟ್ಟಿರುವುದು ಕಂಡು ಬಂದಿದೆ.

ದೇಹವನ್ನು ಪರಿಶೀಲನೆ ನಡೆಸಿದ ಸಂದರ್ಭ ಬೆನ್ನು ಮತ್ತು ಇತರ ಭಾಗಗಳಲ್ಲಿ ದೊಣ್ಣೆ ಮತ್ತಿತರ ವಸ್ತುಗಳಿಂದ ತೀವ್ರ ಹಲ್ಲೆ ನಡೆಸಿರುವ ಗುರುತುಗಳು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಮೃತರ ಕುಟುಂಬಸ್ಥರು ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಕೊಲೆ ಶಂಕೆ ವ್ಯಕ್ತಪಡಿಸಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಗೋಣಿಕೊಪ್ಪ ಪೊಲೀಸರು ಘಟನೆಯ ಹಿಂದಿನ ಸತ್ಯಾಸತ್ಯೆಯ ಪತ್ತೆಗಾಗಿ ಕ್ರಮ ಕೈಗೊಂಡಿದ್ದಾರೆ. ಹಾತೂರು ರಸ್ತೆಯ ಕಟ್ಟಡಗಳು ಮತ್ತು ಘಟನೆ ನಡೆದ ಸ್ಥಳದಲ್ಲಿರುವ ಕಾಫಿ ಕ್ಯೂರಿಂಗ್ ವರ್ಕ್ಸ್ ಒಂದರ ಸಿ.ಸಿ.ಕ್ಯಾಮರಾಗಳ ದೃಶ್ಯಗಳು, ಕಾರು ಮಗುಚಿ ಬಿದ್ದಿದ್ದ ಸ್ಥಳ, ಮೊಬೈಲ್ ಸಂಖ್ಯೆಗಳ ಮಾಹಿತಿ ಸೇರಿದಂತೆ ವಿವಿಧ ಆಯಾಮಗಳನ್ನು ಆಧರಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ನವಾಜ್ ಸಾವಿನ ಕುರಿತು ಶಂಕೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ವೈದ್ಯರು ಮತ್ತು ಎಫ್‌ಎಸ್‌ಎಲ್ ತಜ್ಞರು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಘಟನೆ ಕುರಿತು ಸೂಕ್ತ ತನಿಖೆ ನಡೆಸಬೇಕು. ಆರೋಪಿಗಳ ಪತ್ತೆಗೆ ಪೊಲೀಸರು ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಮೃತ ನವಾಜ್‌ನ ಕುಟುಂಬಸ್ಥರು ಆಗ್ರಹಿಸಿದ್ದಾರೆ.

ಕೊಡಗು ಜಿಲ್ಲೆಯಾದ್ಯಂತ ವರ್ಷವಿಡೀ 'ನುಡಿ, ನಡೆ, ಯುವ ಜನರ ಕಡೆ' ಉತ್ಸವ

ವಿರಾಜಪೇಟೆ, ಜ.1– ಕೊಡಗಿನಲ್ಲಿ ಸುದೀರ್ಘವಾಗಿ ಒಂದು ವರ್ಷದ ಅವಧಿಗೆ 2025 ನವೆಂಬರ್‌ನಿಂದ 2026 ನವೆಂಬರ್‌ವರೆಗೆ ನಾಲ್ಕು ಸಾರ್ವಜನಿಕ ಕಾರ್ಯಕ್ರಮ ಹಾಗೂ 15 ಪದವಿ ಕಾಲೇಜುಗಳಲ್ಲಿ ನುಡಿ ಉತ್ಸವ ಕಾರ್ಯಕ್ರಮ ಜರುಗಲಿದೆ ಎಂದು ಕೊಡಗು ಜಿಲ್ಲಾ ನುಡಿ ಉತ್ಸವ ಸಮಿತಿ ಅಧ್ಯಕ್ಷ ಅರ್ಜುನ್ ಮೌರ್ಯ ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ನುಡಿ, ನಡೆ, ಯುವ ಜನರ ಕಡೆ ಎಂಬ ಧ್ಯೇಯ ವಾಕ್ಯದೊಂದಿಗೆ ನುಡಿ ಗೀತಗಾಯನ, ನುಡಿ ಸಾಹಿತ್ಯ ಲಹರಿ, ನುಡಿ ನೃತ್ಯ ಸಂಭ್ರಮ, ನುಡಿ ಸಂಸ್ಕೃತಿಗಳಂತಹ ಸ್ಪರ್ಧೆಗಳೊಂದಿಗೆ ಪದವಿ ಹಂತದ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಇದರ ಮುಖ್ಯ ಉದ್ದೇಶ ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ಕುಂಠಿತವಾಗುತ್ತಿರುವ ಭಾಷೆಯ ಬಳಕೆ, ಭಾಷಾಭಿಮಾನ, ಸಾಹಿತ್ಯ ಅಭಿಮಾನಗಳನ್ನು ಯುವ ಜನರಲ್ಲಿ ಬೆಳೆಸುವುದರೊಂದಿಗೆ ಶ್ರೀಮಂತವಾದ ಕನ್ನಡ ನಾಡು ನುಡಿ, ಸಂಸ್ಕೃತಿ ಸಾಹಿತ್ಯ, ಪರಂಪರೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿ ಸುವುದಾಗಿದೆ ಎಂದರು.

ಈಗಾಗಲೇ ಲಾಂಛನವನ್ನು ಸೆಂಟ್ ಆನ್ಸ್ ಪದವಿ ಕಾಲೇಜಿನಲ್ಲಿ ಮಾಡಲಾಗಿದ್ದು ತದನಂತರ ನುಡಿ ಗೀತ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿದೆ, ವಿರಾಜಪೇಟೆ ಸರಕಾರಿ ಪದವಿ ಕಾಲೇಜಿನಲ್ಲಿ ಉಪನ್ಯಾಸವನ್ನು ಆಯೋಜಿಸಿರುತ್ತೇವೆ ಎಂದು ಹೇಳಿದರು.


ನುಡಿ ಉತ್ಸವ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ.

ಪದವಿ, ಸ್ನಾತಕೋತ್ತರ ಪದವಿ ಹಾಗೂ ತತ್ಸಮಾನ ವಿದ್ಯಾರ್ಥಿಗಳಿಗೆ ಮಾರ್ಚ್ ಕೊನೆಯ ವಾರದಲ್ಲಿ ಅಂತರ ಕಾಲೇಜು ನೃತ್ಯ ಸ್ಪರ್ಧೆ, ನುಡಿ ನೃತ್ಯ ಸಂಭ್ರಮವನ್ನು ಏರ್ಪಡಿಸಲಾಗುವುದು ಎಂದ ಅವರು ಪ್ರಥಮ 25,000 ರೂ, ದ್ವಿತೀಯ 15,000 ರೂ ನಗದನ್ನು ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಕನ್ನಡದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು ಎಂದು ಹೇಳಿದರು.

ನುಡಿ ಉತ್ಸವ ಸಮಿತಿ ಹಾಗೂ ಜಿಲ್ಲಾ ದಸಾಪದ ಕಾರ್ಯದರ್ಶಿ ಲಿಖಿತ್ ರೈ ಮಾತನಾಡಿದರು. ಈ ಸಂದರ್ಭ ನುಡಿ ಉತ್ಸವ ಸಮಿತಿಯ ಸಂಚಾಲಕರಾದ ಅಬ್ದುಲ್ ರೆಹಮಾನ್ ಉಪಸ್ಥಿತರಿದ್ದರು.

ಕೊಡಗು ಜಿಲ್ಲೆಯ ಕೆಲವೆಡೆ ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಜ.1– 66/11 ಕೆ.ವಿ ಶನಿವಾರಸಂತೆ ವಿದ್ಯುತ್ ವಿತರಣಾ ಉಪ ಕೇಂದ್ರದಿಂದ ಹೊರಹೊಮ್ಮುವ ಶನಿವಾರಸಂತೆ ಟೌನ್ ಫೀಡರ್‌ನಲ್ಲಿ ಕೊಡಗು ವಿದ್ಯುತ್ ಜಾಲದ ಬಲವರ್ಧನೆಯ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದರಿಂದ ಜ.2 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಶನಿವಾರಸಂತೆ ಪಟ್ಟಣ, ಗುಡುಗಳಲೆ, ಕೆ.ಆರ್.ಸಿ ಸರ್ಕಲ್, ಅಡ್ಡಶೆಟ್ಟಳ್ಳಿ, ಶೆಟ್ಟಿಗನಹಳ್ಳಿ, ಮಾದ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಇದೇ ರೀತಿ ನಾಪೋಕ್ಲು ಎಫ್5 ಹೊದ್ದೂರು ಹಾಗೂ ಪಾರಾಣೆ ಫೀಡರ್‌ಗಳಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿದ್ದು ಜ.2 ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಹೊದ್ದೂರು, ಪಾಲೂರು, ನಾಪೋಕ್ಲು, ಕುಂಜಿಲ, ಎಮ್ಮೆಮಾಡು, ಬಲ್ಲಮಾವಟಿ, ನರಿಯಂದಡ, ಪಾರಾಣೆ, ಬಲಮುರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಬಾಕ್ಸಿಂಗ್‌ನಲ್ಲಿ ಪದಕ ಪಡೆದ ಕೊಡಗಿನ ಬಾಲಕ, ಬಾಲಕಿಯರು

ಮಡಿಕೇರಿ, ಜ.1– ಮಹಾರಾಷ್ಟ್ರದಲ್ಲಿ ನಡೆದ 6ನೇ ವರ್ಷದ ರಾಷ್ಟ್ರೀಯ ಮಿಕ್ಸ್ ಬಾಕ್ಸಿಂಗ್ ಚಾಂಪಿಯನ್ ಶಿಪ್‌ನಲ್ಲಿ ಕೊಡಗಿನ 6 ಬಾಲಕರು ಹಾಗೂ ನಾಲ್ವರು ಬಾಲಕಿಯರು ಭಾಗವಹಿಸಿ ಪದಕ ಗೆದ್ದಿದ್ದಾರೆ.

ಮನ್ವಿತ್ ಮೋಹನ್, ಕೌಶಿಕ್ ಕುಮಾರ್ ಐ.ಸಿ ಹಾಗೂ ಹಷೀಸ್ ಚಿನ್ನದ ಪದಕ ಗೆದ್ದುಕೊಂಡರು. ಯಾಸಿನ್.ವಿ, ವಿಕ್ತ ಚೋಂದಮ್ಮ ಬೆಳ್ಳಿ ಪದಕ, ಶರಣಿ ಎ.ಶೆಟ್ಟಿ, ಸಾತ್ವಿಕ ಬಿ.ಎಸ್, ಸಾದ್ವಿ ಆನಂದ್, ವೇಣುಗೋಪಾಲ್ ಹಾಗೂ ಸಿಯಾನ್‌ಗೌಡ ಕಂಚಿನ ಪದಕ ಪಡೆದಿದ್ದಾರೆ. ಮಿಕ್ಸ್ ಬಾಕ್ಸಿಂಗ್ ಅಸೋಸಿಯೇಷನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಷ್ಟ್ರೀಯ ತರಬೇತುದಾರ ಎನ್.ಸಿ. ಸುದರ್ಶನ್ ಅವರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು.



ಎಸ್.ಸುನಿತಾಗೆ ಪಿಹೆಚ್.ಡಿ



ಮೈಸೂರು: ಸುನಿತಾ.ಎಸ್ ಅವರು ಡಾ.ಲ್ಯಾನ್ಸಿ ಡಿ.ಸೋಜಾ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ ಮನೋವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ವಿಠಲ ನಿಧನ



ನಾಪೋಕ್ಲು: ಕೋಪಟ್ಟಿ ಗ್ರಾಮದ ನಿವಾಸಿ ಪೊಡನೋಳನ ದಿವಂಗತ ಚಂಗಪ್ಪ ಅವರ ಮಗ ವಿಠಲ (65) ಮಂಗಳವಾರ ನಿಧನರಾದರು. ಭಾಗಮಂಡಲ ಪ್ರಗತಿಪರ ಜೇನು ಕೃಷಿಕರ ಸಂಘದ ನಿರ್ದೇಶಕರಾದ ಪೊಡನೋಳನ ವಿಠಲ ಅವರ ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದಲ್ಲಿ ನಡೆಯಿತು. ಮೃತರು ಪತ್ನಿ ಇಬ್ಬರು ಪುತ್ರಿಯರು ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ.

ಶಿಲ್ಪಕಲೆಗೆ ಜೀವ ತುಂಬಿದ ಅಮರಶಿಲ್ಪಿ ಜಕಣಾಚಾರಿ

ಶಾಸಕ ಸಿ.ಪುಟ್ಟರಂಗಶೆಟ್ಟಿ

ಚಾಮರಾಜನಗರ, ಜ.1– ಅಮರಶಿಲ್ಪಿ ಜಕಣಾಚಾರಿ ಅವರು ಅದ್ಭುತ ಕಲಾ ಪ್ರಕಾರಗಳ ಮೂಲಕ ಶಿಲ್ಪಕಲಾ ಸೌಂದರ್ಯಕ್ಕೆ ಜೀವ ತುಂಬಿದ್ದಾರೆ ಎಂದು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಅಧ್ಯಕ್ಷರೂ ಆದ ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಕಣಾಚಾರಿಯವರು ನಿರ್ಮಿಸಿದ ದೇವಾಲಯಗಳ ಶಿಲ್ಪಕಲಾ ಸೌಂದರ್ಯ ಜೀವಂತಿಕೆಯಿಂದ ಕೂಡಿದ್ದು, ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ. ಇದು ಸ್ಪರ್ಧಾತ್ಮಕ ಹಾಗೂ ತಂತ್ರಜ್ಞಾನ ಮುಂದುವರಿದಿರುವ ಯುಗವಾಗಿದ್ದು, ಯಾವುದೇ ಕೆಲಸ ಕಾರ್ಯಗಳು ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿವೆ. ಆದರೆ ಯಾವುದೇ ತಂತ್ರಜ್ಞಾನವಿಲ್ಲದ ಅಂದಿನ ಕಾಲದಲ್ಲಿ ಶಿಲ್ಪಕಲೆಯಲ್ಲಿ ಉತ್ತಮ ಕರಕುಶಲತೆ ಪ್ರದರ್ಶಿಸಿದ ಜಕಣಾಚಾರಿಯವರು ಇಂದಿಗೂ ಪ್ರಸ್ತುತ ಹಾಗೂ ಸ್ಮರಣೀಯರಾಗಿದ್ದಾರೆ ಎಂದರು.

ಹೊಯ್ಸಳರ ಕಾಲದಲ್ಲಿ ನಿರ್ಮಿಸಲಾದ ಬೇಲೂರು, ಹಳೆಬೀಡು ಹಾಗೂ ಸೋಮನಾಥಪುರದ ದೇವಾಲಯಗಳು ಅದ್ಭುತ ಶಿಲ್ಪಕಲೆಗಳನ್ನು ಹೊಂದಿದೆ. ಕರ್ನಾಟಕದ ಶಿಲ್ಪಕಲೆಗೆ ಅಪಾರ ಕೊಡುಗೆ ನೀಡಿದ ಅಮರಶಿಲ್ಪಿ ಜಕಣಾಚಾರಿ ಅವರ ಜಯಂತಿ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ನಡೆಯಬೇಕು. ವಿಶ್ವಕರ್ಮ ಸಮುದಾಯ ಸಂಘಟಿತರಾಗಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಸಮುದಾಯವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಮುಂಚೂಣಿಗೆ ಬರಬೇಕು ಎಂದರು.


ಅಮರಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಪುಷ್ಪಾರ್ಚನೆ ಮಾಡಿದರು.

ಕೊಳ್ಳೇಗಾಲದ ನಿವೃತ್ತ ಶಿಕ್ಷಕ ಪಿ.ಸಿದ್ದಪ್ಪಾಜಿ ಮಾತನಾಡಿ, ತುಮಕೂರು ಜಿಲ್ಲೆಯ ಕೈದಾಳ ಗ್ರಾಮದಲ್ಲಿ ಅಮರಶಿಲ್ಪಿ ಜಕಣಾಚಾರಿ ಜನಿಸಿದರು. ಅಮರಶಿಲ್ಪಿ ಜಕಣಾಚಾರಿಯವರು ನಿರ್ಮಿಸಿದ 93 ದೇವಾಲಯಗಳಲ್ಲಿ ಇಂದು ಸೋಮನಾಥಪುರ, ಬೇಲೂರು ಮತ್ತು ಹಳೆಬೀಡು ಮಾತ್ರ ಅಸ್ತಿತ್ವದಲ್ಲಿವೆ. ತಿ.ನರಸೀಪುರ ತಾಲೂಕಿನ ಸೋಮನಾಥಪುರ ದೇವಾಲಯವನ್ನು ಜಕಣಾಚಾರಿಯವರು 15 ವರ್ಷಗಳಲ್ಲಿ ನಿರ್ಮಿಸಿದರು ಎಂದರು.

ಜಕಣಾಚಾರಿ ನಿರ್ಮಿಸಿದ ದೇವಾಲಯಗಳ ಶಿಲ್ಪಕಲೆಯಲ್ಲಿ ಅತ್ಯದ್ಭುತ ಕೆತ್ತನೆಗಳನ್ನು ಕಾಣಬಹುದಾಗಿದೆ. ಅದೇ ಮಾದರಿ ಬೇಲೂರು, ಹಳೆಬೀಡು ದೇವಾಲಯಗಳಲ್ಲಿನ ಸುಂದರ ಕೆತ್ತನೆ ಇಂದಿಗೂ ಜನರ ಕಣ್ಮನ ಸೆಳೆಯುತ್ತಿವೆ. ಹೊಯ್ಸಳರ ರಾಜ ವಿಷ್ಣುವರ್ಧನನು ಜಕಣಾಚಾರಿಯವರ ಕಾಯಕ ಮೆಚ್ಚಿ ಅಮರಶಿಲ್ಪಿ ಎಂಬ ಬಿರುದು ನೀಡಿ ಗೌರವಿಸಿರುವುದು ಬಹಳ ವಿಶೇಷ ಎಂದರು.

> ಅಮರಶಿಲ್ಪಿ ಜಕಣಾಚಾರಿ ಅವರು 800 ವರ್ಷಗಳ ಹಿಂದೆಯೇ ಶಿಲ್ಪಕಲೆಯಲ್ಲಿ ಮಾಡಿದ ಸಾಧನೆ ಅವಿಸ್ಮರಣೀಯ. ಶಿಲ್ಪಕಲೆಯಲ್ಲಿ ಅವರು ಮಾಡಿದ ಸಾಧನೆ ಹಾಗೂ ವಿಶಿಷ್ಟ ಕಲಾ ಪ್ರಕಾರಗಳನ್ನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಬೇಕು.
>
> –ಮಹಮ್ಮದ್ ಅಸ್ಗರ್ ಮುನ್ನ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ.

ಕಾರ್ಯಕ್ರಮದಲ್ಲಿ ಕರಕುಶಲ ಕಲೆಗಳಲ್ಲಿ ಸಾಧನೆಗೈದ ಸಮುದಾಯದ 10 ಮಂದಿಯನ್ನು ಸನ್ಮಾನಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ಎಸ್.ರಾಜು, ವಿಶ್ವಕರ್ಮ ಸಮುದಾಯದ ಜಿಲ್ಲಾಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ಸುರೇಶ್, ಗೌರವಾಧ್ಯಕ್ಷ ಸೋಮಾಚಾರಿ, ವಿಶ್ವಕರ್ಮ ನಿಗಮ ಮಂಡಳಿ ನಾಮನಿರ್ದೇಶಿತ ಸದಸ್ಯರಾದ ಶ್ರೀನಿವಾಸ ಆಚಾರ್, ಕನ್ನಡ ಜಾಗೃತಿ ಸಮಿತಿಯ ಸದಸ್ಯೆ ಪದ್ಮಾ ಪುರುಷೋತ್ತಮ್, ಮುಖಂಡರಾದ ಲಿಂಗಣ್ಣಚಾರಿ, ಶ್ರೀನಿವಾಸಮೂರ್ತಿ ಇತರರಿದ್ದರು.

ಚಾ.ನಗರ ನೂತನ ಎಸ್ಪಿ ಅಧಿಕಾರ ಸ್ವೀಕಾರ

ಸೈಬರ್ ಕ್ರೈಂ ತಡೆಯಲು ಪರಿಣಾಮಕಾರಿ ಕ್ರಮ

ಚಾಮರಾಜನಗರ: ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಎಂ.ಮುತ್ತುರಾಜು ಗುರುವಾರ ಬೆಳಗ್ಗೆ ಎಸ್ಪಿ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡರು.


ನೂತನ ಎಸ್ಪಿ ಮುತ್ತುರಾಜ್ ಅವರನ್ನು ಎಎಸ್‌ಪಿ ಶಶಿಧರ್ ಸ್ವಾಗತಿಸಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ನೂತನ ಎಸ್ಪಿ ಮುತ್ತುರಾಜ್, ಇಂದು ನೂತನ ವರ್ಷಾಚರಣೆಯಂದು ಎಸ್ಪಿಯಾಗಿ ಅಧಿಕಾರ ಸ್ವೀಕರಿಸಿದ್ದೇನೆ. ಹಿಂದೆಯೂ ಚಾ.ನಗರದಲ್ಲಿ ಎಎಸ್‌ಪಿಯಾಗಿ ಕೆಲಸ ಮಾಡಿರುವ ಅನುಭವ ಇದೆ. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಶಿಸ್ತು ಕ್ರಮ ಕೈಗೊಳ್ಳುವ ಜೊತೆಗೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಮೂಲಕ ಜನರ ನೆಮ್ಮದಿ ಜೀವನಕ್ಕೆ ಅನುಗುಣವಾಗಿ ಪೂರಕ ಕ್ರಮಗಳನ್ನು ಕೈಗೊಳ್ಳುವುದು ನಮ್ಮ ಇಲಾಖೆಯ ಪ್ರಥಮ ಆದ್ಯತೆಯಾಗಿದೆ ಎಂದರು.

ಜಿಲ್ಲೆಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಬಲಿಷ್ಠಗೊಳಿಸುವುದು ಹಾಗೂ ಇತ್ತೀಚೆಗೆ ಸೈಬರ್ ಕ್ರೈಂ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮ ಜಾರಿಗೊಳಿಸಲಾಗುತ್ತದೆ. ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಪೊಲೀಸರಿಗೆ ಕೌಶಲ್ಯ, ನೈಪುಣ್ಯತೆಗೆ ಹೆಚ್ಚು ಒತ್ತು ನೀಡಲಾಗುತ್ತದೆ ಎಂದರು.

ಎಎಸ್ಪಿ ಶಶಿಧರ್, ಡಿವೈಎಸ್ಪಿಗಳಾದ ಸ್ನೇಹಾ ರಾಜ್, ಧರ್ಮೇಂದ್ರ, ಪವನ್ ಕುಮಾರ್, ಇನ್ಸ್‌ಪೆಕ್ಟರ್‌ಗಳಾದ ನವೀನ್, ಶೇಷಾದ್ರಿ ಇದ್ದರು.

ಜ.8ಕ್ಕೆ, ಗೋಲಕ ಹಣ ಎಣಿಕೆ

ಚಾಮರಾಜನಗರ: ಮಹದೇಶ್ವರಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯವನ್ನು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿ ವಿಶ್ರಾಂತಿ ಗೃಹದಲ್ಲಿ ಜ.8ರಂದು ಬೆಳಗ್ಗೆ ಸೂಕ್ತ ಪೊಲೀಸ್ ಬಂದೋಬಸ್ತ್‌ನಲ್ಲಿ ಕೊಳ್ಳೇಗಾಲ ಶಾಖೆ ಬ್ಯಾಂಕ್ ಆಫ್ ಬರೋಡಾ ಸಿಬ್ಬಂದಿ ಸಹಯೋಗದಲ್ಲಿ ನಡೆಸಲಾಗುವುದು ಎಂದು ಪ್ರಾಧಿಕಾರದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಮಾದರಿ ಹೆಣ್ಣು ಕರುಗಳ ಪ್ರದರ್ಶನಕ್ಕೆ ಚಾಲನೆ


ಕಾರ್ಯಕ್ರಮವನ್ನು ಶಾಸಕ ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ಗುಂಡ್ಲುಪೇಟೆ, ಜ.1(ಸೋಮ್.ಜಿ)– ಕರ್ನಾಟಕ ಹಾಲು ಮಹಾಮಂಡಲ ಬೆಂಗಳೂರು, ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟ, ಹಸಗೂಲಿ ಡೇರಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿವಿಧ ಮಾದರಿಯ ಹೆಣ್ಣು ಕರುಗಳ ಪ್ರದರ್ಶನವನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ನಂತರ ಮಾತನಾಡಿದ ಶಾಸಕರು, ಇಂತಹ ಕಾರ್ಯಕ್ರಮಗಳಿಂದಾಗಿ ಹೆಣ್ಣು ಕರುಗಳ ಪಾಲನೆ ಪೋಷಣೆಗೆ ಉತ್ತೇಜನ ನೀಡಿದಂತಾಗುತ್ತದೆ. ಅಲ್ಲದೇ ಒಕ್ಕೂಟದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದ ಅವರು ಚಾಮುಲ್‌ಗೆ ಸರ್ಕಾರದಿಂದ ಬಾಕಿ ಇರುವ 50 ಕೋಟಿ ರೂ.ಗಳನ್ನು ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿದ್ದು, ಈ ಬಗ್ಗೆ ಮತ್ತೊಮ್ಮೆ ಮನವಿ ಮಾಡುವುದಾಗಿ ತಿಳಿಸಿದರು.

ಚಾಮುಲ್ ಅಧ್ಯಕ್ಷ ಎಂ.ನಂಜುಂಡಸ್ವಾಮಿ ಮಾತನಾಡಿ, ಉತ್ಪಾದಕರು ರಾಸುಗಳು ನೀಡುವ ಹಾಲು ಅಷ್ಟೇ ಅಲ್ಲದೇ ಹೆಣ್ಣು ಕರುಗಳ ಸಾಕಾಣಿಯಿಂದಲೂ ಹೆಚ್ಚಿನ ಲಾಭ ಗಳಿಸಬಹುದು ಎಂದರು.

ಚಾಮುಲ್ ನಿರ್ದೇಶಕ ಎಂ.ಪಿ.ಸುನೀಲ್ ಮಾತನಾಡಿ, ಇಂತಹ ಕಾರ್ಯಕ್ರಮಗಳು ನಡೆಯುವುದರಿಂದ ಉತ್ಪಾದಕರಿಗೆ ಹಾಗೂ ಹೈನುಗಾರಿಕೆಗೆ ಉತ್ತೇಜನ ನೀಡಿದಂತಾಗುತ್ತದೆ ಎಂದರು.

ವ್ಯವಸ್ಥಾಪಕ ನಿರ್ದೇಶಕ ಕೆ.ರಾಜಕುಮಾರ್ ಮಾತನಾಡಿ, ಕರುಗಳಿಗೆ ಜನನದಿಂದ 20 ದಿನಗಳವರೆಗೆ ಅದರ ತೂಕದ ಒಂದು ಭಾಗದಷ್ಟು ಹಾಲು ನೀಡಿದ್ದಲ್ಲಿ ಅವುಗಳ ಬೆಳವಣಿಗೆ ಹಾಗೂ ಸರಿಯಾದ ಸಮಯಕ್ಕೆ ಫಲಕ್ಕೆ ಬರುತ್ತವೆ ಎಂದರು.

ಈ ವೇಳೆ ಸಹಕಾರ ಒಕ್ಕೂಟದ ಅಧ್ಯಕ್ಷ, ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡ ಪ್ರಸಾದ್, ಟಿಎಪಿಸಿಎಂಎಸ್ ಅಧ್ಯಕ್ಷ ಮಡಿವಾಳಪ್ಪ, ಸಂಘದ ಅಧ್ಯಕ್ಷ ನಾಗರಾಜಪ್ಪ, ಉಪಾಧ್ಯಕ್ಷ ನಿಂಗಪ್ಪ, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್. ಬಸವರಾಜು ತೀರ್ಪುಗಾರರಾದ ಡಾ.ಶರತ್, ಡಾ.ತೇಜಸ್, ವ್ಯವಸ್ಥಾಪಕ ಶರತ್ ಕುಮಾರ್, ಉಪವ್ಯವಸ್ಥಾಪಕ ಡಾ.ಅಮರ್, ಡಾ. ಮಂಜುನಾಥ್, ಡಾ.ನವೀನ್, ತಾಲೂಕು ಮೇಲ್ವಿಚಾರಕ, ಪ್ರಕಾಶ್ ಹೆಚ್, ಆಡಳಿತ ಮಂಡಳಿ ಸದಸ್ಯರಾದ ಬಸಪ್ಪಣ್ಣ, ಹೆಚ್.ಎಂ. ಮಹದೇವಪ್ಪ, ಗೌಡಿಕೆ ಉಮೇಶ್, ಬಸವರಾಜು, ಮಹದೇವಶೆಟ್ಟಿ, ದಾಕ್ಷಾಯಿಣಿ, ಬಸಮ್ಮಣಿ, ನಾಗಪ್ಪ, ಸಂಘದ ಸಿಇಓ ಮಹೇಶ್, ಕಾರ್ಯದರ್ಶಿ ನಾಗೇಶ್, ಮಹೇಂದ್ರ ಮುಖಂಡ ಅಶೋಕ್ ಇತರರಿದ್ದರು.

ಚಾ.ನಗರ ಜಿಲ್ಲಾದ್ಯಂತ 2026ಕ್ಕೆ ಸಂಭ್ರಮದ ಸ್ವಾಗತ

● ಪ್ರವಾಸಿ ತಾಣಗಳು, ಧಾರ್ಮಿಕ ಕ್ಷೇತ್ರಗಳಲ್ಲಿ ಜನಸಾಗರ
● ಕೇಕ್ ಕತ್ತರಿಸಿ, ಹೊಸ ಬಟ್ಟೆ ತೊಟ್ಟು ಸಂಭ್ರಮಿಸಿದ ಯುವಜನತೆ

ಚಾಮರಾಜನಗರ, ಜ.1– ಚಾಮರಾಜನಗರ ಜಿಲ್ಲಾದ್ಯಂತ ಸಾರ್ವಜನಿಕರು 2026ನೇ ನೂತನ ವರ್ಷವನ್ನು ಸಂಭ್ರಮ, ಸಡಗರದಿಂದ ಬರಮಾಡಿಕೊಂಡರು.

ಬುಧವಾರ ಮಧ್ಯರಾತ್ರಿ 12 ಗಂಟೆಯಾಗುತ್ತಿದ್ದಂತೆಯೇ ಜಿಲ್ಲೆಯ ಜನರು ಪರಸ್ಪರ ಹೊಸ ವರ್ಷದ ಶುಭಾಶಯ ವಿನಿಮಯ ಮಾಡಿಕೊಂಡರು. ವಿದ್ಯಾರ್ಥಿಗಳು ಮತ್ತು ಯುವಜನರು ತಮ್ಮ ಸ್ನೇಹಿತರಿಗೆ ಮತ್ತು ಆಪ್ತರಿಗೆ ಮೊಬೈಲ್‌ನಲ್ಲಿ ಮೆಸೇಜ್, ವಿಡಿಯೋ ಕಳುಹಿಸುವ ಮೂಲಕ ಶುಭಾಶಯ ಕೋರಿದರು.

ಇನ್ನೂ ಕೆಲವರು ಸಿಹಿ ಹಂಚಿ ಮತ್ತು ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರೆ, ಮಹಿಳೆಯರು ಮತ್ತು ಯುವತಿಯರು ಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ಹೊಸ ವರ್ಷವನ್ನು ಸ್ವಾಗತಿಸಿದರು.

ಹೊಸ ವರ್ಷದ ಮೊದಲ ದಿನವಾದ ಗುರುವಾರ ಬೆಳಗ್ಗೆಯಿಂದಲೇ ಜನರು ಹೊಸ ಬಟ್ಟೆ ತೊಟ್ಟು ಸಮೀಪದ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಇನ್ನೂ ಕೆಲವರು ಕುಟುಂಬ ಸಮೇತರಾಗಿ ಮಲೆ ಮಹದೇಶ್ವರಬೆಟ್ಟ, ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಕುರುಬನಕಟ್ಟೆ ಕ್ಷೇತ್ರ, ಶಿವನಸಮುದ್ರದ ಸಮೂಹ ದೇವಾಲಯಗಳಿಗೆ ತೆರಳಿ ದೇವರ ದರ್ಶನ ಪಡೆದರು.


ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಭಕ್ತರು ಸರತಿ ಸಾಲಿನಲ್ಲಿ ನಿಂತಿರುವುದು.

ಕ್ರೈಸ್ತ ಬಾಂಧವರು ಚರ್ಚ್‌ಗಳಲ್ಲಿ ಕೇಕ್ ಕತ್ತರಿಸುವ ಮೂಲಕ ಹೊಸ ವರ್ಷ ಆಚರಿಸಿ ಸಂಭ್ರಮಿಸಿದರು. ಯುವಜನರು ಜಿಲ್ಲೆಯ ಪ್ರವಾಸಿ ತಾಣಗಳಾದ ಶಿವನ ಸಮುದ್ರ, ಹೊಗೇನಕಲ್ ಫಾಲ್ಸ್ ಸೇರಿದಂತೆ ನಗರದ ಪ್ರಮುಖ ಹೋಟೆಲ್, ರೆಸಾರ್ಟ್, ಡಾಬಾಗಳಿಗೆ ತೆರಳಿ ಕುಣಿದು ಕುಪ್ಪಳಿಸಿ, ಕೇಕ್‌ಗಳನ್ನು ಕತ್ತರಿಸುವ ಮೂಲಕ ನೂತನ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಿದರು.

ಪಟ್ಟಣದ ಜನರು ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಗ್ರಾಮೀಣ ಜನರು ಯಡಪುರ ಸಮೀಪದ ಮಹದೇಶ್ವರಸ್ವಾಮಿ ದೇವಸ್ಥಾನ, ಹರದನಹಳ್ಳಿ ದಿವ್ಯಲಿಂಗೇಶ್ವರ, ಸಂತೇಮರಹಳ್ಳಿಯ ಮಹದೇಶ್ವರ ದೇವಾಲಯ, ಮಂಗಲ ಗ್ರಾಮದ ಶಂಕರೇಶ್ವರಸ್ವಾಮಿ ಬೆಟ್ಟ, ಕೂಡ್ಲೂರು ಗ್ರಾಮದ ಮಂಟೇಸ್ವಾಮಿ ದೇವಸ್ಥಾನ, ಕುದೇರು ಗ್ರಾಮದ ಮಲ್ಲಿಕಾರ್ಜುನ ಸ್ವಾಮಿ, ಚಂದಕವಾಡಿಯ ಲಕ್ಷ್ಮಿದೇವಿ ದೇಗುಲಗಳಿಗೆ ತೆರಳಿ ಪೂಜೆ ಸಲ್ಲಿಸಿದರು.

ಗುಂಡ್ಲುಪೇಟೆ: ಹೊಸ ವರ್ಷದ ಮೊದಲ ದಿನವಾದ ಗುರುವಾರ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಪಾರ್ವತಿ ಬೆಟ್ಟ, ಹುಲುಗಿನ ಮುರಡಿ ವೆಂಕಟರಮಣಸ್ವಾಮಿ ಬೆಟ್ಟ ಸೇರಿದಂತೆ ವಿವಿಧ ದೇವಸ್ಥಾನಗಳಿಗೆ ತೆರಳಿದ ಭಕ್ತರು ಪೂಜೆ ಸಲ್ಲಿಸುವುದರೊಂದಿಗೆ ನೂತನ ವರ್ಷವನ್ನು ಸ್ವಾಗತಿಸಿದರು.

ಮಾದಪ್ಪನ ಬೆಟ್ಟಕ್ಕೆ ಭಕ್ತರ ದಂಡು: ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಲಕ್ಷಾಂತರ ಭಕ್ತರು ತೆರಳಿ ಮಾದಪ್ಪನ ದರ್ಶನ ಪಡೆದು, ಪೂಜೆ ಸಲ್ಲಿಸಿದರು.

ನೂತನ ವರ್ಷದ ಮೊದಲ ದಿನ ಬೆಟ್ಟಕ್ಕೆ ಜಿಲ್ಲೆಯಿಂದ ಮಾತ್ರವಲ್ಲದೇ ರಾಜ್ಯದ ಮಂಡ್ಯ, ಮೈಸೂರು, ಬೆಂಗಳೂರು, ರಾಮನಗರ, ಚನ್ನಪಟ್ಟಣ ಸೇರಿದಂತೆ ವಿವಿಧ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಂದ ಲಕ್ಷಾಂತರ ಭಕ್ತರು ಬೆಟ್ಟಕ್ಕೆ ಆಗಮಿಸಿದ್ದರು.

■ ಸತ್ಯಮೂರ್ತಿ ತೋಳಹುಣಸೆ



'45' ಚಿತ್ರದಲ್ಲಿ ಹೊಸ ವರ್ಷಕ್ಕೆ ಆಫ್ರೋ ಟಪಾಂಗ್ ಹಾಡು ಮಜಾ



ಪ್ಯಾನ್ ಇಂಡಿಯಾ ಮಟ್ಟದಲ್ಲಿ ತಯಾರಾಗಿರುವ, ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್, ರಿಯಲ್ ಸ್ಟಾರ್ ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ನಟಿಸಿರುವ '45' ಚಿತ್ರ ಕಳೆದ ವಾರ ಕನ್ನಡ ಭಾಷೆಯಲ್ಲಿ ಮಾತ್ರವೇ ಬಿಡುಗಡೆಯಾಗಿತ್ತು. ಈ ಚಿತ್ರಕ್ಕೆ ಕರ್ನಾಟಕದಾದ್ಯಂತ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಇದೀಗ ಎರಡನೇ ವಾರಕ್ಕೆ ಕಾಲಿಟ್ಟಿರುವ '45' ಚಿತ್ರದಲ್ಲಿ ಪ್ರೇಕ್ಷಕರ ಒತ್ತಾಯದ ಮೇರೆಗೆ ವೈರಲ್ ಆಗಿದ್ದ ಪ್ರೊಮೋಷನಲ್ ಹಾಡನ್ನು ಹೊಸದಾಗಿ ಸೇರಿಸಲಾಗಿದೆ.

ಆಫ್ರಿಕಾದ ಜನಪ್ರಿಯ ಘುಟ್ಟೋ ಕಿಡ್ಸ್ ಸ್ಟೆಪ್‌ಹಾಕಿದ್ದ ಆಫ್ರೋ ಟಪಾಂಗ್ ಪ್ರಮೋಷನಲ್ ಹಾಡಿನಲ್ಲಿ ಚಿತ್ರದ ಮೂವರೂ ನಾಯಕರುಗಳು ಹೆಜ್ಜೆ ಹಾಕಿದ್ದರು. ನೃತ್ಯನಿರ್ದೇಶಕ ಜಾನಿ ಮಾಸ್ಟರ್ ಅವರ ಕೊರಿಯೋಗ್ರಫಿಯಲ್ಲಿ ಮೂಡಿಬಂದಿದ್ದ ಈ ಹಾಡು ಮಿಲಿಯನ್‌ಗಟ್ಟಲೆ ಹಿಟ್ಸ್ ದಾಖಲಿಸಿತ್ತು. ಇದೀಗ ಈ ಹಾಡನ್ನು ಚಿತ್ರಮಂದಿರಗಳಲ್ಲೂ ಸಹ ನೋಡಬಹುದಾಗಿದೆ.

ಅರ್ಜುನ್ ಜನ್ಯ ಅವರ ಪ್ರಥಮ ನಿರ್ದೇಶನದ 45 ಚಿತ್ರವನ್ನು ಬಿಗ್ ಬಜೆಟ್‌ನಲ್ಲಿ ನಿರ್ಮಿಸುವುದರ ಜತೆಗೆ ರಾಜ್ಯಾದ್ಯಂತ ದೊಡ್ಡ ಮಟ್ಟದಲ್ಲಿ ಕೆವಿಎನ್ ಪ್ರೊಡಕ್ಷನ್ಸ್ ಸಂಸ್ಥೆ ಬಿಡುಗಡೆ ಮಾಡಿತ್ತು. ಸೂರಜ್ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ರಮೇಶ್ ರೆಡ್ಡಿ ನಿರ್ಮಿಸಿರುವ '45' ಚಿತ್ರದ ಹಿಂದಿ, ತಮಿಳು, ತೆಲುಗು ಹಾಗೂ ಮಲಯಾಳಂ ಅವತರಣಿಕೆ ಜ.1ರಿಂದ ಆಂಧ್ರ, ತೆಲಂಗಾಣ, ತಮಿಳುನಾಡು, ಕೇರಳ, ಮಹಾರಾಷ್ಟ್ರದಲ್ಲಿ ತೆರೆಕಂಡಿದೆ. ಈಗಾಗಲೇ ಈ ಎಲ್ಲಾ ರಾಜ್ಯಗಳಲ್ಲಿ ಭರ್ಜರಿ ಪ್ರಚಾರ ಮಾಡಿರುವ ಚಿತ್ರತಂಡ, ಪ್ರೇಕ್ಷಕರ ಪ್ರತಿಕ್ರಿಯೆಗಾಗಿ ಎದುರು ನೋಡುತ್ತಿದೆ.

ದಕ್ಷಿಣ ಭಾರತದ ನಾಲ್ಕೂ ಭಾಷೆಗಳಲ್ಲೂ ಪ್ರತಿಷ್ಠಿತ ಸಂಸ್ಥೆಗಳೆ ವಿತರಣೆ ಮಾಡಿವೆ. ತೆಲುಗಿನಲ್ಲಿ ಮೈತ್ರಿ ಮೂವಿ ಮೇಕರ್ಸ್ ವಿತರಣೆಯ ಹಕ್ಕು ಪಡೆದಿದ್ದು, ತಮಿಳಿನಲ್ಲಿ ಎಜಿಎಸ್ ಎಂಟರ್‌ಟೈನ್ಮೆಂಟ್, ಮಲಯಾಳಂನಲ್ಲಿ ದುಲ್ಕರ್ ಸಲ್ಮಾನ್ ಒಡೆತನದ ವೇಫರರ್ ಫಿಲಂಸ್ ಹಾಗೂ ಹಿಂದಿಯಲ್ಲಿ ಜೀ ಸ್ಟುಡಿಯೋಸ್ '45' ಚಿತ್ರವನ್ನು ಬಿಡುಗಡೆ ಮಾಡಿದೆ.

ಆರ್.ಚಂದ್ರು ಬಿಗ್ ಪ್ರಾಜೆಕ್ಟ್



ಹೊಸ ವರ್ಷಕ್ಕೆ 'ಫಾದರ್' ಹಾಡು..



ಆರ್.ಸಿ.ಸ್ಟುಡಿಯೋಸ್ ನಿರ್ಮಾಣದ 'ಫಾದರ್' ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಇತ್ತೀಚೆಗೆ ಚಿತ್ರದ ಥೀಮ್‌ಸಾಂಗ್ ಬಿಡುಗಡೆಯಾಯಿತು. ಆರ್.ಚಂದ್ರು ತಮ್ಮ ತಂದೆ ರಾಮಣ್ಣ ಅವರಕೈಲಿ ಆ ಹಾಡನ್ನು ರಿಲೀಸ್ ಮಾಡಿಸೋ ಮೂಲಕ ಎಲ್ಲರಿಗೂ ಅವರವರ ತಂದೆಯನ್ನು ನೆನಪಿಸಿದರು. 'ಕಬ್ಜಾ' ಮೂಲಕ ಭಾರತೀಯ ಚಿತ್ರರಂಗವೇ ತಿರುಗಿ ನೋಡುವಂತೆ ಮಾಡಿದ ಚಂದ್ರು, ಈ ಚಿತ್ರದಲ್ಲಿ ಯುವಪ್ರತಿಭೆ ರಾಜ್‌ಮೋಹನ್‌ಗೆ ನಿರ್ದೇಶನ ಅವಕಾಶ ಕಲ್ಪಿಸಿದ್ದಾರೆ. 'ಫಾದರ್' ಅಂದಾಕ್ಷಣ, ಪ್ರತಿಯೊಬ್ಬರಿಗೂ ನೆನಪಾಗೋದೇ ತಂದೆ. ನಮ್ಮ ಬದುಕು ರೂಪಿಸುವ ಜೀವವೇ ತಂದೆ. ಆ ತಂದೆಯ ಕುರಿತಾದ ಅಪರೂಪದ ಕಥೆಯನ್ನಿಟ್ಟುಕೊಂಡು ಚಂದ್ರು ಈ ಚಿತ್ರ ನಿರ್ಮಿಸಿದ್ದಾರೆ. ಡಾರ್ಲಿಂಗ್ ಕೃಷ್ಣ ಅಮೃತಾ ಅಯ್ಯಂಗಾರ್, ನಾಗಭೂಷಣ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ನಾಯಕನ ತಂದೆಯಾಗಿ ಹಿರಿಯನಟ ಪ್ರಕಾಶ್‌ರಾಜ್ ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ಮೈಸೂರು, ಧರ್ಮಸ್ಥಳ, ಮಂಗಳೂರು, ಬೆಂಗಳೂರು ಹಾಗೂ ವಾರಣಾಸಿಯಲ್ಲೂ ಚಿತ್ರೀಕರಣ ನಡೆಸಲಾಗಿದೆ. ಈ ಚಿತ್ರಕ್ಕೆ ಸುಜ್ಞಾನ್ ಅವರ ಛಾಯಾಗ್ರಹಣ, ನಕುಲ್ ಅಭಯಂಕರ್ ಸಂಗೀತ ನಿರ್ದೇಶನವಿದೆ.

ಆರ್.ಚಂದ್ರು ಮಾತನಾಡುತ್ತ ಹೊಸ ವರ್ಷಕ್ಕಾಗಿ ನಮ್ಮ ಚಿತ್ರದ ಥೀಮ್ ಸಾಂಗ್ ಬಿಡುಗಡೆ ಮಾಡಿದ್ದೇವೆ, ತಂದೆ ಮಗನ ನಡುವಿನ ಬಾಂಧವ್ಯದ ಕಥೆ ಚಿತ್ರದ್ದು. ನನ್ನ ಬಳಿ ಸಾಕಷ್ಟು ಕಥೆಗಳಿವೆ. ಆದಷ್ಟು ಬೇಗನೆ ದೊಡ್ಡ ಪ್ರಾಜೆಕ್ಟ್‌ನೊಂದಿಗೆ ನಿಮ್ಮ ಮುಂದೆ ಬರುತ್ತಿದ್ದೇನೆ. ನಿಮ್ಮ ಆಶೀರ್ವಾದ ಹೀಗೆ ಇರಲಿ ಎಂದು ಹೇಳಿದರು,



ನಿರ್ದೇಶಕ ನಕುಲ್ ಅಭಯಂಕರ್ ಮಾತನಾಡುತ್ತ ನಮ್ಮೆಲ್ಲರ ಜೀವನದಲ್ಲಿ ಫಾದರ್ ಪಾತ್ರ ಎಷ್ಟು ಮುಖ್ಯ ಎಂಬುದನ್ನು ಈ ಚಿತ್ರ ಹೇಳುತ್ತದೆ. ಚಿತ್ರದಲ್ಲಿ ಒಟ್ಟು 5 ಹಾಡುಗಳಿವೆ ಎಂದರು. ಇನ್ನು ಸಾಹಿತಿ ಕಿನ್ನಾಳರಾಜ್ ಚಿತ್ರದ 3 ಹಾಡುಗಳ ಸಾಹಿತ್ಯ ರಚಿಸಿದ್ದಾರೆ.

ಹೊಸ ವರ್ಷಕ್ಕೆ ಕ್ಯಾಲೆಂಡರ್ ಹಾಡು



ಈ ಹಿಂದೆ 'ಸ್ವಾರ್ಥರತ್ನ' ಎಂಬ ಚಿತ್ರದಲ್ಲಿ ನಟಿಸಿದ್ದ ಆದರ್ಶ ಗುಂಡುರಾಜ್ ಈಗ 'ಕ್ಯಾಲೆಂಡರ್' ಚಿತ್ರಕ್ಕೆ ನಾಯಕರಾಗಿದ್ದಾರೆ. ನವೀನ್ ಶಕ್ತಿ ಅವರ ನಿರ್ದೇಶನದ ಈ ಚಿತ್ರದ 'ನಾನ್ಯಾರು' ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು,

ನಾಯಕ ಹಾಗೂ ನಿರ್ಮಾಪಕ ಆದರ್ಶ ಗುಂಡುರಾಜ್ ಮಾತನಾಡಿ, ಇದು ನನ್ನ ಮೂರನೇ ಚಿತ್ರ ದಿನಗಳನ್ನು ಗುರುತಿಸಲು 'ಕ್ಯಾಲೆಂಡರ್' ಬೇಕು. ಶೀರ್ಷಿಕೆಗೂ ಚಿತ್ರದ ಕಥೆಗೂ ಏನು ಸಂಬಂಧ ಎಂದು ಥಿಯೇಟರ್‌ನಲ್ಲೇ ನೋಡಬೇಕು, ಈ ಚಿತ್ರದ ಕಥೆಯನ್ನು ಬರೆದಿದ್ದು, ಮುಖ್ಯವಾಗಿ ಹೆಣ್ಣುಮಕ್ಕಳಿಗೆ ತುಂಬಾ ಹತ್ತಿರವಾಗುವ ಕಥೆಯಿದು. ಚಿತ್ರದ ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದೆ. ಈ ಹಾಡನ್ನು ಸಂಜಯ್ ಹಾಗೂ ನವೀನ್‌ಶಕ್ತಿ ರಚಿಸಿದ್ದು, ನನ್ನ ಮಗಳು ಅನುಷ್ಕಾ ದನಿಯಾಗಿದ್ದಾರೆ. ಹೃತಿಕ್ ಪೂಜಾರಿ ಹಾಗೂ ಸಂಜಯ್ ಗಾಯನದಲ್ಲಿ ಜೊತೆಯಾಗಿದ್ದಾರೆ. ಸುನಾದ್ ಗೌತಮ್ ನಮ್ಮ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ ಎಂದು ಹೇಳಿದರು.

ನಿರ್ದೇಶಕ ನವೀನ್ ಶಕ್ತಿ ಮಾತನಾಡುತ್ತ ನಾನು ಮೂಲತಃ ರಂಗಭೂಮಿಯವನು. 5000ಕ್ಕೂ ಅಧಿಕ ಬೀದಿನಾಟಕಗಳನ್ನು ಮಾಡಿದ್ದೇನೆ. ನಿರ್ದೇಶಕನಾಗಿ ಇದು ನನ್ನ ಮೊದಲ ಚಿತ್ರ ಕ್ಯಾಲೆಂಡರ್‌ನಲ್ಲಿ ಎಲ್ಲರ ಮನಸ್ಸಿಗೂ ಹತ್ತಿರವಾಗುವ ಕಥೆಯನ್ನು ಆದರ್ಶ ಗುಂಡುರಾಜ್ ಅವರು ಬರೆದಿದ್ದಾರೆ. ರಮೇಶ್ ಕೊಯಿರಾ ಅವರ ಛಾಯಾಗ್ರಹಣ ಹಾಗೂ ಸುನಾದ್ ಗೌತಮ್ ಅವರ ಸಂಗೀತ ನಿರ್ದೇಶನವಿರುವ ಈ ಚಿತ್ರದ ನಾಯಕನಾಗಿ ಆದರ್ಶ ಗುಂಡುರಾಜ್ ಅಭಿನಯಿಸಿದ್ದಾರೆ. ಸುಶ್ಮಿತಾ ಹಾಗೂ ನಿವಿಷ್ಕ ಪಾಟೀಲ್ 'ಕ್ಯಾಲೆಂಡರ್' ಚಿತ್ರದ ನಾಯಕಿಯರು. ವಿಶೇಷ ಪಾತ್ರದಲ್ಲಿ ಕನಸಿನ ರಾಣಿ ಮಾಲಾಶ್ರೀ ಅವರು ಕಾಣಿಸಿಕೊಂಡಿದ್ದಾರೆ. ರಮೇಶ್ ಇಂದಿರಾ, ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮ್ಮಿನಾಡು, ಸುಚೇಂದ್ರ ಪ್ರಸಾದ್ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ ಎಂದು ಹೇಳಿದರು.

ನಾಯಕಿಯರಾದ ಸುಶ್ಮಿತ ಹಾಗೂ ನಿವಿಷ್ಕಾ ಪಾಟೀಲ್ ತಮ್ಮ ಪಾತ್ರ ಕುರಿತಂತೆ ಹೇಳಿಕೊಂಡರು.

ತೀರ್ಥರೂಪ ತಂದೆಯವರಿಗೆ...

ಪತ್ರ ಬರೆದ ರಾಮೇನಹಳ್ಳಿ ಜಗನ್ನಾಥ್



ಹೊಂದಿಸಿ ಬರೆಯಿರಿ' ಖ್ಯಾತಿಯ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ಅವರೀಗ ಎಮೋಷನಲ್ ಕಥೆಯನ್ನು 'ತೀರ್ಥರೂಪ ತಂದೆಯವರಿಗೆ' ಚಿತ್ರದ ಮೂಲಕ ಹೇಳ ಹೊರಟಿದ್ದಾರೆ. ಜನವರಿ 1 ರಂದು ಈ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗಿದೆ.


ಸುಂದರ ಕುಟುಂಬದಲ್ಲಿ ನಡೆದ ಒಂದು ಘಟನೆ ಇದು. ಆ ಕುಟುಂಬವನ್ನು ಎಷ್ಟು ದೂರದವರೆಗೆ ಕೊಂಡೊಯ್ಯುತ್ತದೆ. ನಂತರ ಸಂಬಂಧಗಳನ್ನು ಛಿದ್ರ ಛಿದ್ರ ಮಾಡುತ್ತದೆ. ಅದು ಒಂದಾಗಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ. ಜೊತೆಗೆ ತಂದೆ ತಾಯಿಯ ಮೌಲ್ಯವನ್ನು ಸಾರುವ ಕಂಟೆಂಟ್ ಚಿತ್ರದಲ್ಲಿದೆ.

ನಾಯಕನ ತಾಯಿಯ ಪಾತ್ರದಲ್ಲಿ ಹಿರಿಯ ನಟಿ ಸಿತಾರಾ ಕಾಣಿಸಿಕೊಂಡಿದ್ದಾರೆ. ಪ್ರೇಕ್ಷಕರಿಗೆ ನನ್ನ ಪಾತ್ರ ಇಷ್ಟವಾಗುತ್ತದೆ. ಕಥೆ ಹೃದಯ ತಟ್ಟುತ್ತದೆ. ಕನ್ನಡದಲ್ಲಿ ತುಂಬಾ ದಿನಗಳ ಬಳಿಕ ಬಣ್ಣ ಹಚ್ಚಿದ್ದೇನೆ. 'ನಾನು ನನ್ನ ಕನಸು' ಆದಮೇಲೆ ರಾಜೇಶ್ ನಟರಂಗ ಅವರ ಜೊತೆ ನಟಿಸಿದ್ದೇನೆ ಎಂದು ಹೇಳಿದ್ದಾರೆ.

ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ಮಾತನಾಡಿ ಥಿಯೇಟರ್‌ಗೆ ಪ್ರೇಕ್ಷಕರನ್ನು ಆಕರ್ಷಿಸಲು ಟೈಟಲ್ ಬಹಳ ಮುಖ್ಯ ಅಲ್ಲದೆ ಜನರಿಗೆ ಹತ್ತಿರವಾಗಿರಬೇಕು. ಜೊತೆಗೆ ಕಥೆಗೆ ಹೊಂದಿಕೊಳ್ಳುವಂತಿರಬೇಕು ಎಂಬ ಕಾರಣಕ್ಕೆ ಇದೇ ಟೈಟಲ್ ಇಟ್ಟಿದ್ದೇವೆ. ನಾಯಕನ ಹುಡುಕಾಟದಲ್ಲಿ ಕೊನೆಗೆ ಏನು ಸಿಗಲಿದೆ ಎನ್ನುವುದು ಚಿತ್ರದ ಆಶಯ. ಚಿತ್ರದಲ್ಲಿ ಕಲಾವಿದರ ದಂಡೇ ಇದೆ. ಎಲ್ಲಾ ಪಾತ್ರಗಳು ಸಹಜವಾಗಿ, ಉತ್ತಮವಾಗಿ ಮೂಡಿಬಂದಿದೆ ಎಂದರು.

ಚಿತ್ರದ ನಾಯಕ ನಿಹಾರ್‌ಮುಖೇಶ್, ಮೂಲತಃ ಮೈಸೂರು ಪ್ರತಿಭೆ. ಸೀರಿಯಲ್ ಮೂಲಕ ಬಣ್ಣದ ಲೋಕಕ್ಕೆ ಪರಿಚಯ. ತುಂಬಾ ಎಮೋಷನ್ ಇರುವ ನಾಯಕ ಪೃಥ್ವಿಯ ಪಾತ್ರ ಅವರದು. ನಾಯಕಿಯಾಗಿ ರಚನಾ ಇಂದರ್, ರಾಜೇಶ್ ನಟರಂಗ, ರವೀಂದ್ರ ವಿಜಯ್, ಅಜಿತ್ ಹಂಡೆ ನಟಿಸಿದ್ದಾರೆ. ಜೈ ಚಾಮುಂಡೇಶ್ವರಿ ಪ್ರೊಡಕ್ಷನ್ಸ್ ಅಡಿ ಈ ಚಿತ್ರ ನಿರ್ಮಾಣವಾಗಿದ್ದು, ರಾಮೇನಹಳ್ಳಿ ಜಗನ್ನಾಥ್ ಕಥೆ ಬರೆದಿದ್ದಾರೆ. ರವಿಚಂದ್ರ ಎ.ಜೆ ಈ ಚಿತ್ರಕ್ಕೆ ಎಕ್ಸಿಕ್ಯುಟಿವ್ ಪ್ರೊಡ್ಯೂಸರ್ ಆಗಿ ಸಾಥ್ ಕೊಟ್ಟಿದ್ದಾರೆ. ದೀಪಕ್ ಯರಗೇರಾ ಅವರ ಛಾಯಾಗ್ರಹಣ, ಜೋ ಕೋಸ್ಟ ಸಂಗೀತ ಸಂಯೋಜನೆಯಿದ್ದು, ಮತ್ತು ಪ್ರಶಾಂತ್ ರಾಜಪ್ಪ ಚಿತ್ರದ ಸಂಭಾಷಣೆ ಬರೆದಿದ್ದಾರೆ.

ಸಿನಿಪದಬಂಧ-609



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1.	ರಘುವೀರ್ – ಸಿಂಧು ಅಭಿನಯದ ನದಿಗಳ ಸಂಗಮ	4
3.	ವಿಶ್ವಕ್ಕೆ ಒಡೆಯ ಈ ಹಿರಿಯ ಪೋಷಕ ನಟ	4
7.	ಶಂಕರ್‌ನಾಗ್ ಅಭಿನಯದಲ್ಲಿ ನರನೊಂದಿಗೆ ಅಸುರನೂ ಇದ್ದಾನೆ	6
9.	ಅಜಯ್‌ರಾವ್ ಅವರ ಅಂತರಾಳದ ನುಡಿ	6
10.	ರಘುವೀರ್ ಅವರ ಚಿನ್ನದ ರಶ್ಮಿ	4
12.	ದ್ವಾರಕೀಶ್ – ಜಯಚಿತ್ರ ಕುಬ್ಜರು	4
15.	ಮಂಜುಳಾ ಅಭಿನಯದಲ್ಲಿ ನೆನಪಿನಲ್ಲುಳಿದ ಗೀತೆ	6
16.	ದುನಿಯಾ ವಿಜಿ–ಕಲ್ಯಾಣಿರಾಜ್ ಅವರ ಪುತ್ರ	6
19.	ಪಲ್ಲವಿ ಅನುಪಲ್ಲವಿ ಚಿತ್ರದ ನಿರ್ದೇಶಕ	4
20.	ಕುಮಾರ್ ಬಂಗಾರಪ್ಪ ನೂತನ ಪ್ರತಿಭೆ	4

ಮೇಲಿನಿಂದ ಕೆಳಕ್ಕೆ

1.	ವಿಷ್ಣುವರ್ಧನ್ ಅಭಿನಯದಲ್ಲಿ ಕನ್ನಡದ 'ಹೌಸ್ ಫುಲ್'	5
2.	ಪ್ರಜ್ವಲ್ ದೇವರಾಜ್ ಅಭಿನಯದ ಚಿತ್ರವಿದು	2
4.	ವನದಲ್ಲಿ ಕುಳಿತು ಬರೆದ ಪದ್ಯ	3
5.	ಜಗ್ಗೇಶ್ ಶಿವ ಸ್ವರೂಪಿ	3
6.	ಗಣೇಶ ಸುಬ್ರಮಣ್ಯ ಚಿತ್ರದ ನಾಯಕಿ	3
7.	ಅನಂತ್‌ನಾಗ್ ನಾಲಿಗೆಗೆ ನಡೆದು ಕೊಂಡಿದ್ದಾನೆ	7
8.	ಬಿ. ಸಿ. ಪಾಟೀಲ್ ನಡೆಸಿದ ಗುಂಡಾ ವರ್ತನೆ	4
11.	ಡಿವಿಜಿ ಅವರ ಕಗ್ಗ ನೆನಪಿಸಿಕೊಂಡರೆ ದ್ವಾರಕೀಶ್ ಚಿತ್ರ ಪ್ರತ್ಯಕ್ಷ !	4
13.	ರವಿಶಂಕರ್ – ರಮಣಿತ್ ಚೌಧರಿ ಅವರ 'ಜರ್ನಿ'	3
14.	ಚಂದ್ರಶೇಖರ ಕಂಬಾರ ಅವರ ಪ್ರಾಣಿ	5
16.	ನಾಗರಹಾವು ಚಿತ್ರದ ಅಂಬರೀಷ್ ಪಾತ್ರ	3
17.	ಅಮರ _ _ _ ಪ್ರೇಮ	3
18.	ಕುಶನ ಜೊತೆಗಾರ	2

ಹೆಸರು ________
ವಿಳಾಸ ________
____
ದೂರವಾಣಿ ಸಂಖ್ಯೆ ________

ಸಿನಿ ಪದಬಂಧ 608ರ ಉತ್ತರ

ಚಿ	ನ್ನ	ದ	ಗೊಂ	ಬೆ						
ನ್ನ				ಟ್ಟ		ಅಂ	ಜ	ದ	ಗಂ	ಡು
ದಂ	ಡಂ		ಕ	ದ	ನ		ಯ		ಡು	
ಥ		ಹು		ಹು			ಮಾ		ಗ	
ಮ	ನೇ	ಲಿ	ಇ	ಲಿ	ಬೀ	ದೀ	ಲಿ	ಹು	ಲಿ	
ಗ		ಯ			ಗ		ನಿ			
	ಮ	ಹಾ	ಚ	ತು	ರ			ವೇ		ಬಿ
ಅ		ಲಿ			ಪಂ	ಜ	ರ	ದ	ಗಿ	ಳಿ
ಮ	ಹಾ	ನ	ದಿ		ದ್ಯ		ವ್ಯ			ಗು
ಲಾ		ಮೇ		ಮ			ಕೃ	ಷ್ಣ	ಲೀ	ಲಾ
	ಬೇ	ವು	ಬೆ	ಲ್ಲ		ಕೃ	ಷ್ಣ			ಬಿ

ವಿಜೇತರು: ಲೋಕೇಶ್,
ಸುಣ್ಣದಕೇರಿ, ಮೈಸೂರು



ಗುಣಮಟ್ಟ, ದೀರ್ಘ ಬಾಳಿಕೆಯ ಎಲ್ಲಾ ವಿಧದ ಟಾರ್ಪಾಲಿನ್ಸ್ ಬ್ಯಾಗ್‌ಗಳಿಗೆ ಸಂಪರ್ಕಿಸಿ
ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ಲೈಲಾಸ್ ಸ್ವೀಟ್ ಡ್ರೀಮ್' ಚಿತ್ರಕ್ಕೆ ಚೈತ್ರಾ ಆಚಾರ್ ನಾಯಕಿ



ನಟಿ ಚೈತ್ರಾ ಜೆ.ಆಚಾರ್ ಹಾಗೂ ಗಾಯಕಿ ಎಂಡಿ. ಪಲ್ಲವಿ ತಾಯಿ, ಮಗಳಾಗಿ ನಟಿಸಿರುವ ಚಿತ್ರ ಎಲ್.ಎಸ್.ಡಿ.(ಲೈಲಾಸ್ ಸ್ವೀಟ್ ಡ್ರೀಮ್). ಜಯರಾಮ್ ದೇವಸಮುದ್ರ ನಿರ್ಮಾಣದ ಈ ಚಿತ್ರಕ್ಕೆ ಶಕ್ತಿಪ್ರಸಾದ್ ಆಕ್ಷನ್ ಕಟ್ ಹೇಳಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೈಟಲ್ ಟೀಸರ್ ಬಿಡುಗಡೆಯಾಯಿತು.

ವೇದಿಕೆಯಲ್ಲಿ ಮಾತನಾಡಿದ ನಿರ್ಮಾಪಕರು, ಎಸ್‌ಎಸ್‌ಡಿ ನಮ್ಮ ಸಂಸ್ಥೆಯ ನಾಲ್ಕನೇ ಚಿತ್ರ. 'ನಿದ್ರಾದೇವಿ ನೆಕ್ಸ್ಟ್‌ಡೋರ್' ನಂತರ 'ಉಗ್ರಾಯುಧಂ' ಹಾಗೂ 'ನೀನಂಗೆ ಅಲ್ವಾ' ಚಿತ್ರಗಳ ಶೂಟಿಂಗ್ ನಡೆಯುತ್ತಿದೆ. ಅದರ ಜತೆಗೇ ಈ ಚಿತ್ರವನ್ನೂ ಪ್ರಾರಂಭಿಸಿದ್ದೇವೆ. ನಿರ್ದೇಶಕರು ಈ ಕಥೆ ಹೇಳಿದಾಗ ಕಂಟೆಂಟ್ ನನಗೆ ಇಷ್ಟವಾಯಿತು ಎಂದರು.

ಶಕ್ತಿಪ್ರಸಾದ್ ಮಾತನಾಡುತ್ತ ನನ್ನ ನಿರ್ದೇಶನದ ಮೊದಲ ಚಿತ್ರವಿದು. ಎಸ್‌ಎಸ್‌ಡಿ. ತಾಯಿ, ಮಗಳ ನಡುವಿನ ಬಾಂಧವ್ಯದ ಸುತ್ತ ನಡೆಯುವ ಘಟನೆಗಳೇ ಚಿತ್ರದ ಹೈಲೈಟ್. ಚೈತ್ರಾ ಜೆ.ಆಚಾರ್ ನಾಯಕಿ ಪಾತ್ರದಲ್ಲಿದ್ದು, ತಾಯಿಯ ಪಾತ್ರದಲ್ಲಿ ಎಂ.ಡಿ. ಪಲ್ಲವಿ ನಟಿಸುತ್ತಿದ್ದಾರೆ. ಬ್ಯುಸಿನೆಸ್‌ಮ್ಯಾನ್ ಆಗಿ ಹಿರಿಯನಟ ಅವಿನಾಶ್ ಕಾಣಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ನಮ್ಮ ಚಿತ್ರದ ಒಂದು ಹಂತದ ಚಿತ್ರೀಕರಣ ಮುಗಿದಿದ್ದು, ಜ.15ರಿಂದ ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ.

ನಟಿ ಚೈತ್ರಾ ಜೆ.ಆಚಾರ್ ಮಾತನಾಡುತ್ತ, ನಿರ್ದೇಶಕರು ಈ ಮೊದಲು ಬೇರೆ ಭಾಷೆಗಳ ನಿರ್ಮಾಪಕರ ಬಳಿ ಈ ಕಥೆ ಹೇಳಿದ್ದಾರೆ. ಅವರೆಲ್ಲರೂ ಕಥೆ ಮೆಚ್ಚಿ ನಿರ್ಮಾಣಕ್ಕೆ ಮುಂದಾಗಿದ್ದರು. ಆದರೆ ಕನ್ನಡದಲ್ಲೇ ಮಾಡಬೇಕೆಂಬ ಉದ್ದೇಶದಿಂದ ಅವರು ಬೇರೆ ಭಾಷೆಗಳಿಗೆ ಒಪ್ಪಲಿಲ್ಲ. ನಂತರ ನಿರ್ಮಾಪಕ ಜಯರಾಮ್ ಅವರು ನಿರ್ಮಾಣಕ್ಕೆ ಮುಂದಾದರು. ಈವರೆಗೂ ಮಾಡಿರದ ವಿಶೇಷ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ ಎಂದರು.

ನಟ ಅವಿನಾಶ್ ಮಾತನಾಡಿ, ನನ್ನ ಅನುಭವದಲ್ಲಿ ಈವರೆಗೆ ಸಾಕಷ್ಟು ಚಿತ್ರತಂಡಗಳ ಜೊತೆಗೆ ಕೆಲಸ ಮಾಡಿದ್ದೇನೆ. ಆದರೆ ಈ ತಂಡದ ಜೊತೆಗೆ ಕೆಲಸ ಮಾಡಿರುವುದು ಬಹಳ ಖುಷಿ ತಂದಿದೆ ಎಂದು ಹೇಳಿದರು. ಮಿಥುನ್ ಮುಕುಂದನ್ ಸಂಗೀತ ನಿರ್ದೇಶನ, ರಿತೇಶ್ ಛಾಯಾಗ್ರಹಣ ಹಾಗೂ ಬಲರಾಮ್ ಸಂಕಲನ ಎಲ್‌ಎಸ್‌ಡಿ ಚಿತ್ರಕ್ಕಿದೆ,

ಚುಂಚನಕಟ್ಟೆ ಜಾತ್ರೆಗೆ ಚಾಲನೆ



ಚುಂಚನಕಟ್ಟೆ : ಚುಂಚನಕಟ್ಟೆಯಲ್ಲಿ ಆರಂಭವಾದ ಜಾನುವಾರು ಜಾತ್ರೆಗೆ ಗುರುವಾರ ಎಂಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ದೊಡ್ಡಸ್ವಾಮೇಗೌಡ ಚಾಲನೆ ನೀಡಿದರು

ಇಲ್ಲಿನ ಬಸವನ ವೃತ್ತದಲ್ಲಿ ರಾಸುಗಳಿಗೆ ತಾಲೂಕು ಆಡಳಿತದ ಸಮ್ಮುಖದಲ್ಲಿ ಪೂಜೆ ಸಲ್ಲಿಸಿ ರೈತರಿಗೆ ನೀರು ಕುಡಿಸುವ ಬಕೆಟ್‌ಗಳನ್ನು ವಿತರಿಸಿ ಜಾತ್ರೆಗೆ ಶುಭ ಕೋರಿದರು.

ನಂತರ ಮಾತನಾಡಿದ ಅವರು ಈ ಜಾತ್ರೆಗೆ ಶಾಸಕ ಡಿ.ರವಿಶಂಕರ್ ಅವರ ನೇತೃತ್ವದಲ್ಲಿ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಿಸಲಾಗಿದ್ದು ಅಧಿಕಾರಿಗಳು ಜಾತ್ರೆಯ ಯಶಸ್ವಿಗೆ ಶ್ರಮಿಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಸಾಲಿಗ್ರಾಮ ತಹಸೀಲ್ದಾರ್ ರುಕೀಯಾಬೇಗಂ, ತಾ.ಪಂ.ಇಓ ರವಿ, ಉಪ ತಹಸೀಲ್ದಾರ್ ಮಹೇಶ್, ಆರ್.ಐ.ಚಿದನಂದ ಬಾಬು, ಪಿಡಿಓ ಯೋಗಾನಂದ್ ಪಾರುಪತ್ತೆದಾರ್ ಯತೀರಾಜ್, ಮೌನೇಶ್, ಸುನೀಲ್, ಮೇಘ, ನಾಗರಾಜು, ಸಯ್ಯದ್, ಕಾವೇರಿ, ಪ್ರಿಯಾ, ಗುಮಾಸ್ತೆ ಭಾಗ್ಯಲಕ್ಷ್ಮಿ ರೈತರಾದ ಚುಂಚನಕಟ್ಟೆ ಮನೋಹರ, ಮೂಡಲ ಬೀಡು ಜಗದೀಶ್, ಹೆಬ್ಬಾಳು ಮಹದೇವ್, ಕಾರ್ತಿಕ್, ರಾಕೇಶ್, ಕಾಳೇಗೌಡ ಇದ್ದರು.

ಭೀಮಾ ಕೋರೆಗಾಂವ್ ವಿಜಯೋತ್ಸವವನ್ನು ಇತಿಹಾಸದ ಪುಟಗಳಿಂದ ಮರೆ ಮಾಚಲಾಗಿದೆ

ತಿ.ನರಸೀಪುರದಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವ ಆಚರಣೆ



ಭೀಮಕೋರೆಗಾಂವ್ ವಿಜಯೋತ್ಸವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ತಿ.ನರಸೀಪುರ, ಜ.1– ಇತಿಹಾಸದ ಪುಟಗಳಿಂದ ಭೀಮಾ ಕೋರೆಗಾಂವ್ ವಿಜಯೋತ್ಸವ ಮರೆ ಮಾಚಿರುವುದು ಅತ್ಯಂತ ಖೇದಕರ ಸಂಗತಿಯಾಗಿದೆ. ಇತಿಹಾಸಕಾರರು ಈ ಮಹತ್ವದ ಘಟನೆಗೆ ಜಾಣ ಕುರುಡುತನ ಪ್ರದರ್ಶನ ಮಾಡಿದ್ದಾರೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಭೀಮಕೋರೆಗಾಂವ್ ವಿಜಯೋತ್ಸವ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 208ನೇ ಕೋರೆಗಾಂವ್ ವಿಜಯೋತ್ಸವ ಮತ್ತು ಒಳ ಮೀಸಲಾತಿಯ ಒಳ ಸುಳಿಗಳ ಅವಲೋಕನ ಕಾರ್ಯಕ್ರಮದಲ್ಲಿ ಬಾಬಾ ಸಾಹೇಬರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಸುಮಾರು 500 ಜನ ಮಹರ್ ಸೈನಿಕರು ಪುಣೆಯ ಹತ್ತಿರದ ಕೋರೆಗಾಂವ್ ಭೀಮಾನದಿಯ ದಡೆಯ ಮೇಲೆ ಸುಮಾರು 28 ಸಾವಿರ ಪೇಶ್ವೆಗಳೊಂದಿಗೆ ಹೋರಾಡಿ ವಿಜಯೋತ್ಸವ ಸಾಧಿಸಿದ ಮಹತ್ವದ ದಿನವಾಗಿದೆ, ಇತಿಹಾಸಕಾರರ ಕಣ್ಣಲ್ಲಿ ಈ ಯುದ್ದ ಕಲ್ಪಿಸಲು ಸಾಧ್ಯವಾಗದಿರುವುದಕ್ಕೆ ಬೇಸರವನ್ನು ಅಂಬೇಡ್ಕರ್ ವ್ಯಕ್ತಪಡಿಸುತ್ತಿದ್ದರು ಎಂದು ಹೇಳಿದರು. ಆ ಯುದ್ಧದಲ್ಲಿ ಪೇಶ್ವೆಗಳು ಬರೀ ಸೋತಿದ್ದಲ್ಲ. ಮಹಾರಾಷ್ಟ್ರದಲ್ಲಿ ಅವರ ಉತ್ತರಾದಾಯಿತ್ವವೇ ಅಂತ್ಯವಾಯಿತು. ಹಲವು ಕಾರಣಗಳಿಗಾಗಿ ಈ ಯುದ್ಧಕ್ಕೆ ಮಹತ್ವ ಇದೆ ಎಂದರು.

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಹಾಗು ಅಖಿಲ ಕರ್ನಾಟಕ ಪರಿಶಿಷ್ಟ ಮಹಾಸಭಾದ ರಾಜ್ಯಾಧ್ಯಕ್ಷ ಸೋಸಲೆ ಶಶಿಕಾಂತ್ ಮಾತನಾಡಿ ಬಾಬಾ ಸಾಹೇಬ್ ಅಂಬೇಡ್ಕರ್ ಲಂಡನ್ನಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಭೀಮಾ ಕೋರೆಗಾಂವ್ ವಿಜಯೋತ್ಸವ ಬಗ್ಗೆ ತಿಳಿದು ಸಂಶೋಧನೆ ನಡೆಸಿ ಇತಿಹಾಸದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಈ ದಿನದಂದು ಹಲವಾರು ಜನ ಸ್ಮಾರಕಕ್ಕೆ ಭೇಟಿ ನೀಡಿ ಗೌರವ ಸಲ್ಲಿಸುತ್ತಾರೆ. ಮರಾಠ ಪೇಶ್ವೆಗಳನ್ನು ಸೋಲಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಮಹರ್ ಸೈನಿಕರ ಸಹಾಯ ಪಡೆದು ಪೇಶ್ವೆಗಳನ್ನು ಸೋಲಿಸಿ ಬ್ರಿಟಿಷ್ ಆಡಳಿತಕ್ಕೆ ಇದು ಮುನ್ನುಡಿ ಪಡೆಯಿತು. ದಲಿತರನ್ನು ಅವಮಾನಿಸಿದ್ದ ಪೇಶ್ವೆಗಳ ವಿರುದ್ಧ ದಲಿತರು ಆತ್ಮಗೌರವ, ಹಕ್ಕುಗಳಿಗಾಗಿ ಹೋರಾಡಿದ ಐತಿಹಾಸಿಕ ದಿನವೇ ಭೀಮಾ ಕೋರೆಗಾಂವ್ ವಿಜಯೋತ್ಸವ ಎಂದು ತಿಳಿಸಿದರಲ್ಲದೇ ಒಳ ಮೀಸಲಾತಿ ಹಕ್ಕಿಗಾಗಿ ಎಲ್ಲರೂ ಒಗ್ಗೂಡಿ ಹೋರಾಟ ರೂಪಿಸುವ ಅಗತ್ಯವಿದೆ ಎಂದರು.

ಜಿ.ಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಮೂಗೂರು ಸಿದ್ದರಾಜು, ತಾ.ಪಂ.ಮಾಜಿ ಸದಸ್ಯ ಟಿ.ಎಸ್.ಪ್ರಸನ್ನ, ಮಾದಾಪುರ ಬಸವರಾಜು, ಮಹೇಶ್, ಕೆಂಪಯ್ಯನಹುಂಡಿ ರಾಜು, ಸೋಸಲೆ ಶಿವಕುಮಾರ್, ರಾಜಶೇಖರ್, ಆಲಗೂಡು ಮಂಜು, ಸೋಮನಾಥಪುರ ಗಣೇಶ್, ಡಾ.ಚಂದ್ರಶೇಖರ್, ನಿಲಸೋಗೆ ಬಸವರಾಜು, ಕನ್ನಳ್ಳಿ ಶಿವಕುಮಾರ್, ಲಕ್ಷ್ಮಣ್, ಕನ್ನಾಯಕನಹಳ್ಳಿ ಮರಿಸ್ವಾಮಿ, ಮನ್ನೇಹುಂಡಿ ನಾಗರಾಜು, ಮನೋಜ್ ಕುಮಾರ್ ಇದ್ದರು.

ಅಂಬೇಡ್ಕರ್‌ಗೆ ಪ್ರೇರಣೆ ನೀಡಿದ್ದೇ ಕೋರೆಗಾಂವ್ ಹೋರಾಟ



ಹುಣಸೂರಲ್ಲಿ ಭೀಮ ಕೋರೆಗಾಂವ್ ವಿಜಯೋತ್ಸವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಹುಣಸೂರು, ಜ.1– ಶೋಷಿತರ, ದಮನಿತರ ಪರವಾಗಿ ಡಾ.ಅಂಬೇಡ್ಕರ್ ನಡೆಸಿದ ಹೋರಾಟಕ್ಕೆ ಪ್ರೇರಣೆ ನೀಡಿದ್ದೇ ಕೋರೆಗಾಂವ್ ಹೋರಾಟ ಎಂದು ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರ ಆನಂದಸ್ವಾಮಿ ತಿಳಿಸಿದರು.

ತಾಲೂಕಿನ ರತ್ನಪುರಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವದ ದಿನವನ್ನು ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕೋರೆಗಾಂವ್ ಯುದ್ಧ ಇತಿಹಾಸದ ಬಗ್ಗೆ ಡಾ.ಬಿ.ಆರ್.ಅಂಬೇಡ್ಕರ್ ಮೊದಲು ಬೆಳಕು ಚೆಲ್ಲಿದರು. ಪೇಶ್ವೆಗಳ ಆಡಳಿತದ ಅವಧಿಯಲ್ಲಿ ದಲಿತ ಸಮುದಾಯವನ್ನು ಅತ್ಯಂತ ಕೀಳು ಮಟ್ಟದಲ್ಲಿ ನಡೆಸಿಕೊಳ್ಳಲಾಗುತ್ತಿತ್ತು. ಈ ಪ್ರದೇಶವನ್ನು ಆಕ್ರಮಿಸಿಕೊಳ್ಳಲು ಬ್ರಿಟಿಷರು ಮಹರ್ ಸಮುದಾಯದ ಕೇವಲ 500 ಜನರ ಸೈನ್ಯವನ್ನು ಕಟ್ಟಿ 28 ಸಾವಿರ ಜನರಿದ್ದ ಪೇಶ್ವೆ ಸೈನ್ಯವನ್ನು ಸೋಲಿಸಿ ವಿಜಯ ಸಾಧಿಸಿದ್ದರು. ಇದರಲ್ಲಿ ಕೇವಲ 22 ಜನ ಮಹರ್ ಸೈನಿಕರು ಮಾತ್ರ ಮೃತಪಟ್ಟಿದ್ದರು. 1922ರಲ್ಲಿ ಇಲ್ಲಿಗೆ ಮೊದಲ ಭೇಟಿ ನೀಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಈ ಘಟನೆಯನ್ನು ದಾಖಲಿಸಿ ಇದರ ಬಗ್ಗೆ ಬೆಳಕು ಚೆಲ್ಲಿದ್ದರು. ಈ ಹಿನ್ನೆಲೆಯಲ್ಲಿ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ ಎಂದರು.

ದಸಂಸ ಜಿಲ್ಲಾ ಹೋರಾಟಗಾರ ರತ್ನಪುರಿ ಪುಟ್ಟಸ್ವಾಮಿ ಮಾತನಾಡಿ, ಐತಿಹಾಸಿಕವಾಗಿ ಈ ದಿನವನ್ನು ಭಾರತದ ಇತಿಹಾಸದಲ್ಲಿ ಇದೊಂದು ಸುವರ್ಣ ಅಕ್ಷರಗಳಲ್ಲಿ ಬರೆದಿಡುವ ಘಟನೆಯಾಗಿದ್ದು ಇಂದು ಎಲ್ಲೆಡೆ ಈ ಬಗ್ಗೆ ಜಾಗೃತಗೊಂಡು ವಿಜಯೋತ್ಸವವನ್ನು ಆಚರಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಮದ ತಾಪಂ ಮಾಜಿ ಸದಸ್ಯ ಅಜ್ಗರ್ ಪಾಷ, ಗ್ರಾಪಂ ಸದಸ್ಯ ವಿಜೇಂದ್ರಕುಮಾರ್ ಮಾತನಾಡಿದರು. ಗ್ರಾಪಂ ಸದಸ್ಯರಾದ ನಂದೀಶ್, ರಾಮ ಭೋವಿ, ಅಲ್ತಾಫ್ ಷರೀಫ್, ಮುಜೀಬ್, ನಂಜಾಪುರ ಮನುಕುಮಾರ್, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಸ್ವಾಮಿನಾಥ್, ಡೇವಿಡ್, ಮಲ್ಲಿಕಾರ್ಜುನಸ್ವಾಮಿ, ಸುದರ್ಶನ್ ಸಿಂಗ್, ಸುರೇಶ್, ಸಂಜಯ್, ನಾಗೇಂದ್ರ, ಶಿವು, ರವಿ, ಡ್ರೈವರ್ ಚಂದ್ರ ಉಪಸ್ಥಿತರಿದ್ದರು.

ಭೀಮಾ ಕೋರೆಗಾಂವ್ ವಿಜಯೋತ್ಸವ ಪಠ್ಯ ಪುಸ್ತಕದಲ್ಲಿ ಅಳವಡಿಸಲು ಮನವಿ

ನಂಜನಗೂಡು: ದಲಿತರ ಸ್ವಾಭಿಮಾನದ ಸಂಕೇತವಾದ ಭೀಮಾ ಕೋರೆಂಗಾವ್ ವಿಜಯೋತ್ಸವವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಬೇಕು ಎಂದು ವಕೀಲರಾದ ಉಮೇಶ್ ತಿಳಿಸಿದರು.

ಜ.1ರಂದು ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಭೀಮಾ ಕೊರಂಗಾವ್ ವಿಜಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಿರುವ ಹಿನ್ನೆಲೆಯಲ್ಲಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಯ ಬಳಿ ಭೀಮ ಕೋರೆಂಗಾವ್ ಸ್ಥಬ್ಧ ಚಿತ್ರ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದರು.

ಭೀಮ ಕೊರಂಗಾವ್ ವಿಜಯೋತ್ಸವವು ಐತಿಹಾಸಿಕ ಘಟನೆಯಾಗಿದ್ದು ಸಮಾಜದಲ್ಲಿ ಹಾಸುಹೊಕ್ಕಾಗಿದ್ದ ಕ್ರೂರ ಜಾತಿ ಪದ್ಧತಿಯ ವಿರುದ್ಧ, ಅಸ್ಪೃಶ್ಯತೆಯ ನಡುವೆಯೂ ದಲಿತರು ನಡೆಸಿದ ಹೋರಾಟ ಅಂಬೇಡ್ಕರ್ ಅವರ ಬದುಕಿಗೆ ತಿರುವು ಕೊಟ್ಟ ಸಂಗತಿಯಾಗಿದೆ. ಪುಣೆ ಪ್ರದೇಶದಲ್ಲಿ 500 ಜನ ಮಹರ್ ಸೈನಿಕರು ಸುಮಾರು 28 ಸಾವಿರ ಪೇಶ್ವೆಗಳ ದೊಡ್ಡ ಸೈನ್ಯದ ಜೊತೆ ಹಸಿವಿನಿಂದ ಅವಿರತವಾಗಿ ಸ್ವಾಭಿಮಾನದ ಹೋರಾಟ ನಡೆಸಿದ ಕೊರೆಗಾಂವ್ ವೀರರು ಎರಡನೇ ಬಾಜಿರಾಯನ ಮಗನನ್ನು ಕೊಂದ ನೆನಪಿಗೆ ಈ ಐತಿಹಾಸಿಕ ವಿಜಯೋತ್ಸವವನ್ನು ಆಚರಿಸಲಾಗುತ್ತಿದೆ, ಈ ಹಿನ್ನೆಲೆಯಲ್ಲಿ ಭೀಮ ಕೋರೆಂಗಾವ್ ವಿಜಯೋತ್ಸವದ ಸಾಕ್ಷ್ಯ ಚಿತ್ರವನ್ನು ಹೊತ್ತ ವಾಹನವು ತಾಲೂಕಿನ ವಿವಿಧ ಹಳ್ಳಿಗಳಲ್ಲಿ ಸಂಚರಿಸಿ ಗ್ರಾಮಸ್ಥರಿಗೆ ಕಾರ್ಯಕ್ರಮದ ಅರಿವು ಮೂಡಿಸಿ ಆಹ್ವಾನ ಮಾಡಲಿದೆ ಎಂದರು.

ದಲಿತ ಸಂಘಟನೆ ಒಕ್ಕೂಟದ ಅಧ್ಯಕ್ಷ ದೇವರಸನಹಳ್ಳಿ ಪುಟ್ಟಸ್ವಾಮಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಸಾಹಿತಿಗಳಾದ ಮುರುಡೇಶ ಮೂರ್ತಿ, ದಲಿತ ಸಂಘಟನೆಗಳ ಸಂಚಾಲಕರಾದ ಚುಂಚನಹಳ್ಳಿ ಮಲ್ಲೇಶ್, ಕಾರ್ಯ ಬಸವಣ್ಣ, ಮಲ್ಲಹಳ್ಳಿ ನಾರಾಯಣ, ಶಂಕರಪುರ ಸುರೇಶ್, ಬಸವಟ್ಟಿಗೆ ಕೃಷ್ಣಮೂರ್ತಿ, ಯಶ್ವಂತ್, ಮಹೇಶ ಇದ್ದರು.



ನಂಜನಗೂಡಿನ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಯ ಬಳಿ ಭೀಮಾ ಕೋರೆಂಗಾವ್ ಸ್ಥಬ್ಧ ಚಿತ್ರ ವಾಹನಕ್ಕೆ ಚಾಲನೆ ನೀಡಲಾಯಿತು.

ಸರಗೂರಲ್ಲಿ ಜಕಣಾಚಾರಿ ಜಯಂತಿ ಆಚರಣೆ



ಸರಗೂರು: ಅಮರ ಶಿಲ್ಪಿ ಜಕಣಾಚಾರಿ ಅವರು ರೂಪಿಸಿದ ಅದ್ಭುತ ಕಲಾಕೃತಿಗಳು ಇಂದಿಗೂ ನಮ್ಮನ್ನು ಬೆರಗುಗೊಳಿಸುತ್ತವೆ. ಇಂಥ ಕಲೆ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಜಿ.ರವಿ ತಿಳಿಸಿದರು.

ತಾಲೂಕು ಕಚೇರಿಯಲ್ಲಿ ಗುರುವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಅಮರ ಶಿಲ್ಪಿಜಕಣಾಚಾರಿ ಜಯಂತಿ ಕಾರ್ಯಕ್ರಮದಲ್ಲಿ ಅಮರ ಶಿಲ್ಪಿ ಜಕಣಾಚಾರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಜಗತ್ತಿನಲ್ಲೆ ಪ್ರಸಿದ್ಧಿ ಪಡೆದ ಬೇಲೂರು ಮತ್ತು ಹಳೆಬೀಡು ಸೇರಿದಂತೆ ಇತರ ಸ್ಥಳಗಳಲ್ಲಿ ಕಲ್ಲಿನಲ್ಲಿ ಕೆತ್ತಿದ ಕಲಾಕೃತಿಗಳನ್ನು ನೋಡುವುದೇ ಒಂದು ಸೌಭಾಗ್ಯ ಮಾಡುವ ಕೆಲಸದ ಬಗ್ಗೆ ತಿಳುವಳಿಕೆ, ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಲ್ಲಿ ಯಶಸ್ಸು ಗಳಿಸಬಹುದು ಎಂದು ಅವರು ಹೇಳಿದರು.

ಯುವ ಬ್ರಿಗೇಡ್‌ನ ತಾಲೂಕು ಅಧ್ಯಕ್ಷ ಬಿ.ಡಿ.ದಾಸಚಾರಿ ಮಾತನಾಡಿದರು. ತಹಸೀಲ್ದಾರ್ ಮೋಹನ್‌ಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಪಪಂ ಅಧ್ಯಕ್ಷೆ ಚೈತ್ರ ಸ್ವಾಮಿ, ಉಪಾಧ್ಯಕ್ಷ ಶಿವಕುಮಾರ್, ಸಮಾಜದ ಅಧ್ಯಕ್ಷ ನಟರಾಜು, ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ಸಂತೋಷ್‌ಕುಮಾರ್, ಮುಖಂಡರಾದ ಲಿಂಗಾಚಾರ್, ಗೋಪಾಲಕೃಷ್ಣ, ರಾಜೇಶ್, ಪುಟ್ಟಸ್ವಾಮಿಆಚಾರ್, ಶ್ರೀನಿವಾಸ್, ಬಿರ್ವಾಳ್ ಸೋಮಚಾರ್, ಲೋಕೇಶ್, ಶ್ರೀನಿವಾಸಚಾರ್, ಬಸವರಾಜು, ಕಾಳಸ್ವಾಮಿಆಚಾರ್, ಚೇತನ್, ಸುರೇಶ್, ನರಸಿಂಹಾಚಾರ್, ಪ್ರಕಾಶ್ಆಚಾರ್ ಇದ್ದರು.

ನಾಳೆಯಿಂದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರೆ

ಮೂಗೂರು: ಇಲ್ಲಿನ ಇತಿಹಾಸ ಪ್ರಸಿದ್ಧ ಶ್ರೀ ತ್ರಿಪುರ ಸುಂದರಿ ಅಮ್ಮ ನವರ ಜಾತ್ರಾ ಮಹೋತ್ಸವ ಜ.3 ರಿಂದ 7 ರವರೆಗೆ ನಡೆಯಲ್ಲಿದ್ದು ಜ.5 ರಂದು ಮಹಾ ರಥೋತ್ಸವ ಜರುಗಲಿದೆ. ಪುಷ್ಯ ಮಾಸದಲ್ಲಿ ನಡೆಯುವ ವರ್ಷದ ಮೊದಲ ಜಾತ್ರೆಯಾದ್ದರಿಂದ ರಾಜ್ಯದ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಮಹಾ ಶಕ್ತಿಯ ಸ್ವರೂಪಿಣಿಯಾದ ತ್ರಿಪುರ ಸುಂದರಿ ಅಮ್ಮ ತಿಬ್ಬಾದೇವಿ ಜಾತ್ರೆಯ 11 ದಿನಗಳ ಮುನ್ನವೇ ಪೂಜಾ ಕೈಂಕರ್ಯಗಳು ನಡೆಯುತ್ತಿವೆ.

ಜ.3ರ ಶನಿವಾರ ಮೂಗೂರು ಬಂಡಿ ರುದ್ರಾಕ್ಷಿ ಮಂಟಪದಲ್ಲಿ ಅಮ್ಮನವರ ಉತ್ಸವ, ಜ 4 (ತೆಪ್ಪೋತ್ಸವ) ಹೂವಿನ ಪಲ್ಲಕ್ಕಿ ಉತ್ಸವ, ಜ.5 ರಂದು ಸೋಮವಾರ ಶ್ರೀ ತ್ರಿಪುರ ಸುಂದರಿ ಅಮ್ಮ ನವರ ದಿವ್ಯ ಮಹಾ ರಥೋತ್ಸವ ಹಾಗೂ ರಾತ್ರಿ ಆನೆ ವಾಹನೋತ್ಸವ, ಜ.6 ಅಮ್ಮ ನವರು ಹೊಸಹಳ್ಳಿಗೆ ದಯಮಾಡಿ ಹೊಸಹಳ್ಳಿ ದೇಗುಲದಲ್ಲಿ ಚಿಗುರು ಕಡಿಯುವುದು ನಂತರ ಮೂಗೂರಿಗೆ ದಯಮಾಡಿ ರಾತ್ರಿ ಕುದುರೆ ವಾಹನೋತ್ಸವ ಬೆಳಿಗ್ಗೆ ಮಂಟಪದಲ್ಲಿ ಉಯ್ಯಾಲೆ ಉತ್ಸವ, ಜ.7 ಆಳು ಪಲ್ಲಕ್ಕಿ ಉತ್ಸವ ದೊಂದಿಗೆ ವೈಮಾಳಿಗೆ ಉತ್ಸವ, ರಾತ್ರಿ ವೇಳೆ ದೇಗುಲದಲ್ಲಿ ಅಮ್ಮ ನವರಿಗೆ ಪೂರ್ಣಾಭಿಷೇಕ ವಿಶೇಷ ಪೂಜೆ ಮಹಾಮಂಗಳಾರತಿ ಯೊಂದಿಗೆ ಜಾತ್ರಾ 9 ದಿನಗಳ ನಿರಂತರ ಧಾರ್ಮಿಕ ಆಚರಣೆಗೆ ತೆರೆ ಬೀಳಲಿದೆ.

ಅಮರಶಿಲ್ಪಿ ಜಕಣಾಚಾರಿ ಸರ್ವಕಾಲಕ್ಕೂ ಅಮರ



ತಿ.ನರಸೀಪುರದಲ್ಲಿ ಅಮರ ಶಿಲ್ಪಿ ಜಕಣಾಚಾರಿ ಅವರ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಜ.1– ಅಮರಶಿಲ್ಪಿ ಜಕಣಾಚಾರಿ ಶಿಲ್ಪ ಕಲೆಗೆ ಅಪಾರ ಕೊಡುಗೆ ನೀಡಿದ್ದು, ಇವರ ಹೆಸರು ಸರ್ವಕಾಲಕ್ಕೂ ಅಮರವಾಗಿರುತ್ತದೆ ಎಂದು ಶಿರಸ್ತೇದಾರ್ ಮಂಜುಳಾ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯು ತಾಲೂಕು ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ತಾಲೂಕು ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯಲ್ಲಿ ಅವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಕನ್ನಡ ನಾಡಿನ ಇತಿಹಾಸದಲ್ಲಿ ಹೊಯ್ಸಳರು ತಮ್ಮದೇ ಆದ ಕೊಡುಗೆಯನ್ನು ಶಿಲ್ಪ ಕಲೆಗೆ ನೀಡಿದ್ದಾರೆ. ಅವರಲ್ಲಿ ವಿಷ್ಣುವರ್ಧನ ಅರಸನ ಕಾಲದಲ್ಲಿ ಶಿಲ್ಪಕಲೆಯು ಉತ್ತುಂಗ ಶಿಖರದಲ್ಲಿತ್ತು. ವಿಷ್ಣುವರ್ಧನನ ಪತ್ನಿ ಶಾಂತಲೆ ನಾಟ್ಯ ರಾಣಿ ಎಂದು ಪ್ರಸಿದ್ಧಿಯಾಗಿದ್ದಳು. ಈ ಕಾಲದಲ್ಲಿದ್ದ ಅಮರಶಿಲ್ಪಿ ಜಕಣಾಚಾರಿ ಬೇಲೂರು ಹಳೇಬೀಡಿನ ಚನ್ನಕೇಶವ ದೇವಾಲಯದಲ್ಲಿ ಶಿಲ್ಪಗಳನ್ನು ಕೆತ್ತನೆ ಮಾಡಿ ಹೆಸರಾಗಿದ್ದಾರೆ ಎಂದರು.

ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆಬ್ಬೇಹುಂಡಿ ಸಿದ್ದಪ್ಪಾಜಿ ಮಾತನಾಡಿ ಜಗತ್ತಿನ ಅದ್ಭುತ ಶಿಲ್ಪಿಗಳ ಸಾಲಿನಲ್ಲಿ ನಿಲ್ಲುವ ಜಕಣಾಚಾರಿ ಅವರು ಬೇಲೂರು ಮತ್ತು ಹಳೇಬೀಡು ಸೇರಿ ಇತರ ಸ್ಥಳಗಳಲ್ಲಿ ಕಲ್ಲಿನಲ್ಲಿ ಕೆತ್ತಿದ ಕಲಾಕೃತಿಗಳನ್ನು ನೋಡುವುದೇ ಒಂದು ಸೌಭಾಗ್ಯ ಮಾಡುವ ಕೆಲಸದಲ್ಲಿ ಜ್ಞಾನ, ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಲ್ಲಿ ಯಶಸ್ಸು ಲಭಿಸುತ್ತದೆ. ನಮ್ಮೊಳಗಿನ ಕಲೆಯನ್ನು ನಾವು ಗುರುತಿಸಿದರೆ ಮಾತ್ರ ಸಮಾಜ ನಮ್ಮನ್ನು ಗುರುತಿಸುತ್ತದೆ. ಸಾಧಕರನ್ನು ಸ್ಮರಣೆ ಮಾಡಿದರಷ್ಟೇ ಸಾಲದು. ಅವರ ಗುಣ ಮತ್ತು ಬೆಳೆದು ಬಂದ ಪರಿಶ್ರಮದ ಘಟನೆಗಳನ್ನು ತಿಳಿದು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ ಎಂದರು.

ಈ ವೇಳೆ ಸಂಘದ ಉಪಾಧ್ಯಕ್ಷ ಬಸವರಾಜಾಚಾರ್, ಖಜಾಂಚಿ ಚಿಟಗಯ್ಯನ ಕೊಪ್ಪಲು ರವಿ, ಕೆಂಪಯ್ಯನಹುಂಡಿ ಸಿದ್ದಪ್ಪಾಜಿ, ಶಿವಕುಮಾರ್, ಶ್ರೀನಿವಾಸ್, ಹೆಳವರಹುಂಡಿ ರಾಜಾಚಾರಿ, ಶಿಲ್ಪಿ ರಮೇಶ್, ಕರಿಯಪ್ಪಚಾರಿ, ಸಿದ್ದಪ್ಪಾಜಿ, ಚೆಲುವಾಚಾರಿ, ಕುಮಾರ್, ಮಹೇಶ್ ಕುಮಾರ್ ಸೇರಿದಂತೆ ತಾಲೂಕು ಕಚೇರಿಯ ನಿತಿನ್ ಹಾಗು ಸಿಬ್ಬಂದಿ ವರ್ಗದವರು ಹಾಜರಿದ್ದರು.

ಚಿಕ್ಕದೇವಮ್ಮ ಬೆಟ್ಟದಲ್ಲಿ ಹೊಸ ವರ್ಷದ ವಿಶೇಷ ಪೂಜೆ

ಹರಿದು ಬಂದ ಭಕ್ತ ಸಾಗರ, ದೇವಿಗೆ ಪೂಜೆ ಸಲ್ಲಿಕೆ



ಸರಗೂರಿನ ಚಿಕ್ಕದೇವಮ್ಮನ ಬೆಟ್ಟದಲ್ಲಿ ಹೊಸ ವರುಷದ ಹಿನ್ನೆಲೆಯಲ್ಲಿ ದೇವತೆಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಸರಗೂರು: ತಾಲೂಕಿನ ಚಿಕ್ಕದೇವಮ್ಮನ ಬೆಟ್ಟದಲ್ಲಿರುವ ತಾಯಿ ಚಿಕ್ಕದೇವಮ್ಮ ದೇವತೆಗೆ ಹೊಸ ವರ್ಷದ ಹಿನ್ನೆಲೆಯಲ್ಲಿ ಗುರುವಾರ ವಿಶೇಷ ಪೂಜೆ ನಡೆಯಿತು. ಸಾವಿರಾರು ಭಕ್ತರು ಪಾಲ್ಗೊಂಡು ಪ್ರಾರ್ಥಿಸಿದರು.

ಬೆಳಗ್ಗೆ ಧನುರ್ಮಾಸ ಪೂಜೆ ನಡೆದ ಬಳಿಕ ದೇವತೆಗೆ ವಿಶೇಷ ಅಭಿಷೇಕ ಮಾಡಲಾಯಿತು. ದೇವತೆಯನ್ನು ವಿವಿಧ ಹೂವುಗಳಿಂದ ಅಲಂಕೃತಗೊಳಿಸಲಾಗಿತ್ತು. ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವತೆ ದರ್ಶನ ಪಡೆದು ಪುನೀತರಾದರು.

ದೇವಸ್ಥಾನದ ಪಾದದ ಬಳಿಯಲ್ಲಿ ದೇವತೆಗೆ ಮೊದಲಿಗೆ ಪೂಜೆ ಸಲ್ಲಿಸಿದ ಭಕ್ತರು ಮೆಟ್ಟಿಲುಗಳನ್ನು ಏರಿ ದೇವತೆಯ ಬಳಿ ಬಂದು, ಚಿಕ್ಕಮ್ಮ ಚಿಕ್ಕದೇವಿಗೆ ವಿಶೇಷ ಪೂಜೆ ಸಲ್ಲಿಸಿ, ದೇವತೆಯನ್ನು ಕಣ್ತುಂಬಿಕೊಂಡರು. ಹೊಸ ವರುಷ ದಿನದಂದು ದೇವಸ್ಥಾನಗಳಿಗೆ ತೆರಳಿ ಪೂಜೆ ಮಾಡಿಸಿ, ಸಂತೋಷವಾಗಿದ್ದರೆ, ವರ್ಷ ಪೂರ್ತಿಯಾಗಿ ಸಂತೋಷವಾಗಿರಬಹುದು ಎಂಬ ನಂಬಿಕೆಯಿಂದ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ, ತಮ್ಮ ಇಷ್ಟಾರ್ಥ ಹರಕೆ ತೀರಿಸಿ ದೇವರ ಕೃಪೆಗೆ ಪಾತ್ರರಾದರು.

ದೇವಸ್ಥಾನದ ಪಾರುಪತ್ತೇದಾರ ಶಾಂತಿಪುರ ಮಹದೇವಸ್ವಾಮಿ, ಅರ್ಚಕರಾದ ಮನು, ಪ್ರಸನ್ನ, ಮಣಿ, ಸಂತೋಷ್, ಶಿವಕುಮಾರ್, ಲಿಂಗಪ್ಪ ಸೇರಿದಂತೆ ಸಿಬ್ಬಂದಿಗಳು ಹಾಜರಿದ್ದರು.

ಅಮರಶಿಲ್ಪಿ ಜಕಣಾಚಾರಿ ತತ್ವ, ಆದರ್ಶ ಪಾಲಿಸಿ



ಜಕಣಾಚಾರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ತಹಸಿಲ್ದಾರ್ ಶ್ರೀನಿವಾಸ್.

ಹೆಚ್.ಡಿ.ಕೋಟೆ: ಅಮರಶಿಲ್ಪಿ ಜಕಣಾಚಾರಿ ಅವರ ಜೀವನವು ಕಲೆಯ ಮೇಲಿನ ಪ್ರೀತಿ ಮತ್ತು ಸಮರ್ಪಣೆಯಿಂದ ಕೂಡಿತ್ತು ಈಗಿನ ಯುವ ಪೀಳಿಗೆ ಹಾಗೂ ಸಮಾಜದ ಎಲ್ಲರೂ ಅವರ ತತ್ವ ಆದರ್ಶವನ್ನು ಪಾಲಿಸಬೇಕು ಎಂದು ತಹಸಿಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಆಡಳಿತ ಸೌಧದಲ್ಲಿ ತಾಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣ ದಿನಾಚರಣೆ ಕಾರ್ಯಕ್ರಮದಲ್ಲಿ ಅಮರಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಅಮರಶಿಲ್ಪಿ ಜಕಣಾಚಾರಿ (12ನೇ ಶತಮಾನ) ಹೊಯ್ಸಳ ಮತ್ತು ಕಲ್ಯಾಣಿ ಚಾಲುಕ್ಯ ಶೈಲಿಯ ದೇವಾಲಯಗಳನ್ನು ನಿರ್ಮಿಸಿದ ಪ್ರಸಿದ್ಧ ದಂತಕಥೆಯ ಶಿಲ್ಪಿ. ಬೇಲೂರು ಚೆನ್ನಕೇಶವ, ಹಳೇಬೀಡು ಹೊಯ್ಸಳೇಶ್ವರ ಮತ್ತು ಸೋಮನಾಥಪುರ ದೇವಾಲಯಗಳು ಇವರ ಕಲಾ ವೈಭವಕ್ಕೆ ಸಾಕ್ಷಿಯಾಗಿವೆ. ಜಕಣಾಚಾರಿ ತುಮಕೂರು ಜಿಲ್ಲೆಯ ಕೈದಾಳ (ಹಳೆಯ ಹೆಸರು ಕ್ರೀಡಾಪುರ)ದಲ್ಲಿ ಜನಿಸಿದರು. ಇವರು ಕಲೆಯ ಮೇಲಿನ ಭಕ್ತಿಯಿಂದ ಕುಟುಂಬ ತೊರೆದು ಹಲವಾರು ದೇವಾಲಯಗಳನ್ನು ನಿರ್ಮಿಸಲು ಮುಂದಾದರು ಎಂದರು. ಇದೆ ಸಂದರ್ಭದಲ್ಲಿ ವಿಶ್ವಕರ್ಮ ಸೇವಾ ಸಮಾಜ ತಾಲೂಕು ಅಧ್ಯಕ್ಷ ರಾಜು, ಬಿಜೆಪಿ ಓಬಿಸಿ ತಾಲೂಕು ಅಧ್ಯಕ್ಷ, ಬಸವರಾಜಚಾರ್, ಪ್ರಧಾನ ಕಾರ್ಯದರ್ಶಿ ಹೊಸ ಹೊಳಲು ರಾಚಾಪ್ಪಾಜಿ, ಕಾರ್ಯದರ್ಶಿ ಮಗ್ಗೆ ಸೋಮಚಾರ್, ಚೆಲುವಾಚಾರ್, ರಾಜು, ಚೆನ್ನಾಚಾರಿ, ಸೋಮಾಚಾರ್, ಮುತ್ತಾಚಾರ್, ಮೇಟಿಕುಪ್ಪೆ ಚಂದ್ರಚಾರ್, ಸುಂದರ ಚಾರ್, ಮಹೇಶ ಆಚಾರ್, ಲಕ್ಷ್ಮಣ, ಸೋಮಣ್ಣ, ಬಸಪುರ ಚಂದ್ರು, ಕೆಂಪಾಚಾರ್, ಆಗತ್ತೂರು ಚೆಲುವಚಾರ್, ನಾಗೇಶ್, ಮೂರ್ತಚಾರ್, ಶಿವಣ್ಣ ಆಚಾರ್, ದಾಸಾಚಾರ್, ಎಡತೊರೆ ಶಿವು ಇದ್ದರು.

ಸಾ.ರಾ.ಮಹೇಶ್ ಪ್ರೀತಿಯ ಚಿಂಟುವಿನ 6ನೇ ವರ್ಷದ ಪುಣ್ಯಸ್ಮರಣೆ

ಮೈಸೂರಿನ ತೋಟದಲ್ಲಿ ಹೋಮ–ಹವನ, ವಿಶೇಷ ಪೂಜೆ, ಅನ್ನ ದಾಸೋಹ, ನೂರಾರು ಮಂದಿ ಭಾಗಿ

ಕೆ.ಆರ್.ನಗರ: ಮಾಜಿ ಸಚಿವ ಸಾ.ರಾ. ಮಹೇಶ್ ಅವರ ಮೈಸೂರಿನ ದಟ್ಟಗಳ್ಳಿಯ ಸಾ.ರಾ.ಫಾರಂ ಹೌಸ್‌ನಲ್ಲಿ ತಮ್ಮ ಅಚ್ಚುಮೆಚ್ಚಿನ ಕೋತಿ ಚಿಂಟುವಿನ ಆರನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಹತ್ತು ಹಲವು ಧಾರ್ಮಿಕ ಕಾರ್ಯಗಳನ್ನು ತಮ್ಮ ಕುಟುಂಬದವರೊಡನೆ ನೆರವೇರಿಸಿದರು.

ಪ್ರಾಣಿಗಳೊಂದಿಗೆ ಒಡನಾಟ ಹೊಂದಿರುವವರಿಗೆ ಮಾತ್ರ ಅದರ ಮಹತ್ವ ತಿಳಿದಿರುತ್ತದೆ. ಆರು ವರ್ಷಗಳ ಹಿಂದೆ ಸಾವಿಗೀಡಾದ ಅವರ ಮುದ್ದಿನ ಕೋತಿ (ಚಿಂಟು) ಗಾಗಿ ಗುಡಿಯೊಂದನ್ನು ಕಟ್ಟಿದ್ದಾರೆ. ಪ್ರತಿ ವರ್ಷ ಜನವರಿ ಒಂದರಂದು ಮಾಜಿ ಸಚಿವ ಸಾ.ರಾ.ಮಹೇಶ್ ಚಿಂಟುವಿನ ಸ್ಮರಣಾರ್ಥ ತಮ್ಮ ದಟ್ಟಗಳ್ಳಿಯ ತೋಟದ ಮನೆಯಲ್ಲಿ ಹೋಮ–ಹವನ, ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಮಾಡುತ್ತಾ ಸಾವಿರಾರು ಜನರಿಗೆ ಅನ್ನ ದಾಸೋಹ ಮಾಡುತ್ತಾ ನೆನೆಯುತ್ತಾ ಬಂದಿದ್ದಾರೆ.

ಇಂದು ಬೆಳಗ್ಗೆಯಿಂದಲೇ ತೋಟದ ಮನೆಯಲ್ಲಿ ವೇದ ಮಂತ್ರಗಳ ಘೋಷಗಳು ಮೊಳಗಿದವು. ತಳಿರು ತೋರಣಗಳ ಅಲಂಕಾರ, ಹೂವಿನ ಚಿತ್ತಾರ ಕಂಡು ಬಂತು, ಅಲ್ಲದೆ ವಿವಿಧ ರಾಜಕೀಯ ಪಕ್ಷಗಳ ಮಾಜಿ ಶಾಸಕರು, ಮುಖಂಡರು, ಅಧಿಕಾರಿಗಳು, ಕೆ.ಆರ್.ನಗರ ಕ್ಷೇತ್ರದ ಜನರು ಸೇರಿದಂತೆ ನೂರಾರು ಮಂದಿ ಕೋತಿಯ(ಚಿಂಟುವಿನ) ಪುಣ್ಯಸ್ಮರಣೆಯಲ್ಲಿ ಭಾಗವಹಿಸಿದ್ದರಲ್ಲದೆ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ನೂತನ ವರ್ಷದ ಶುಭಾಶಯ ಕೋರಿದರು.

> ಸಾ.ರಾ.ಮಹೇಶ್ ಹಾಗೂ ಚಿಂಟು(ಕೋತಿ) ನಡುವೆ ನಂಟು ಬೆಳೆದ ರೀತಿ ಕುತೂಹಲಕಾರಿಯಾಗಿದೆ. ಆರು ವರ್ಷಗಳ ಹಿಂದೆ ಸಾ.ರಾ.ಮಹೇಶ್ ಅವರ ದಟ್ಟಗಳ್ಳಿಯ ತೋಟಕ್ಕೆ ಕೋತಿಗಳ ಹಿಂಡು ಬಂದಿತ್ತು. ಅದರಲ್ಲಿ ಒಂದು ಮರಿಯೂ ಇತ್ತು. ಅದು ಆಕಸ್ಮಿಕವಾಗಿ ಗುಂಪಿನಿಂದ ಬೇರ್ಪಟ್ಟು ತೋಟದಲ್ಲೇ ಉಳಿದುಕೊಂಡಿತ್ತು. ಅದನ್ನು ಗಮನಿಸಿದ ಸಾ.ರಾ. ಮಹೇಶ್, ಆ ಮರಿಯನ್ನು ಪ್ರೀತಿಯಿಂದ ಎತ್ತಿಕೊಂಡು ಮೈದಡವಿದರು. ಅದು ಕೂಡ ಯಾವುದೇ ಪ್ರತಿರೋಧ ತೋರಲಿಲ್ಲ. ಹಾಗಾಗಿ ಅವರೇ ಆ ಮರಿಯನ್ನು ಸಾಕುವುದಕ್ಕೆ ನಿರ್ಧರಿಸಿದರು. ಅದಕ್ಕೆ ಚಿಂಟು ಎಂಬ ಹೆಸರನ್ನೂ ಇಟ್ಟರು.

ಮಾಜಿ ಸಚಿವ ಸಾ.ರಾ.ಮಹೇಶ್ ಅವರು ತಮ್ಮ ದಿನ ನಿತ್ಯದ ಕಾರ್ಯಕ್ರಮ ರದ್ದು ಮಾಡಿ ಮೈಸೂರಿನ ಮನೆಯಲ್ಲೇ ಇದ್ದರೆ, ದಿನಕ್ಕೆ ಒಂದು ಬಾರಿಯಾದರೂ ಚಿಂಟುವಿನೊಂದಿಗೆ ಸಮಯ ಕಳೆಯುವುದನ್ನು ರೂಢಿಸಿಕೊಂಡಿದ್ದರು. ಚಿಂಟು (ಕೋತಿ) ಕೂಡ ಸಾ.ರಾ.ಮಹೇಶ್ ಅವರನ್ನು ಬಿಟ್ಟಿರುತ್ತಿರಲಿಲ್ಲ. ಅಲ್ಲದೆ ಯಾರಾದರೂ ಸಾ.ರಾ.ಮಹೇಶ್ ಅವರನ್ನು ಮುಟ್ಟಿ ಗುರ್ ಎಂದು ಮೇಲೆರಗುತ್ತಿತ್ತು. ಅಷ್ಟರ ಮಟ್ಟಿಗೆ ಸಾ.ರಾ.ಮಹೇಶ್ ಅವರ ಮೇಲೆ ಚಿಂಟು(ಕೋತಿ) ಪ್ರೀತಿ ಇತ್ತು.

ವಿದ್ಯುತ್ ಶಾಕ್‌ನಿಂದ ಅಸುನೀಗಿದ್ದ ಚಿಂಟು: ಆರು ವರ್ಷಗಳ ಹಿಂದೆ ಚಿಂಟು ಜಮೀನಿನಲ್ಲಿ ಆಟವಾಡುವಾಗ ಆಕಸ್ಮಿಕವಾಗಿ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಿತ್ತು. ಆಗ ಶಾಸಕರಾಗಿದ್ದ ಸಾ.ರಾ. ಮಹೇಶ್, ದುಬೈ ಪ್ರವಾಸದಲ್ಲಿದ್ದರು. ವಿಚಾರ ಗೊತ್ತಾಗುತ್ತಿದ್ದಂತೆ ಪ್ರವಾಸ ಮೊಟಕುಗೊಳಿಸಿ ಮೈಸೂರಿಗೆ ಆಗಮಿಸಿ ತಮ್ಮ ಜಮೀನಿನಲ್ಲೇ ಚಿಂಟುವಿನ ಅಂತ್ಯಕ್ರಿಯೆಯನ್ನು ನಡೆಸಿದರಲ್ಲದೆ, ಚಿಂಟುಗಾಗಿ ಗುಡಿಯನ್ನೂ ಕಟ್ಟಿಸಿದ್ದಾರೆ. ಇದೀಗ ಚಿಂಟುವಿನ 6 ನೇ ವರ್ಷದ ಸ್ಮರಣೆಯನ್ನೂ ಸ್ನೇಹಿತರು, ಹಿತೈಷಿಗಳು, ಅಭಿಮಾನಿಗಳ ಜೊತೆ ಅದ್ದೂರಿಯಾಗಿ ಆಚರಿಸುತ್ತಿದ್ದಾರೆ.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಕೆ.ಮಹದೇವ್, ಅಶ್ವಿನ್ ಕುಮಾರ್, ಜಿ.ಪಂ.ಮಾಜಿ ಉಪಾಧ್ಯಕ್ಷ ಅಡಗೂರು ಚನ್ನಬಸಪ್ಪ, ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ, ಜಿ.ಪಂ.ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಕೆ.ಆರ್.ಕ್ಷೇತ್ರದ ಜಾದಳ ಅಧ್ಯಕ್ಷ ಅಮ್ಮ ಸಂತೋಷ್, ಕೆ.ಆರ್.ನಗರ ತಾಲೂಕು ಜಾದಳ ಅಧ್ಯಕ್ಷ ಹಂಪಾಪುರ ಕುಮಾರ್, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ಯುವ ಜೆಡಿಎಸ್ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರೆ ಕುಚೇಲ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಡಿ.ವಿ.ಗುಡಿ ಯೋಗೇಶ್, ತಾಲೂಕು ದಲಿತ ಮುಖಂಡರಾದ ಹನಸೋಗೆ ನಾಗರಾಜ್, ಜೆಡಿಎಸ್ ಮುಖಂಡರಾದ ಸಾ.ರಾ..ಜಲೇಂದ್ರ, ಬಾಲಾಜಿ ಗಣೇಶ್, ಅನೀಫ್ ಗೌಡ, ಸಿ.ವಿ.ಗುಡಿ ಸಾಗರ್, ಶಂಭು, ಚೌಕಳ್ಳಿ ಆನಂದ್, ಸಾ.ರಾ.ಸ್ನೇಹ ಬಳಗದ ದೀಪು, ತಾಲೂಕು ಜಾದಳ ಮಹಿಳಾ ಘಟಕದ ಅಧ್ಯಕ್ಷೆ ರಾಜಲಕ್ಷ್ಮಿ, ಜಾದಳ ಕಾನೂನು ಸಲಹೆಗಾರ ವಕೀಲ ಅಂಕನಹಳ್ಳಿ ತಿಮ್ಮಪ್ಪ, ಹೊಸಟ್ಟಿ ರಘು, ಹೊಳೆತಂದ್ರೆ ಮಂಜು, ಹೊಸ ಅಗ್ರಹಾರ ಗುರು, ಡೈರಿ ಮಹೇಶ್, ಪ್ರತಾಪ್, ಚಂದು, ನಾರಾಯಣ, ಚಂದ್ರು, ಹೆಬ್ಬಾಳು ಶಂಕರ್, ಹೆಚ್.ಪಿ.ಶಿವಣ್ಣ, ಹಾಗು ವಿವಿದ ಇಲಾಖೆ ಅಧಿಕಾರಿಗಳು, ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಸೇರಿದಂತೆ ಅನೇಕ ನಾನಾ ಗಣ್ಯರು ಪಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




ಮಾಜಿ ಸಚಿವ ಸಾ.ರಾ.ಮಹೇಶ್ ತಮ್ಮ ಅಚ್ಚುಮೆಚ್ಚಿನ ಕೋತಿ ಚಿಂಟುವಿನ ಆರನೇ ವರ್ಷದ ಪುಣ್ಯಸ್ಮರಣೆಯನ್ನು ತಮ್ಮ ಕುಟುಂಬದವರೊಂದಿಗೆ ಆಚರಿಸಿದರು.

ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ



ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿದ್ದ ಹುಣಸೂರು ತಾಲೂಕಿನ ರಂಗಸ್ವಾಮಿ ಅವರು ಸೇವೆಯಿಂದ ನಿವೃತ್ತಿಯಾದ ಹಿನ್ನೆಲೆಯಲ್ಲಿ ಸಂಘದ ಉಪಾಧ್ಯಕ್ಷರಾಗಿರುವ ಶ್ರೀಮತಿ ಜಿ.ಎಸ್.ಜ್ಯೋತಿ ಅವರು ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ್ ಸೇರಿದಂತೆ ಇತರರು ಈ ವೇಳೆ ಉಪಸ್ಥಿತರಿದ್ದರು.

ಚಂದ್ರಪ್ಪ ನಿಧನ



ತಿ.ನರಸೀಪುರ, ಜ.1– ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷರಾದ ಕೆ.ಎನ್.ಪುಟ್ಟಬುದ್ಧಿಯವರ ಹಿರಿಯ ಸಹೋದರ ಕೀಳನಪುರ ಗ್ರಾಮದ ಕೆ.ಎನ್.ಚಂದ್ರಪ್ಪ (96) ನಿಧನರಾದರು.

ಮೃತರು ಪತ್ನಿ, ಮಕ್ಕಳಾದ ಮಾಜಿ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ಕೆ.ಸಿ.ಮಂಜುನಾಥ್ ಮತ್ತು ಪ್ರಥಮ ದರ್ಜೆ ಗುತ್ತಿಗೆದಾರರಾದ ಕೆ.ಸಿ.ಶಿವಕುಮಾರಸ್ವಾಮಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ (ಶುಕ್ರವಾರ) ಕೀಳನಪುರದ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಭೀಮ ಕೋರೆಗಾಂವ್ 208ನೇ ವಿಜಯೋತ್ಸವ

ಧರ್ಮ ಮನುಷ್ಯನ ಪರ ಇರಬೇಕಿತ್ತು; ಆದರೆ ಮನುಷ್ಯನೇ ಧರ್ಮಕ್ಕೆ ಮಾರಾಟವಾಗಿದ್ದಾನೆ; ಬರಗೂರು ರಾಮಚಂದ್ರಪ್ಪ ವಿಷಾದ


ಸಾಹಿತಿ ಬರಗೂರು ರಾಮಚಂದ್ರಪ್ಪ ವಿಜಯ ಸ್ತಂಭಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಜ.1(ವಿವಿಹೆಚ್)– ಪುರೋಹಿತ ಮತ್ತು ಬಂಡವಾಳ ಶಾಹಿ ಈ ಎರಡೂ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಅಂದು ಕೋರೆಗಾಂವ್ ಸೈನಿಕರು ಪೇಶ್ವೆಗಳ ವಿರುದ್ಧ ಆತ್ಮಸ್ಥೈರ್ಯದಿಂದ ಹೋರಾಡಿದ ಹಾಗೆ ನಾವು ಹೋರಾಡಬೇಕಿದೆ ಎಂದು ಹಿರಿಯ ಚಿಂತಕ, ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಅಶೋಕಪುರಂ ಜಯನಗರದ ರೈಲ್ವೆ ಗೇಟ್ ಹತ್ತಿರದ ಭೀಮ ಕೋರೆಗಾಂವ್ ವಿಜಯಸ್ತಂಭದ ಮುಂಭಾಗ ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ 208ನೇ ವರ್ಷದ ಸಂಭ್ರಮಾಚರಣೆ ಹಾಗೂ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾಜಿಕ, ಆರ್ಥಿಕ, ರಾಜಕೀಯ ಶೋಷಣೆ ಸಂದರ್ಭದಲ್ಲಿ ನಾವಿದ್ದೇವೆ. ಮಾನವತವಾದ ಕುರಿತು ಮಾತನಾಡುವ ಸಂದರ್ಭದಲ್ಲಿ ಧಾರ್ಮಿಕ ಮೂಲಭೂತವಾದ, ಜಾತಿವಾದ ಮುನ್ನೆಲೆಗೆ ಬರುತ್ತಿವೆ. ಧರ್ಮ ಮನುಷ್ಯರ ಪರ ಇರಬೇಕು. ಆದರೆ ಮನುಷ್ಯನೇ ತನ್ನನ್ನು ಧರ್ಮಕ್ಕೆ ಮಾರಾಟ ಮಾಡಿಕೊಳ್ಳುತ್ತಿದ್ದಾನೆ. ಈ ಬಗ್ಗೆ ಅಂಬೇಡ್ಕರ್ ಅವರು ಬಹಳ ಹಿಂದೆಯೇ ಧರ್ಮ ಇರುವುದು ಮನುಷ್ಯರಿಗಾಗಿ ಆದರೆ ಮನುಷ್ಯ ಇರುವುದು ಧರ್ಮಕ್ಕಾಗಿ ಅಲ್ಲ ಎಂದು ಹೇಳಿದ್ದರು.

ಒಗ್ಗಟ್ಟು ಅನಿವಾರ್ಯ: ಚಲನಶೀಲ ಸಮಾಜದಲ್ಲಿ ದಲಿತರ ಮೇಲಿನ ಶೋಷಣೆ ನಿಲ್ಲುತ್ತಿಲ್ಲ. ಇಂದಿನ ಕಾಲಘಟ್ಟದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಿದ್ದರೂ ಮೌಢ್ಯಕ್ಕೆ ತುತ್ತಾಗುತ್ತಿದ್ದಾರೆ. ವರದಿಯೊಂದರ ಪ್ರಕಾರ ಪ್ರತಿ 18 ನಿಮಿಷಕ್ಕೆ ಒಬ್ಬ ದಲಿತನ ಮೇಲೆ ದೌರ್ಜನ್ಯ ನಡೆಯುತ್ತದೆ. ಒಂದು ವಾರಕ್ಕೆ 13 ಜನ ದಲಿತರ ಹತ್ಯೆಯಾಗುತ್ತಿದೆ. ದಿನಕ್ಕೆ 86 ಜನ ಮಹಿಳೆಯರ ಮೇಲೆ ಅತ್ಯಾಚಾರ ಎಸಗಲಾಗುತ್ತಿದ್ದು, ಅದರಲ್ಲಿ 10 ಜನ ದಲಿತರಾಗಿರುತ್ತಾರೆ. ಇಂತಹ ಅಮಾನವೀಯ ಆಚರಣೆಯೇ ಅಸ್ಪೃಶ್ಯತೆಯಾಗಿದೆ. ಧರ್ಮ–ಧರ್ಮಗಳು ಧ್ರುವೀಕರಣಗೊಳ್ಳುತ್ತಿರುವ ಕಾಲದಲ್ಲಿ ಶೋಷಣೆಯ ಸ್ವರೂಪ ಬದಲಾಗಿರುವ ಕಾಲದಲ್ಲಿ ಒಗ್ಗಟ್ಟು ಬಹಳ ಮುಖ್ಯ ಎಂದು ಸಲಹೆ ನೀಡಿದರು.

1818ರಂತೆ ಶೋಷಣೆಯ ಸಮಾಜವಿಲ್ಲ. 70–80ರ ದಶಕದಲ್ಲಿ ವರ್ಣಾಶ್ರಮ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿದ್ದೆವು. ಆದರೆ ಪ್ರಸ್ತುತ ಶೂದ್ರ, ಶೋಷಿತರಲ್ಲಿಯೇ ಶ್ರೇಣೀಕರಣ ಇದೆ. ಸಾಮಾಜಿಕ ಶ್ರೇಣೀಕರಣ ಅನೇಕ ಸ್ತರ ಪಡೆದಿದ್ದು, ಈ ವಾಸ್ತವ ಅರ್ಥೈಸಿಕೊಳ್ಳಬೇಕು. ಇಲ್ಲದಿದ್ದರೆ 70ರ ದಶಕದಲ್ಲೇ ಉಳಿದು, ಚಲನಶೀಲ ಸಮಾಜವನ್ನು ಎದುರಿಸಲಾಗದ ಸ್ಥಿತಿ ನಿರ್ಮಾಣವಾಗುತ್ತದೆ ಎಂದು ಹೇಳಿದರು.

20ನೇ ಶತಮಾನ ಸಂಘಟನೆಯ ಕಾಲವಾಗಿತ್ತು. 21ನೇ ಶತಮಾನ ಬಹುತೇಕ ವಿಘಟನೆಯ ಕಾಲವಾಗಿಬಿಟ್ಟಿದೆ. ಕೋರೆಗಾಂವ್ ವಿಜಯಸ್ತಂಭವು ಸಾಮಾಜಿಕ ಹಾಗೂ ದಮನಿತರ ಧ್ರುವೀಕರಣಕ್ಕೆ ಪ್ರೇರಣೆ ನೀಡಿತ್ತು. ಆದರೆ ಪ್ರಸ್ತುತ ಧಾರ್ಮಿಕ ಧ್ರುವೀಕರಣ ಹೆಚ್ಚಾಗಿ, ಸಾಮಾಜಿಕ ಶ್ರೇಣಿ ವ್ಯವಸ್ಥೆ ಬದಲಾಗಿದೆ. ಚಾರಿತ್ರಿಕ ಘಟನೆಗಳಿಗೆ ಇತಿಹಾಸದ ಕಾರಣಕ್ಕಾಗಿ ಗೌರವ ನೀಡಿ, ಅದರಿಂದ ಪ್ರೇರಣೆ ಪಡೆಯಬೇಕು. ಅದರೊಂದಿಗೆ ಸಮಕಾಲೀನ ಪ್ರಜ್ಞೆ ಹಾಗೂ ವಿವೇಕದ ಮೂಲಕ ಕ್ರಿಯಾಶೀಲರಾಗಬೇಕು ಎಂದರು.

ದೇಶದಲ್ಲಿ ಸಾಮಾಜಿಕ ಶೋಷಣೆಯೊಂದಿಗೆ ಆರ್ಥಿಕ

> ಅಶೋಕಪುರಂ ಹೆಬ್ಬಾಗಿಲಿನಲ್ಲಿ ಬೌದ್ಧ ಸಮ್ಮೇಳನ ನಡೆದ ಸ್ಮರಣಾರ್ಥ 5 ಲಕ್ಷ ವೆಚ್ಚದಲ್ಲಿ ಅಶೋಕ ವಿಜಯಸ್ತಂಭ ಸ್ಥಾಪಿಸಲಾಗುವುದು.
> -ಪುರುಷೋತ್ತಮ್, ಮಾಜಿ ಮೇಯರ್

ಶೋಷಣೆ ದಿನೇದಿನೆ ಹೆಚ್ಚಾಗುತ್ತಿದೆ. ದೇಶದಲ್ಲಿ 74,293 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 24ಕ್ಕೂ ಅಧಿಕ ಬುಡಕಟ್ಟು ಕುಟುಂಬಗಳು ವಾಸ ಮಾಡುತ್ತಿವೆ. ದೇಶಾದ್ಯಂತ ಶೇ 29.9 ಜನರಿಗೆ ಸ್ವಂತ ಭೂಮಿ ಇಲ್ಲ, ಶೇ 51 ಕೂಲಿ ಕಾರ್ಮಿಕರು ಇದ್ದಾರೆ. ಅವರ ಮೇಲೆ ಆರ್ಥಿಕ ಶೋಷಣೆಯಾಗುತ್ತಿದೆ. ದೇಶದ ಶೇ 60ರಷ್ಟು ಸಂಪತ್ತನ್ನು ಶೇ 1ರಷ್ಟು ಜನ ಅನುಭವಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ದೇಶ ಆರ್ಥಿಕತೆಯಲ್ಲಿ ನಾಲ್ಕನೇ ಸ್ಥಾನಮಾನ ಪಡೆದಿದೆ ಎಂದು ಬಿಂಬಿಸಲಾಗುತ್ತಿದೆ ಎಂದು ತಿಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮಹಾರ್ ಸೈನಿಕರ ಹೋರಾಟದ ಗೆಲುವನ್ನು ನಮ್ಮ ಮನೆಯ ಹಬ್ಬ ಎಂಬಂತೆ ಆಚರಿಸಬೇಕು. ಇದು ರಾಜಕೀಯ, ಅಧಿಕಾರ, ಹಣ, ಹೆಣ್ಣಿಗಾಗಿ ನಡೆದಿಲ್ಲ. ಬದಲಾಗಿ ಸ್ವಾಭಿಮಾನ, ಅಸ್ತಿತ್ವಕ್ಕಾಗಿ ನಡೆದ ಮಹಾಕಾಳಗ ಎಂದರು.

ನಾವು ಮತದಾನ ಮಾಡಿ ನಾಯಕರನ್ನು ಆರಿಸುತ್ತಿದ್ದೇವೆ, ಹೆಚ್ಚು ಮತದಾನ ಮಾಡುವ ನಾವು, ಮುಖ್ಯಮಂತ್ರಿ ಸ್ಥಾನಕ್ಕೆ ಬೇಡುವ ಸ್ಥಿತಿ ಬಂದಿದೆ. ಮಹಾರ್ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ದೊರೆಯಬೇಕು ಎಂದು ಎಚ್ಚರಿಸಿದರು.

ರಂಗಕರ್ಮಿ ಜನಾರ್ಧನ್ ಜನ್ನಿ, ಸಮತಾ ವೇದಿಕೆಯ ರತಿರಾವ್, ಸಮಾಜ ಸೇವಕ ಆರ್.ಸಿ.ಮಹೇಶ್, ಸಮಿತಿ ಅಧ್ಯಕ್ಷ ಎಸ್.ಉಮೇಶ್, ಚೆಸ್ಕಾಂ ಇಇ ಎಸ್.ಬಿ.ಅನಿತಾ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಅಖಂಡ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	3 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತು ರಾಜ್ಯಮಟ್ಟದ ಕವಿಗೋಷ್ಠಿ


ಮೈಸೂರಿನ ನನ್ನವ್ವ ಸಾಂಸ್ಕೃತಿಕ ಕಲಾತಂಡದ ವತಿಯಿಂದ ನಮನ ಕಲಾಮಂಟಪದಲ್ಲಿ ಆಯೋಜಿಸಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತ ರಾಜ್ಯ ಮಟ್ಟದ ಕವಿಗೋಷ್ಠಿಯನ್ನು ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಉದ್ಘಾಟಿಸಿದರು.

ಮೈಸೂರು, ಜ.1(ಜಿಎ)–ಮೈಸೂರಿನ ನನ್ನವ್ವ ಸಾಂಸ್ಕೃತಿಕ ಕಲಾ ತಂಡದ ವತಿಯಿಂದ ನಮನ ಕಲಾಮಂಟಪದಲ್ಲಿ ಆಯೋಜಿಸಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತ ರಾಜ್ಯ ಮಟ್ಟದ ಕವಿಗೋಷ್ಠಿಯನ್ನು ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ ಅನ್ನ, ಅಕ್ಷರ, ಸಾಹಿತ್ಯ, ನೃತ್ಯ, ಕೃಷಿ, ಕಾರ್ಖಾನೆಗಳು ಸೇರಿದಂತೆ ಎಲ್ಲಾ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಅದನ್ನು ನಾವು ಉಳಿಸಿಕೊಂಡು ಹೋಗಬೇಕಿದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಾಹಿತ್ಯ ಉಳಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅವರಿಂದಲೇ ಆರಂಭವಾಯಿತು. ಅದು ಇಂದು ಹೆಮ್ಮರವಾಗಿ ಬೆಳದಿದ್ದು, ಅಲ್ಲಿಗೆ ನಾನು ಎರಡು ಬಾರಿ ಅಧ್ಯಕ್ಷನಾಗಿ ಆಯ್ಕೆಯಾಗಿರುವುದು ನನ್ನ ಸೌಭಾಗ್ಯ. ಆಂಗ್ಲ ಭಾಷೆ ಸಾಹಿತ್ಯ ಕಣ್ಣು ಬಿಡುವ ಸಂದರ್ಭದಲ್ಲಿ ಕನ್ನಡದಲ್ಲಿ ಮಹಾನ್ ಗ್ರಂಥಗಳು ಮೂಡಿದ್ದವು. ಅದನ್ನು ಉಳಿಸುವ ನಿಟ್ಟಿನಲ್ಲಿ ಸಾಹಿತ್ಯಕ್ಕೆ ವಿಶೇಷ ಕೊಡಗೆಯನ್ನು ಮಹಾರಾಜರು ನೀಡಿದ್ದಾರೆ ಎಂದು ಸ್ಮರಿಸಿದರು.

ಜಯ ಚಾಮರಾಜೇಂದ್ರ ಒಡೆಯರ್ ಅವರು ಸಹ ಸಾಹಿತ್ಯ ಪರಿಷತ್ತಿಗೆ ದೇಣಿಗೆ ನೀಡಿದ್ದಾರೆ. ಈವರೆಗೂ ಪರಿಷತ್‌ನಿಂದ 15 ಸಾವಿರಕ್ಕೂ ಅಧಿಕ ಕೃತಿಗಳನ್ನು ಬಿಡುಗಡೆ ಮಾಡಲಾಗಿದ್ದು, ಕಡಿಮೆ ಬೆಲೆಗೆ ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜು ವಿ.ಭೈರಿ, ನಿವೃತ್ತ ಶಿಕ್ಷಕ ಡಾ.ನಾ.ಗಂಗಾಧರಪ್ಪ, ಶಿಕ್ಷಣ ಇಲಾಖೆ ನಿವೃತ್ತ ಸಹಕಾಯಕ ನಿರ್ದೇಶಕ ಶ್ರೀಕಂಠೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅಧಿಕಾರ ಸ್ವೀಕಾರ


ಮೈಸೂರಿನ ನಜರ್‌ಬಾದ್‌ನಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಗುರುವಾರ ನೂತನ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅಧಿಕಾರ ವಹಿಸಿಕೊಂಡರು. ಈ ವೇಳೆ ಎಎಸ್‌ಪಿ ಸಿ.ಮಲ್ಲಿಕ್ ಹೂಗುಚ್ಛ ನೀಡಿ ಅವರನ್ನು ಸ್ವಾಗತಿಸಿದರು.

ಜ.4ರ 'ಚಾಮುಂಡಿಬೆಟ್ಟಕ್ಕೆ ನಡಿಗೆ' ಜಾಗೃತಿ ಜಾಥಾ ಬೆಂಬಲಿಸಲು ಮನವಿ


ರಂಗರಾಜು

ಮೈಸೂರು,ಜ.1(ಪಿಎಂ)– ಚಾಮುಂಡಿ ಬೆಟ್ಟ ಸ್ವಾಭಾವಿಕ, ಸಾಂಸ್ಕೃತಿಕ ಹಾಗೂ ಜೀವವೈವಿಧ್ಯಮಯ ಪಾರಂಪರಿಕ ಪ್ರದೇಶ. ಅದನ್ನು ಅಂತೆಯೇ ಸಂರಕ್ಷಣೆ ಮಾಡಬೇಕಿದ್ದು, ಈ ನಿಟ್ಟಿನಲ್ಲಿ ಜ.4ರಂದು ಬೆಳಗ್ಗೆ 7.30ಕ್ಕೆ 'ಚಾಮುಂಡಿಬೆಟ್ಟಕ್ಕೆ ನಡಿಗೆ' ಶೀರ್ಷಿಕೆಯಡಿ ಏರ್ಪಡಿಸಿರುವ ಜಾಗೃತಿ ಜಾಥಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಾಗರಿಕರು ಪಾಲ್ಗೊಂಡು ಬೆಂಬಲಿಸಬೇಕೆಂದು ಮೈಸೂರು ಜಿಲ್ಲಾ ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯ ಡಾ.ಎನ್.ಎಸ್. ರಂಗರಾಜು ಮನವಿ ಮಾಡಿದ್ದಾರೆ.

ಮೈಸೂರು ನಗರಕ್ಕೆ ಚಾಮುಂಡಿಬೆಟ್ಟ ಸ್ವಾಭಾವಿಕ ಹಾಗೂ ಪ್ರಾಕೃತಿಕ ಕೊಡುಗೆಯಾಗಿದ್ದು, ಇದು ಅನೇಕ ಕಲ್ಲುಬಂಡೆಗಳಿಂದ ಕೂಡಿರುವ ಜೀವವೈವಿಧ್ಯತೆಯ ತಾಣವಾಗಿದೆ. ಇಲ್ಲಿ ಸಾವಿರಾರು ಸಸ್ಯಗಳು, ನೂರಾರು ಪಕ್ಷಿ, ಪ್ರಾಣಿಗಳು ಮಾತ್ರವಲ್ಲದೆ, ವಿವಿಧ ಬಗೆಯ ಚಿಟ್ಟೆಗಳ ಆಶ್ರಯತಾಣವಾಗಿದೆ. ಇಲ್ಲಿ ಮೊದಲ ಬಾರಿಗೆ ಗಂಗರು ಮಹಾಬಲೇಶ್ವರ ದೇವಾಲಯವನ್ನು ಕ್ರಿ.ಶ. 950ರಲ್ಲಿ ನಿರ್ಮಿಸಿ ಶಾಸನವನ್ನು ಹಾಕಿಸಿ 'ಮಹಾಬಲೇಶ್ವರ ಬೆಟ್ಟ' ಎಂದು ಕರೆದಿದ್ದು, ಈ ದೇವಾಲಯ ಸಂರಕ್ಷಣಾ ಕಾರ್ಯಗಳಿಂದ ಇಂದಿಗೂ ಸುರಕ್ಷಿತವಾಗಿದೆ. ಈವರೆಗೂ ಬೆಟ್ಟದಲ್ಲಿ 29 ಶಾಸನಗಳು ದೊರಕಿವೆ.

ಮೈಸೂರು ಜಿಲ್ಲೆಯ ಗೆಜೆಟಿಯರ್ ಪ್ರಕಾರ ಚಾಮರಾಜ ಒಡೆಯರ್ (1572–76) ಅವರು ತಮ್ಮ ಪತ್ನಿ ಜೊತೆಯಲ್ಲಿ ಬೆಟ್ಟಕ್ಕೆ ಬಂದಿದ್ದ ವೇಳೆ ಅವರ ತಲೆಗೆ ಸಿಡಿಲು ಬಡಿದು ಕೂದಲು ಮಾತ್ರ ಸುಟ್ಟು ಹೋಗಿದ್ದು ಬಿಟ್ಟರೆ ಬೇರೆ ಯಾವುದೇ ಅನಾಹುತವಾಗಿಲ್ಲ. ಈ ಘಟನೆಯ ನಂತರದಲ್ಲಿ ಬೆಟ್ಟದಲ್ಲಿ ಧಾರ್ಮಿಕ ಕಾರ್ಯಗಳು ಹಾಗೂ ಆಚರಣೆಗಳು ಹೆಚ್ಚು ನಡೆಯಲು ಪ್ರಾರಂಭಗೊಂಡು ಮೈಸೂರಿನ ಕೊನೆಯ ರಾಜ ಜಯಚಾಮರಾಜ ಒಡೆಯರ್ ಅವರ ಕಾಲದವರೆಗೂ ಮಾತ್ರವಲ್ಲದೆ, ಪ್ರಸ್ತುತದಲ್ಲೂ ಚಾಲ್ತಿಯಲ್ಲಿವೆ.

ಇಂತಹ ಪರಂಪರೆಯುಳ್ಳ ಬೆಟ್ಟ ಇಂದು ಧಾರ್ಮಿಕತೆಯ ಹೆಸರಿನಲ್ಲಿ ಪ್ರವಾಸೋದ್ಯಮ, ವಾಣಿಜ್ಯ ಕೇಂದ್ರೀತವಾಗಿ ಹಾಗೂ ಧಾರ್ಮಿಕವಲ್ಲದ ಇತರೆ ಚಟುವಟಿಕೆಗಳಿಂದ ತನ್ನ ಮೂಲ ಪ್ರಾಕೃತಿಕ ಸ್ವರೂಪವನ್ನು ಕಳೆದುಕೊಳ್ಳುವತ್ತ ಸಾಗಿದೆ. ರಾಜ್ಯ ಸರ್ಕಾರ ಶ್ರೀ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದ್ದರೂ ಅದಕ್ಕೆ ತಜ್ಞರನ್ನು ಸದಸ್ಯರನ್ನಾಗಿ ನೇಮಿಸಿಲ್ಲ. ಯಾವುದೇ ಸಂರಕ್ಷಣೆಯ ಕಾರ್ಯಗಳು ನಡೆಯುತ್ತಿಲ್ಲ. ನಿಯಂತ್ರಣವಿಲ್ಲದೆ ಕಟ್ಟಡಗಳು ನಿರ್ಮಾಣಗೊಳ್ಳುತ್ತಿವೆ ಎಂದು ಪ್ರಕಟಣೆಯಲ್ಲಿ ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಸುರಕ್ಷಿತ ಹೊಸ ವರ್ಷಾಚರಣೆ; ಮೈಸೂರು ಪೊಲೀಸ್ ಆಯುಕ್ತರ ಧನ್ಯವಾದ



ಮೈಸೂರು, ಜ.1– ಮೈಸೂರು ನಾಗರಿಕರ ಸಹಕಾರದಿಂದಾಗಿ ಸುರಕ್ಷಿತ ಹೊಸ ವರ್ಷಾಚರಣೆ ಸಾಧ್ಯವಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಈ ಸಂಬಂಧ ಮೈಸೂರು ನಗರ ಪೊಲೀಸ್ ಫೇಸ್‌ಬುಕ್ ಪೇಜ್‌ನಲ್ಲಿ ಸಂತಸ ಹಂಚಿಕೊಂಡಿರುವ ಅವರು, ಸುರಕ್ಷಿತ ಹೊಸ ವರ್ಷಾಚರಣೆಗೆ ಕಾರಣರಾದ ಎಲ್ಲಾ ನಾಗರಿಕರಿಗೆ ಹೃತ್ಪೂರ್ವಕ ಧನ್ಯವಾದಗಳು ಎಂದಿದ್ದಾರೆ.

ನಿಮ್ಮ ಜವಾಬ್ದಾರಿಯುತ ನಡೆ, ಸಂಚಾರ ನಿಯಮಗಳ ಪಾಲನೆ ಹಾಗೂ ಪೊಲೀಸ್ ಇಲಾಖೆಗೆ ನೀಡಿದ ಉತ್ತಮ ಸಹಕಾರದ ಫಲವಾಗಿ, ಹೊಸ ವರ್ಷವನ್ನು ಶಾಂತಿಯುತ ಮತ್ತು ಸುರಕ್ಷಿತವಾಗಿ ಸ್ವಾಗತಿಸಲು ಸಾಧ್ಯವಾಯಿತು. ಇದು ಮೈಸೂರು ನಾಗರಿಕರ ಶಿಸ್ತು ಮತ್ತು ಜಾಗೃತಿಯ ಪ್ರತಿಬಿಂಬವಾಗಿದೆ. ಇದೇ ಸಹಕಾರ ಮತ್ತು ಜವಾಬ್ದಾರಿಯೊಂದಿಗೆ ನಮ್ಮೊಂದಿಗೆ ಕೈ ಜೋಡಿಸಿ, ನಗರವನ್ನು ಇನ್ನಷ್ಟು ಸುರಕ್ಷಿತ, ಶಿಸ್ತುಬದ್ಧ ಹಾಗೂ ಮಾದರಿ ನಗರವನ್ನಾಗಿ ರೂಪಿಸೋಣ ಎಂದು ಮನವಿ ಮಾಡಿದ್ದಾರೆ.

ನಗರಾದ್ಯಂತ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಡ್ರಂಕ್ ಅಂಡ್ ಡ್ರೈವ್ ತಪಾಸಣೆಗೆ ಆದ್ಯತೆ ನೀಡಲಾಗಿತ್ತು. ನಿರಂತರವಾಗಿ ಗಸ್ತು ಮಾಡಲು ತಂಡಗಳನ್ನು ರಚಿಸಲಾಗಿತ್ತು. ಪೊಲೀಸರ ಕಾರ್ಯಕ್ಷಮತೆಯಿಂದಾಗಿ ನಗರದಲ್ಲಿ ಯಾವುದೇ ತೀವ್ರ ಸ್ವರೂಪದ ಅಹಿತಕರ ಘಟನೆಗಳು ನಡೆದಿಲ್ಲ ಎಂದು ಅವರು ತಿಳಿಸಿದ್ದಾರೆ.

ಹೊಸ ವರ್ಷದ ಮುನ್ನ ದಿನ ಐದು ಲಕ್ಷ ಮೌಲ್ಯದ ಮಾದಕ ವಸ್ತು ವಶ; ನಾಲ್ವರ ಬಂಧನ

ಮೈಸೂರು, ಜ.1– ಹೊಸ ವರ್ಷದ ಮುನ್ನ ದಿನ ಮೈಸೂರಿನಲ್ಲಿ ಸುಮಾರು ಐದು ಲಕ್ಷ ಮೌಲ್ಯದ ಎಂಡಿಎಂಎ ವಶಪಡಿಸಿಕೊಂಡು, ನಾಲ್ವರನ್ನು ಬಂಧಿಸಲಾಗಿದೆ.

ಆಲನಹಳ್ಳಿ ಠಾಣೆ ಹಾಗೂ ಸಿಸಿಬಿ ಪೊಲೀಸರ ಜಂಟಿ ಕಾರ್ಯಾಚರಣೆಯಲ್ಲಿ ರಾಜೀವ್‌ನಗರದ ನಯಾಜ್ ಪಾಷಾ (29), ವೆಂಕಟೇಶ್ವರ ಬಡಾವಣೆಯ ನವೀನ್‌ಕುಮಾರ್(36), ಉದಯಗಿರಿಯ ಫರೀದ್ ಪಾಷಾ(25), ಶಾಂತಿನಗರದ ತೌಹಿದ್ ಪಾಷಾ(31)ನನ್ನು ಬಂಧಿಸಿ, 77 ಗ್ರಾಂ 69 ಮಿಲಿ ಎಂಡಿಎಂಎ ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ.

ಆಲನಹಳ್ಳಿ ಪೊಲೀಸ್ ಇನ್ಸ್‌ಪೆಕ್ಟರ್ ಜಿ.ಎಸ್.ಸ್ವರ್ಣ, ಸಬ್‌ಇನ್ಸ್‌ಪೆಕ್ಟರ್ ರಮೇಶ್, ಅಪರಾಧ ವಿಭಾಗದ ಸಿಬ್ಬಂದಿ ಚೇತನ್, ಕಿರಣ್ ರಾಥೋಡ್, ಮಂಜುನಾಥ ಗದಗೈಗೊಳ, ಮಲ್ಲಿಕಾರ್ಜುನ, ಸಿಸಿಬಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಬ್‌ಇನ್ಸ್‌ಪೆಕ್ಟರ್ ಲೇಪಾಕ್ಷ, ಸಿಬ್ಬಂದಿ ದೊಡ್ಡೇಗೌಡ ಹಾಗೂ ಶಿವಣ್ಣ ಬುಧವಾರ(ಡಿ.31) ವಿಶೇಷ ಗಸ್ತಿನಲ್ಲಿದ್ದಾಗ ಸಂಜೆ 5 ಗಂಟೆ ವೇಳೆಯಲ್ಲಿ ಕಾವೇರಿ ಎನ್‌ಕ್ಲೇವ್ ಲೇಔಟ್ ಮುಖ್ಯರಸ್ತೆ ಪಕ್ಕದ ಖಾಲಿ ಜಾಗದಲ್ಲಿ ಬಿಳಿಬಣ್ಣದ ಮಹೀಂದ್ರಾ ಎಕ್ಸ್‌ಯುವಿ ಕಾರು(ಕೆಎ–03, ಎನ್‌ಟಿ–8695) ನಿಂತಿದ್ದನ್ನು ಗಮನಿಸಿ, ಅದರ ಬಳಿ ತೆರಳಿದ್ದಾರೆ.

ಅಷ್ಟರಲ್ಲಿ ಅಲ್ಲಿದ್ದ ಕಾರು ಚಲಿಸಲಾರಂಭಿಸಿದಾಗ ಪೊಲೀಸರು ಅಡ್ಡಗಟ್ಟಿ ನಿಲ್ಲಿಸಿದ್ದಾರೆ. ಈ ವೇಳೆ ಕಾರಿನಲ್ಲಿದ್ದ ನಾಲ್ವರು ಕೆಳಗಿಳಿದು ಓಡಲಾರಂಭಿಸಿದ್ದಾರೆ. ಆದರೆ ಪೊಲೀಸರು ಅವರನ್ನು ಬೆನ್ನತ್ತಿ ಹಿಡಿದು, ಪರಿಶೀಲನೆ ನಡೆಸಿದಾಗ ಕಾರಿನ ಡ್ಯಾಷ್ ಬೋರ್ಡ್ ಹಾಗೂ ಓರ್ವನ ಪ್ಯಾಂಟ್‌ನಲ್ಲಿ ಎಂಡಿಎಂಎ ಪತ್ತೆಯಾಗಿದೆ.

ಕಾರು, ಮಾದಕವಸ್ತು ಸಹಿತ ಆರೋಪಿಗಳನ್ನು ವಶಕ್ಕೆ ಪಡೆದು, ಆಲನಹಳ್ಳಿ ಪೊಲೀಸ್ ಠಾಣೆಗೆ ಒಪ್ಪಿಸಲಾಗಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.

ನಿಟ್ಟೆ ಶಿಕ್ಷಣ ಸಂಸ್ಥೆಗಳ ಸಮೂಹ ಅಧ್ಯಕ್ಷ, ಶೈಕ್ಷಣಿಕ ತಜ್ಞ ಎನ್ ವಿನಯ್ ಹೆಗ್ಡೆ ನಿಧನ



ಮಂಗಳೂರು, ಜ.1– ನಿಟ್ಟೆ ವಿಶ್ವವಿದ್ಯಾಲಯದ ಕುಲಪತಿ ಡಾ. ಎನ್.ವಿನಯ ಹೆಗ್ಡೆ ಇಂದು ಗುರುವಾರ ಬೆಳಗಿನ ಜಾವ ನಿಧನರಾಗಿದ್ದಾರೆ. ಅವರಿಗೆ 86 ವರ್ಷ ವಯಸ್ಸಾಗಿತ್ತು.

ರಾಜ್ಯದ ಪ್ರಮುಖ ಶಿಕ್ಷಣ ತಜ್ಞರು, ಉದ್ಯಮಿ ಮತ್ತು ಸಮಾಜ ಸೇವಕರಾಗಿ ಅವರು ಗುರುತಿಸಿಕೊಂಡಿದ್ದಾರೆ. ವಿನಯ ಹೆಗ್ಡೆ ಅವರು ಲೋಕಸಭಾ ಸ್ಪೀಕರ್ ಆಗಿದ್ದ ದಿವಂಗತ ಜಸ್ಟಿಸ್ ಕೆ.ಎಸ್. ಹೆಗ್ಡೆ ಅವರ ಪುತ್ರ.

ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ತಮ್ಮ ಶಿಕ್ಷಣ ಪೂರೈಸಿದವರು. 1979ರಲ್ಲಿ ನಿಟ್ಟೆ ಎಜುಕೇಷನ್ ಟ್ರಸ್ಟ್ ಸ್ಥಾಪಿಸಿದರು. ಇಂದು ನಿಟ್ಟೆ ಶಿಕ್ಷಣ ಸಂಸ್ಥೆಗಳು ಮಂಗಳೂರು, ಬೆಂಗಳೂರು ಮತ್ತು ನಿಟ್ಟೆಯಲ್ಲಿ 40ಕ್ಕೂ ಹೆಚ್ಚು ವಿದ್ಯಾ ಸಂಸ್ಥೆಗಳನ್ನು ಹೊಂದಿವೆ. ಇದರಲ್ಲಿ ವೈದ್ಯಕೀಯ, ಎಂಜಿನಿಯರಿಂಗ್, ದಂತವೈದ್ಯಕೀಯ, ಫಾರ್ಮಸಿ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜುಗಳು ಸೇರಿವೆ.

ಪ್ರಸ್ತುತ ಅವರು ಮಂಗಳೂರಿನ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದರು. ಲೆಮಿನಾ ಸಸ್ಪೆನ್ಷನ್ ಪ್ರೈವೇಟ್ ಲಿಮಿಟೆಡ್ ಸೇರಿದಂತೆ ಲೆಮಿನಾ ಸಮೂಹ ಸಂಸ್ಥೆಗಳ ಸ್ಥಾಪಕ ಅಧ್ಯಕ್ಷರಾಗಿದ್ದಾರೆ. ಇದು ಆಟೋಮೊಬೈಲ್ ಬಿಡಿಭಾಗಗಳ ತಯಾರಿಕೆಯಲ್ಲಿ ಪ್ರಮುಖ ಸಂಸ್ಥೆಯಾಗಿದೆ.

ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ

ಮೈಸೂರಲ್ಲಿ ಪ್ರಗತಿಪರ ಸಂಘಟನೆಗಳ ಪ್ರತಿಭಟನೆ



ಮೈಸೂರಿನ ಗಾಂಧಿಚೌಕದಲ್ಲಿ ಗುರುವಾರ ಪ್ರಗತಿಪರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಮೇಣದಬತ್ತಿ ಹಿಡಿದು ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.1(ಪಿಎಂ)– ಇತ್ತೀಚೆಗೆ ಹುಬ್ಬಳ್ಳಿ ತಾಲೂಕಲ್ಲಿ ನಡೆದ ಮರ್ಯಾದಾ ಹೀನ ಹತ್ಯೆ ಪ್ರಕರಣ ಸೇರಿದಂತೆ ಮಹಿಳಾ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳ ಸಂಬಂಧ ಸರ್ಕಾರವು ನ್ಯಾಯೋಚಿತವಾಗಿ ತನಿಖೆಗೊಳಪಡಿಸಿ ಸಂತ್ರಸ್ತರು, ಮಡಿದವರಿಗೆ ಶೀಘ್ರವಾಗಿ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಸಮತಾ ವೇದಿಕೆ, ಸಮತಾ ಅಧ್ಯಯನ ಕೇಂದ್ರ, ಎಐಎಂಎಸ್‌ಎಸ್, ಧ್ವನಿ ಮಹಿಳಾ ಒಕ್ಕೂಟ, ಐಪ್ವಾ (ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆ), ಪಿಯುಸಿಎಲ್ ಮೈಸೂರು, ಒಡನಾಡಿ ಸಂಸ್ಥೆ ಸೇರಿದಂತೆ ಪ್ರಗತಿಪರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಮೇಣದಬತ್ತಿ ಹಿಡಿದು ಪ್ರತಿಭಟನೆ ನಡೆಸಲಾಯಿತು.

ಸಮತಾ ವೇದಿಕೆಯ ಇ.ರತಿರಾವ್ ಮಾತನಾಡಿ, ಅತ್ಯಾಚಾರಿಗಳ ವಿರುದ್ಧ ಇತ್ತೀಚೆಗೆ ಬೆಳ್ತಂಗಡಿಯಲ್ಲಿ 'ಕೊಂದವರು ಯಾರು' ಶೀರ್ಷಿಕೆಯಡಿ ಮಹಿಳಾ ಸಮಾವೇಶ ಸಹ ಮಾಡಿದ್ದೇವೆ. ಹಲವು ದಶಕಗಳಿಂದ ಧರ್ಮಸ್ಥಳದಲ್ಲಿ ಮಹಿಳೆಯರೂ ಸೇರಿದಂತೆ 400ಕ್ಕೂ ಹೆಚ್ಚು ಕೊಲೆಗಳಾಗಿವೆ. ಈವರೆಗೂ ಈ ಪ್ರಕರಣಗಳಲ್ಲಿ ನ್ಯಾಯ ಸಿಕ್ಕಿಲ್ಲ. ಇತ್ತೀಚೆಗೆ ಹುಬ್ಬಳ್ಳಿ ತಾಲೂಕಿನಲ್ಲಿ ದಲಿತ ಯುವಕನನ್ನು ಮದುವೆಯಾದ ಕಾರಣಕ್ಕೆ 7 ತಿಂಗಳ ಗರ್ಭಿಣಿಯಾಗಿದ್ದ ಮಗಳನ್ನೇ ತಂದೆ ಕೊಲೆ ಮಾಡಿದ್ದಾನೆ. ನಾಗರಿಕ ಸಮಾಜ ಇಂತಹ ಪ್ರಕರಣಗಳ ವಿರುದ್ಧ ಹೋರಾಟ ಮಾಡಬೇಕಿದೆ. ಇಲ್ಲವಾದರೆ ಮಹಿಳೆಯರಿಗೆ ಸುರಕ್ಷತೆ ಇಲ್ಲವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಒಡನಾಡಿ ಸಂಸ್ಥೆಯ ಪರಶು ಮಾತನಾಡಿ, ಎಲ್ಲಾ ವ್ಯವಸ್ಥೆಗಳು ಭ್ರಷ್ಟಾಚಾರದಲ್ಲಿ ಮುಳುಗಿರುವ ಕಾರಣ ಅತ್ಯಾಚಾರಿಗಳಿಗೆ ಭಯ ಎನ್ನುವುದೇ ಇಲ್ಲವಾಗುತ್ತಿದೆ ನ್ಯಾಯದ ಪರವಾಗಿ ಸಮಾಜವೇ ನ್ಯಾಯದಾನ ಕೈಗೆತ್ತಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದೊಂದು ಅವ ಮಾನಕರ ಪರಿಸ್ಥಿತಿ. ಈ ರೀತಿಯ ದುಸ್ಥಿತಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬರಬಾರದಿತ್ತು. ಸಮಾಜ ಪ್ರತಿದಿನ ಆತಂಕದಲ್ಲಿ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕಿಡಿಕಾರಿದರು.

ಪ್ರಗತಿಪರ ಚಿಂತಕ ಉಗ್ರನರಸಿಂಹೇಗೌಡ ಮಾತನಾಡಿ, ನಮ್ಮ ಸಮಾಜದಲ್ಲಿ ಅತ್ಯಾಚಾರ, ಕೊಲೆ, ಹಲ್ಲೆಗಳು ಹೆಚ್ಚುತ್ತಿವೆ. ಹೆಣ್ಣು ಮಕ್ಕಳಿಗೆ ಸುರಕ್ಷತೆ ಇಲ್ಲದ ಸಮಾಜವೆಂದರೆ ಅದು ಅನಾಗರಿಕ ವ್ಯವಸ್ಥೆಯಾಗಲಿದೆ. ಭಾರತ ಇಡೀ ಜಗತ್ತಿಗೆ ಹಲವು ವಿಚಾರಗಳಲ್ಲಿ ಗುರು ಸ್ಥಾನದಲ್ಲಿದೆ ಎಂದು ಹೇಳುತ್ತಾರೆ. ಆದರೆ ನಮ್ಮ ಸಮಾಜದಲ್ಲಿರುವ ಕೊಳಕು, ಕ್ರೌರ್ಯದ ಬಗ್ಗೆ ಕಳೆದ ಒಂದು ದಶಕದಲ್ಲಿ ಇಡೀ ಜಗತ್ತಿಗೆ ಗೊತ್ತಾಗಿದೆ. ಇದರಿಂದ ನಮಗೆ ನಾವೇ ತಲೆ ತಗ್ಗಿಸಿ ವಿಶ್ವ ಸಮುದಾಯದ ಎದುರು ನಿಲ್ಲುವ ದುಸ್ಥಿತಿ ನಿರ್ಮಾಣವಾಗಿದೆ ಎಂದು ಕಿಡಿಕಾರಿದರು.

ಪೊಲೀಸ್ ಇಲಾಖೆಯನ್ನು ಹೆಚ್ಚು ಸಂವೇದನಾಶೀಲತೆಗೊಳಿಸಲು ಸರ್ಕಾರ ಕ್ರಮ ವಹಿಸಬೇಕು. ಕಳೆದ ವಾರವಷ್ಟೇ ಅಂತರ್ಜಾತಿ ಮದುವೆಯಾಗಲು ರಕ್ಷಣೆಗಾಗಿ ತುಮಕೂರಿನಿಂದ ಮೈಸೂರಿಗೆ ಬಂದಿದ್ದ ಜೋಡಿಯೊಂದನ್ನು, ಸರಸ್ವತಿಪುರಂ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ತುಮಕೂರಿಗೆ ವಾಪಸ್ಸು ಕಳುಹಿಸಲು ಹೊರಟ್ಟಿದ್ದರು. ಯುವತಿಯು ಮೇಲ್ಜಾತಿಗೆ ಸೇರಿದ್ದರಿಂದ ಅವರ ಕುಟುಂಬಸ್ಥರಿಗೆ ಅನುಕೂಲ ಮಾಡಿಕೊಡಲು ವಾಪಸ್ಸು ಕಳುಹಿಸಲು ಹೊರಟ್ಟಿದ್ದರು. ನಾನು ಮಧ್ಯಪ್ರವೇಶಿಸಿ ಮೇಲಾಧಿಕಾರಿಗಳಿಗೆ ತಿಳಿಸಿ ಆ ಪೊಲೀಸ್ ಅಧಿಕಾರಿಗೆ ಎಚ್ಚರಿಕೆ ನೀಡಿದ್ದೆ. ಕಾನೂನು ಮೂಲಕವಲ್ಲದೇ ಮನಪರಿವರ್ತನೆಯಿಂದ ಜಾತಿ ವ್ಯವಸ್ಥೆ ನಿರ್ಮೂಲನೆ ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಬಿಹಾ ಭೂಮಿಗೌಡ, ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಬಸವಲಿಂಗಪ್ಪ, ಮುಖಂಡ ಹೆಚ್.ವಾಸು, ರೈತ ಸಂಘದ ಹೊಸಕೋಟೆ ಬಸವರಾಜು, ಹಿರಿಯ ಸಾಹಿತಿ ಹೊರೆಯಾಲ ದೊರೆಸ್ವಾಮಿ, ಪಿಯುಸಿಎಲ್ ಅಧ್ಯಕ್ಷ ಕಮಲ್‌ಗೋಪಿನಾಥ್, ಮಾಜಿ ಅಧ್ಯಕ್ಷ ಪ್ರೊ.ಕಾಳಚೆನ್ನಗೌಡ ವಿವಿಧ ಸಂಘಟನೆಗಳ ಮುಖಂಡರಾದ ಎಂ.ಎನ್.ಸುಮನಾ, ನಾ.ದಿವಾಕರ್, ಕೆ.ಆರ್.ಸುಮತಿ, ಲತಾ ಬಿದ್ದಪ್ಪ, ರೂಪಾ, ವನಜಾಕ್ಷಿ, ಶಭಾನ, ಸವಿತಾ ಮಲ್ಲೇಶ್, ಬಿ.ಎಂ.ಪ್ರವೀಣ್, ಸೀಮಾ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಾಮೂಹಿಕ ಸಮಾಧಿ ಆರೋಪ: 'ಧರ್ಮಸ್ಥಳ ದೇವಾಲಯ'ದಿಂದ ಕೋರ್ಟ್‌ಗೆ ಅರ್ಜಿ ಸಲ್ಲಿಕೆ!



ಬೆಳ್ತಂಗಡಿ, ಜ.1– ಸಾಮೂಹಿಕ ಸಮಾಧಿ ಆರೋಪಕ್ಕೆ ಸಂಬಂಧಿಸಿದಂತೆ ಧರ್ಮಸ್ಥಳ ದೇವಾಲಯದಿಂದ ಕೋರ್ಟ್ ಗೆ ಅರ್ಜಿ ಸಲ್ಲಿಕೆಯಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ದೇವಸ್ಥಾನವನ್ನು ಪ್ರತಿನಿಧಿಸುವ ವಕೀಲರು ಬುಧವಾರ ಬೆಳ್ತಂಗಡಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಸಾಮೂಹಿಕ ಸಮಾಧಿ ಪ್ರಕರಣದಲ್ಲಿ ಸಂತ್ರಸ್ತನ ಸ್ಥಾನದಲ್ಲಿ ಪ್ರತಿನಿಧಿಸಲು ಅನುಮತಿ ನೀಡಬೇಕೆಂದು ಕೋರಿದ್ದಾರೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 2(ವೈ) ಅಡಿಯಲ್ಲಿ ದೇವಸ್ಥಾನದ ಪರವಾಗಿ ವಕೀಲ ಮಹೇಶ್ ಕಜೆ ಅವರು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಾಂಗ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಟಿ.ಎಚ್. ವಿಜಯೇಂದ್ರ ಅವರಿಗೆ ಅರ್ಜಿ ಸಲ್ಲಿಸಿದ್ದಾರೆ.

ದೇವಾಲಯದ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ.ನಾಗೇಶ್, ಮೃತದೇಹಗಳ ಸಾಮೂಹಿಕ ಅಂತ್ಯಸಂಸ್ಕಾರದ ಬಗ್ಗೆ ತನಿಖೆ ನಡೆಸುವಂತೆ ಮಾಜಿ ಸ್ವಚ್ಛತಾ ಕಾರ್ಯಕರ್ತ ಸಿ.ಎನ್.ಚಿನ್ನಯ್ಯ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು ಮತ್ತು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಪ್ರತಿವಾದಿಯಾಗಿ ಹೆಸರಿಸಿದ್ದರು.

ಧರ್ಮಸ್ಥಳ ಪೊಲೀಸರಿಗೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ತಿರಸ್ಕರಿಸಿತ್ತು ಎಂದು ಹೇಳಿದರು. ನ್ಯಾಯಾಲಯದ ಆವರಣದ ಹೊರಗೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ವಕೀಲ ಮಹೇಶ್ ಕಜೆ, ಸಾಮೂಹಿಕ ಸಮಾಧಿ ಪ್ರಕರಣದಲ್ಲಿ ದೇವಾಲಯವು ಸಂತ್ರಸ್ತನಾಗಿ ನ್ಯಾಯಾಲಯದ ವಿಚಾರಣೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು ಎಂದು ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿದರು. ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯ ಜನವರಿ 3ಕ್ಕೆ ಮುಂದೂಡಿದೆ.


ಕರ್ನಾಟಕ ಪ್ರದೇಶ ಕುರುಬರ ಸಂಘದ
ನಿರ್ದೇಶಕರಾದ
ಅಭಿಲಾಷ್ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ರವಿ ಎನ್ ಗೌಡ
ಕಾಂಗ್ರೆಸ್ ಮುಖಂಡರು, ಮೆಲ್ಲಹಳ್ಳಿ,
ವರುಣಾ ವಿಧಾನ ಸಭಾ ಕ್ಷೇತ್ರ


ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರಾದ
ಶ್ರೀ ಅಭಿಲಾಷ್.ಯು ರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ಅಭಿಲಾಷ್ ಸ್ನೇಹ ಬಳಗ
ಬೋಟಿ ಬಜಾರ್ ಮೈಸೂರು
MM77 PRINTS
7760614743